ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಕಾಂ. ಮಹಾಲ್ದ
ಲಾಲ್‌ಸಲಾಂ




ಸಂಪುಟ 11 | ಸಂಚಿಕೆ 50 | ಪುಟ 16 | ಡಿಸೆಂಬರ್ 04–10, 2017 | ರೂ. 10/– web: www.janashakthi.co.in | e-mail : js_weekly@yahoo.com



ನಾಡು-ನುಡಿಗಳ ಬಗ್ಗೆ ಅರ್ಥಪೂರ್ಣ ಸಂವಾದ



ಧರ್ಮ (ರಾಜಕಾರಣದ) ಸಂಸತ್



ಕಟ್ಟಡ ಕಾರ್ಮಿಕರ ಅಹೋರಾತ್ರಿ ಧರಣಿ



ಜಾನುವಾರ ಮಾರಾಟ ನಿಷೇಧ ವಾಪಸು: ರೈತ ಹೋರಾಟದ ಜಯ



'ಮಾತೃಪೂರ್ಣ'ಕ್ಕೆ ಅಂಗನವಾಡಿ ತಾಯಂದಿರ ಹೋರಾಟ

ಬಾಬ್ರಿ ಮಸೀದಿ
ನಾಶದ 25ನೇ ವಾರ್ಷಿಕ :
ಪ್ರತಿಭಟನಾ ದಿನ



ವಿಫಲ ಗುಜರಾತ್ ಮಾದರಿ

ಮೋದಿ ಸರಕಾರದ ವಿರುದ್ಧ ರೈತರ ಪ್ರತಿರೋಧಕ್ಕೆ ಎರಡನೇ ವಿಜಯ

ಜಾನುವಾರು ಮಾರಾಟ ನಿಷೇಧದ ಅಧಿಸೂಚನೆ ವಾಪಾಸ್

ಜಾನುವಾರು ಮಾರುಕಟ್ಟೆ ತೆರೆಯಲು, ಜಾನುವಾರು ಸಾಗಾಣಿಕೆ ಸುರಕ್ಷಿತಗೊಳಿಸಲು ಎಐಕೆಎಸ್ ಆಗ್ರಹ



30 ಜೀವಗಳ ಬಲಿ ತೆಗೆದುಕೊಂಡು ಕೊನೆಗೂ ರೈತರ ಹೋರಾಟಕ್ಕೆ ಮಣಿದ ಸರಕಾರ

ಕೇಂದ್ರ ಸರಕಾರ ಜಾನುವಾರು ಮಾರುಕಟ್ಟೆಯಲ್ಲಿ ವಧೆಗಾಗಿ ಜಾನುವಾರುಗಳ ಮಾರಾಟವನ್ನು ನಿಷೇಧಿಸಿ ಹೊರಡಿಸಿದ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದೆ ಎಂದು ವರದಿಯಾಗಿದೆ. ಇದು ರೈತ–ವಿರೋಧಿ ಮೋದಿ ಸರಕಾರಕ್ಕೆ ರೈತರು ಒಡ್ಡಿರುವ ಪ್ರತಿರೋಧಕ್ಕೆ ಸಿಕ್ಕಿರುವ ಎರಡನೇ ವಿಜಯ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ. ಈ ಹಿಂದೆ ಮೋದಿ ಸರಕಾರ ತನ್ನ ಕುಖ್ಯಾತ ಭೂಸ್ವಾಧೀನ ಮಸೂದೆಯನ್ನು ರೈತರ ದೇಶವ್ಯಾಪಿ ಪ್ರತಿಭಟನೆಯ ನಂತರ ಅದನ್ನು ಅಲ್ಲಿಗೇ ನಿಲ್ಲಿಸಲು ನಿರ್ಧರಿಸಿದಾಗ ರೈತರು ಮೊದಲ ವಿಜಯ ಸಾಧಿಸಿದ್ದರು.

ಇದು ಭಾರತೀಯ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ನೀತಿಗಳನ್ನು ಇನ್ನಷ್ಟು ಗಟ್ಟಿಗೊಳಿಸಲು ನೆರವಾಗುತ್ತದೆ ಎಂದು ಎಐಕೆಎಸ್ ಹೇಳಿದೆ. ಈ ಜಾನುವಾರು ಮಾರಾಟ ನಿಷೇಧದ ಹಿಂದಿರುವ ಕೋಮುವಾದಿ ಮನೋಭಾವದ ವಿರುದ್ಧ ಹೋರಾಟದ ಪರವಾಗಿ ಸಂಸತ್ತು, ನ್ಯಾಯಾಂಗ, ಕಾರ್ಯಾಂಗದಲ್ಲಿ ಮತ್ತು ಮಾಧ್ಯಮಗಳಲ್ಲಿ ಅವಿರತವಾಗಿ ನಿಂತು ಕೇಂದ್ರ ಸರಕಾರ ಅದನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ ಹಾಕಿದ ಎಲ್ಲ ಪ್ರಗತಿಪರ ಶಕ್ತಿಗಳನ್ನು ಅದು ಅಭಿನಂದಿಸಿದೆ.

ಕೇಂದ್ರ ಪರಿಸರ ಮಂತ್ರಾಲಯ ಈ ರೈತ–ವಿರೋಧಿ ನೋಟಿಫಿಕೇಶನ್ ಜಾರಿ ಮಾಡಿದಂದಿನಿಂದ ಎಐಕೆಎಸ್ ಇದರ ವಿರುದ್ಧ ಎಡೆಬಿಡದೆ ಹೋರಾಟಗಳನ್ನು ಆರಂಭಿಸಿತು. ಅದರ ಕರೆಯ ಮೇರೆಗೆ ದೇಶದ ಎಲ್ಲ ಜಿಲ್ಲೆಗಳಲ್ಲಿ ಈ ಅಧಿಸೂಚನೆಯ ಪ್ರತಿಗಳನ್ನು ಸುಡಲಾಯಿತು. ಎಐಕೆಎಸ್ ಭೂಮಿ ಅಧಿಕಾರ್ ಆಂದೋಲನದ ಜತೆಗೂಡಿ ವಿವಿಧ ರಾಜ್ಯಗಳಲ್ಲಿ ಇದರ ವಿರುದ್ಧ ವ್ಯಾಪಕವಾದ ಪ್ರಚಾರಾಂದೋಲನ ನಡೆಸಿತು.

ಸುಪ್ರಿಂ ಕೋರ್ಟಿನಲ್ಲಿ ಎಐಕೆಎಸ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಿಂದಾಗಿ ಈ ಅಧಿಸೂಚನೆಯ ಮೇಲೆ ರಾಷ್ಟ್ರವ್ಯಾಪಿ ತಡೆಯಾಜ್ಞೆ ಬಂತು. ಇದು ಮೋದಿ ಸರಕಾರಕ್ಕೆ ಒಂದು ದೊಡ್ಡ ಆಘಾತವಾಗಿತ್ತು.

ಈ ಅಧಿಸೂಚನೆ ದೇಶದ ಮತ್ತು ಜನಗಳ ಐಕ್ಯತೆಯನ್ನು ದಮನ ಮಾಡುವ ಒಂದು ದೇಶ–ವಿರೋಧಿ ಕ್ರಮವಾಗಿತ್ತು. ದೇಶದ ಜನತೆ ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ತಿರಸ್ಕರಿಸಿದ ರಾಷ್ಟ್ರೀಯವಾದದ ಒಂದು ತಪ್ಪು ಪರಿಕಲ್ಪನೆಯನ್ನು, ಅಂದರೆ ಹಿಂದೂರಾಷ್ಟ್ರದ ಖೋಟಾ ರಾಷ್ಟ್ರೀಯವಾದವನ್ನು ಪ್ರಚಾರ ಮಾಡುತ್ತಿರುವ ಆರೆಸ್ಸೆಸ್ ಪ್ರೇರಿತ ಕ್ರಮ ಇದಾಗಿತ್ತು.

ಇದರ ವಿರುದ್ಧ ಹೋರಾಟ ಜನಗಳನ್ನು ಅವರ ನಂಬಿಕೆ, ಆಹಾರಕ್ರಮಗಳು ಮತ್ತು ಪಾರಂಪರಿಕ ಮೌಲ್ಯವ್ಯವಸ್ಥೆಯಲ್ಲಿನ ಭಿನ್ನತೆಗಳ ಆಧಾರದಲ್ಲಿ ಒಡೆದು ನಾಗರಿಕ ಸಮಾಜವನ್ನು ಕೋಮುಗ್ರಸ್ತಗೊಳಿಸುವ ಆರೆಸ್ಸೆಸ್–ಬಿಜೆಪಿ ನೇತೃತ್ವದ ಕೂಟದ ನೇತೃತ್ವದ ಕೇಂದ್ರ ಸರಕಾರದ ಬಚ್ಚಿಟ್ಟ ಅಜೆಂಡಾವನ್ನು ಹೊರಗೆಳೆಯುವಲ್ಲಿ ನೆರವಾಗಿದೆ. ಜಾನುವಾರು ಸಂಪತ್ತು ರೈತ ಕುಟುಂಬಗಳಿಗೆ ಅವರ 30%ದಷ್ಟು ಆದಾಯವನ್ನು ಕೊಡುತ್ತದೆ. ಇದರಿಂದಾಗಿ ಈ ನಿಷೇಧ ಅವರ ಜೀವನಾಧಾರಗಳವನ್ನು ತೀವ್ರವಾಗಿ ತಟ್ಟಿತು. ಇಂತಹ ಅತ್ಯಂತ ಸಂವೇದನಾಶೂನ್ಯ ನಿರ್ಧಾರವನ್ನು, ಅದೂ ಭಾರತೀಯ ಕೃಷಿ ತೀವ್ರ ಬಿಕ್ಕಟ್ಟಿನಲ್ಲಿದ್ದಾಗ ಕೈಗೊಂಡದ್ದು ರೈತಾಪಿ ಜನಗಳ ಮೇಲಿನ ಒಂದು ನಗ್ನ ದಾಳಿಯಾಗಿತ್ತು. ಇದರ ವಿರುದ್ಧ ಬೇಸಾಯಗಾರರ ಸಮುದಾಯದಲ್ಲಿ ಎದ್ದು ಬಂದ ತೀವ್ರ ಆಕ್ರೋಶ ಅವರು ಆರೆಸ್ಸೆಸ್–ಬಿಜೆಪಿ ಕೂಟದ ವಿರುದ್ಧ ಒಟ್ಟುಗೂಡುವಂತೆ ಮಾಡಿತು.

ನರೇಂದ್ರ ಮೋದಿ ಪ್ರಧಾನ ಮಂತ್ರಿಯಾದಂದಿನಿಂದ, ಇದುವರೆಗೆ ಇಬ್ಬರು ಡೈರಿ ರೈತರು– ಹರ್ಯಾಣದ ನೂಹ್ ಜಿಲ್ಲೆಯ ಪೆಹ್ಲೂ ಖಾನ್ ಮತ್ತು ರಾಜಸ್ತಾನದ ಭರತಪುರ್ ಜಿಲ್ಲೆಯ ಉಮರ್‌ಖಾನ್– ಸೇರಿದಂತೆ 30 ಮಂದಿಯನ್ನು ದೇಶದ ವಿವಿಧ ಭಾಗಗಳಲ್ಲಿ ಜನಜಂಗುಳಿಯ ಹಿಂಸಾಚಾರ ಬಲಿ ತೆಗೆದುಕೊಂಡಿದೆ. ಇವೆಲ್ಲ ಸಂಘ ಪರಿವಾರದ ಸಂಘಟನೆಗಳು 'ಗೋರಕ್ಷಣೆ'ಯ ಮರೆಯಲ್ಲಿ ಹರಿಯಬಿಟ್ಟ ಹಿಂಸಾಚಾರಗಳು ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಪ್ರಧಾನ ಮಂತ್ರಿಗಳು ಎಂದೂ ಈ ಕ್ರೌರ್ಯದ ವಿರುದ್ಧ ದೃಢ ನಿಲುವು ತಳೆಯಲಿಲ್ಲ, ಈ ಅಪರಾಧಿಗಳನ್ನೆಲ್ಲ ಬಂಧಿಸಿ ನಾಡಿನ ಕಾನೂನು ಪ್ರಕಾರ ಶಿಕ್ಷಿಸುವಂತೆ ಮಾಡಲಿಲ್ಲ. ಬದಲಿಗೆ ಈ ಕೊಲೆಗಡುಕರನ್ನು ರಕ್ಷಿಸುವ ಪ್ರಯತ್ನ ನಡೆದಿದೆ, ದಾದ್ರಿಯ ಮಹಮ್ಮದ್ ಅಖ್ಲಾಕ್‌ನ ಕೊಲೆ ಮಾಡಿದವರಿಗೆ ಕೊಟ್ಟಂತೆ ಸಾರ್ವಜನಿಕ ವಲಯದ ಘಟಕಗಳಲ್ಲಿ ಉದ್ಯೋಗ ಕೊಟ್ಟು ಗೌರವಿಸಲಾಗುತ್ತಿದೆ. ಮೋದಿ ಆಳ್ವಿಕೆಯಲ್ಲಿ ಕ್ರಿಮಿನಲ್ ಗ್ಯಾಂಗ್‌ಗಳು ಮುಸ್ಲಿಮರು ಮತ್ತು ದಲಿತರ ಮೇಲೆ ದಾಳಿ ಮಾಡುತ್ತಿವೆ. ಮೋದಿ ರಾಜ್ಯದಲ್ಲಿ ಆರೆಸ್ಸೆಸ್ ಶಾಖೆಗಳು ದೇಶವನ್ನು ಆಳುತ್ತಿವೆ ಎಂದು ಭಾವಿಸುವಂತಾಗಿದೆ. ಇಂತಹ 'ಪ್ರಭುತ್ವ –ಪ್ರಾಯೋಜಿತ ಕಾನೂನುಹೀನತೆ' ಈ ದೇಶದಲ್ಲಿ ಹಿಂದೆಂದೂ ಸಂಭವಿಸಿಲ್ಲ ಎಂದು ಎಐಕೆಎಸ್ ನೆನಪಿಸಿದೆ.

ಎಲ್ಲ ರಾಜ್ಯಸರಕಾರಗಳು ಜಾನುವಾರು ಮಾರುಕಟ್ಟೆಗಳನ್ನು ಮತ್ತೆ ತೆರೆದು, ಅವುಗಳು ಮುಕ್ತವಾಗಿ ಕೆಲಸ ಮಾಡಲು ಹಾಗೂ ಜಾನುವಾರುಗಳನ್ನು ಸುರಕ್ಷಿತವಾಗಿ ಸಾಗಿಸಲು ಅನುವು ಮಾಡಿಕೊಡಬೇಕು ಎಂದು ಕೇಂದ್ರ ಸರಕಾರ ಕಟ್ಟುನಿಟ್ಟಾದ ನಿರ್ದೇಶನ ನೀಡಬೇಕು, ಎಂದು ಎಐಕೆಎಸ್ ಆಗ್ರಹಿಸಿದೆ. ಜಾನುವಾರು ವಧೆಯ ಮೇಲೆ ನಿಷೇಧ ಹಾಕುವ ಶಾಸನ ತಂದಿರುವ ಬಿಜೆಪಿ ನೇತೃತ್ವದ ರಾಜ್ಯ ಸರಕಾರಗಳು ಕಾನೂನನ್ನು ತಿದ್ದುಪಡಿ ಮಾಡಿ ರೈತರಿಗೆ ಮಾರುಕಟ್ಟೆ ಬೆಲೆ ಕೊಟ್ಟು ಅವರ ಅನುತ್ಪಾದಕ ಜಾನುವಾರುಗಳನ್ನು ಖರೀದಿಸುವಂತೆ ಮಾಡುವ ಹಾಗೂ ಬೀಡಾಡಿ ಜಾನುವಾರುಗಳು ರೈತರ ಬೆಲೆಗಳನ್ನು ನಾಶಪಡಿಸದಂತೆ ಅವನ್ನು ರಕ್ಷಿಸಲು ಸಾರ್ವಜನಿಕ ಜಾನುವಾರು ಆಶ್ರಯಗಳನ್ನು ಕೊಡಬೇಕೆನ್ನುವ ತಿದ್ದುಪಡಿಯನ್ನು ಸೇರಿಸಬೇಕು ಎಂದೂ ಎಐಕೆಎಸ್ ಆಗ್ರಹಿಸಿದೆ.

ಗೋರಕ್ಷಣೆಯ ಹೆಸರಲ್ಲಿ ಅಡ್ಡಾಡುತ್ತಿರುವ ಕ್ರಿಮಿನಲ್ ಗ್ಯಾಂಗುಗಳ ಮೇಲೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು, ಇಂತಹ ಕ್ರಿಮಿನಲ್ ಜನಜಂಗುಳಿಗೆ ಬಲಿಯಾದ ಎಲ್ಲರ ಕುಟುಂಬಗಳಿಗೆ ತಲಾ ಒಂದು ಕೋಟಿ ರೂ. ಪರಿಹಾರ ನೀಡಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.



ನ್ಯಾಯಾಲಯ ಹದಿಯಾಳನ್ನು ಕರೆಸಿಕೊಂಡಿತು, ಆಕೆ ಹೇಳಿದ್ದನ್ನು ಕೇಳಿಸಿಕೊಂಡಿತೇ?–ಬೃಂದಾ ಕಾರಟ್

(ನವಂಬರ್ 29ರ 'ದಿ ಹಿಂದು'ನಲ್ಲಿ ಪ್ರಕಟವಾದ Let Hadiya take charge of her life ಲೇಖನದಿಂದ)

ದೂರದ ಕೇರಳದ ವೈಕೊಂನಿಂದ ಹದಿಯಾ ದಿಲ್ಲಿಗೆ ಬಂದಳು. ನನ್ನನ್ನು ಮಾನವಜೀವಿಯಾಗಿ ನೋಡಿ. ನನ್ನ ನಂಬಿಕೆಯನ್ನು ಗೌರವಿಸಿ. ನಾನು ಓದಬೇಕು. ನಾನು ನನ್ನ ಗಂಡನ ಜತೆಗಿರಬೇಕು. ಎಲ್ಲಕ್ಕೂ ಮುಖ್ಯವಾಗಿ ನನಗೆ ನನ್ನ ಸ್ವಾತಂತ್ರ್ಯ ಬೇಕು ಎಂದಳು. ಅವಳ ಬೇಡಿಕೆ ಸ್ಪಷ್ಟವಾಗಿತ್ತು. ಆದರೆ ಸುಪ್ರಿಂ ಕೋರ್ಟ್ ಇದನ್ನು ಕೇಳಿಸಿಕೊಂಡಿದೆಯೇ?

ಇದು ಬೃಂದಾ ಕಾರಟ್, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರು, ದೇಶದ ಮಹಿಳಾ ಆಂದೋಲನದ ಒಬ್ಬ ಹಿರಿಯ ಮುಖಂಡರು ನವಂಬರ್ 27ರಂದು ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಹದಿಯಾಳಿಗೆ ಸಂಬಂಧಪಟ್ಟಂತೆ ನಡೆದ ಕಲಾಪಗಳ ಬಗ್ಗೆ ವಿಮರ್ಶಿಸುತ್ತ ಕೇಳಿರುವ ಪ್ರಶ್ನೆ(ನವಂಬರ್ 29ರಂದು ದಿ ಹಿಂದುನಲ್ಲಿ ಪ್ರಕಟವಾದ ಅವರ ಲೇಖನದಲ್ಲಿ).

ಸುಪ್ರಿಂ ಕೋರ್ಟ್ ಅವಳನ್ನು ಕೇಳಲೆಂದೇ ಅಷ್ಟು ದೂರದಿಂದ ಕರೆಸಿಕೊಂಡಿತ್ತು. ಆದರೂ ಅವಳನ್ನು ಕೇಳಬೇಕೇ ಬೇಡವೇ ಎಂದು ನಿರ್ಧರಿಸಲು ಒಂದೂವರೆ ಗಂಟೆ ಬೇಕಾಯಿತು. ಎನ್‌ಐಎ(ರಾಷ್ಟ್ರೀಯ ತನಿಖಾ ಏಜೆನ್ಸಿ) ಮತ್ತು ಕೇಂದ್ರ ಸರಕಾರದ ವಕೀಲರುಗಳು 'ಲವ್ ಜಿಹಾದ್'ನಲ್ಲಿ ಆಕೆಯ ತಲೆಕೆಡಿಸಿದ್ದಾರೆ. ಸ್ವಂತವಾಗಿ ಯೋಚಿಸುವ ಸಾಮರ್ಥ್ಯ ಅವಳಲ್ಲಿಲ್ಲ, ಆದ್ದರಿಂದ ಅವಳ ಮಾತನ್ನು ಕೇಳುವ ಮೊದಲು ನ್ಯಾಯಾಲಯ ಎನ್‌ಐಎ ಸಲ್ಲಿಸಿರುವ ದಸ್ತಾವೇಜುಗಳನ್ನು ಅಧ್ಯಯನ ಮಾಡಬೇಕು ಎಂದು ವಾದಿಸಿದರು. ಅವಳೆದುರೇ ಅವಳ ಬಗ್ಗೆ, ಅವಳು ಜತೆಗೆ ಬದುಕಲು ಆಯ್ಕೆಮಾಡಿಕೊಂಡಿರುವವನ ಬಗ್ಗೆ ವಾದ–ವಿವಾದ ನಡೆಯಿತು. ಅವಳು ಕ್ರಿಮಿನಲ್ ಏನೂ ಅಲ್ಲ, ಆದರೂ ಅವಳನ್ನು ಹಾಗೆ ಕಾಣಲಾಯಿತು. ಅವಳ ಮಾತು ಕೇಳಬೇಕೇ ಬೇಡವೇ ಎಂದು ಕೋರ್ಟಿಗೆ ಸ್ಪಷ್ಟವಿಲ್ಲದಿದ್ದರೆ ಆಕೆಯನ್ನು ಕರೆಸಿಕೊಂಡದ್ದಾದರೂ ಏಕೆ ಎಂದು ಪ್ರಶ್ನಿಸುವ ಬೃಂದಾ ಅವರು ಹೇಳುವಂತೆ ಅದೃಷ್ಟವಶಾತ್ ಸುಪ್ರಿಂ ಕೋರ್ಟ್ ಖಾಪ್ ಪಂಚಾಯತ್ ಆಗುವುದು ತಪ್ಪಿತು ಎಂದು ನಿಟ್ಟುಸಿರು ಬಿಡುವಂತಾಗಿದೆ.



ಹದಿಯಾಳ ಪತಿ ಶಫಿನ್ ಜಹಾನ್‌ನ ವಕೀಲರ ಮಾತುಗಳಿಂದ ನ್ಯಾಯಾಲಯ ಒಂದು ನಿರ್ಧಾರಕ್ಕೆ ಬರದಿದ್ದಾಗ ಆಕ್ರೋಶಭರಿತರಾದ ಕೇರಳ ರಾಜ್ಯ ಮಹಿಳಾ ಆಯೋಗದ ವಕೀಲರು ತುಂಬಿದ ನ್ಯಾಯಾಲಯದಲ್ಲಿ ಆಕೆಯ ಮೇಲೆ ಅಷ್ಟೆಲ್ಲ ಆಪಾದನೆಗಳ ನಂತರ ಆಕೆಯ ಮಾತನ್ನು ಕೇಳದಿದ್ದರೆ ಅದೊಂದು ನ್ಯಾಯದ ಗಂಭೀರ ಗರ್ಭಪಾತದಂತಾಗುತ್ತದೆ ಎಂದ ಮೇಲೆಯೇ ಅದು ಹದಿಯಾಳಿಗೆ ಮಾತಾಡಲು ಅವಕಾಶ ಮಾಡಿಕೊಟ್ಟದ್ದು.

ಕೊನೆಗೆ, ಸದ್ಯಕ್ಕೆ ನ್ಯಾಯಾಲಯ ಹದಿಯಾಳನ್ನು ಆಕೆ ಓದು ಮುಗಿಸಲು ಆಕೆ ಅಧ್ಯಯನ ಮಾಡುತ್ತಿದ್ದ ಕಾಲೇಜಿನ ಪ್ರಿನ್ಸಿಪಾಲರ ರಕ್ಷಣೆಗೆ ಕಳಿಸಿದೆ. ಇದರಿಂದ ಎಲ್ಲರೂ ಸಂತೋಷದಿಂದ ಹೋದರು ಎನ್ನಬೇಕಷ್ಟೇ..

ಹದಿಯಾ ಮತ್ತು ಆಕೆಯ ಗಂಡನಿಗೆ ಕೊನೆಗೂ ತಂದೆಯ ಮನೆಯಲ್ಲಿ ಮನವಾಸ ತಪ್ಪಿತಲ್ಲಾ, ಓದು ಮುಂದುವರೆಸುವ ಅವಕಾಶ ಸಿಕ್ಕಿತಲ್ಲಾ ಎಂದು ಸಂತೋಷವಾದರೆ, ಅವರ ಲಾಯರುಗಳಿಗೆ ಸದ್ಯಕ್ಕೆ ತಂದೆಯ ಮನೆಯ ಬಂಧನದಿಂದ ಬಿಡುಗಡೆ ಕೊಡಿಸಿದೆವೆಂದು ಸಂತೋಷ. ಆಕೆಯ ತಂದೆ–ತಾಯಿಗೆ ಆಕೆ ಕೋರ್ಟಿನಿಂದ ತನ್ನ ಗಂಡನೊಂದಿಗೆ ಹೋಗಲಿಲ್ಲ ಇದು ತಮ್ಮ ವಿಜಯ ಎಂಬ ಸಂತೋಷ.

ಈ ಪ್ರಕರಣ ಸಂಕುಚಿತ ಸಿದ್ಧಾಂತಗಳನ್ನು ಆಧರಿಸಿದ ಧಾರ್ಮಿಕ ಐಡೆಂಟಿಟಿಗಳ ಸಂಕುಚಿತ ವಿಚಾರಗಳು ಈಗ ನಿರ್ಮಿಸಿರುವ ವಾತಾವರಣ ಸರಕಾರಗಳಿಂದ ನ್ಯಾಯಾಲಯಗಳ ವರೆಗೆ ಎಲ್ಲರ ಮೇಲೂ ಪ್ರಭಾವ ಬೀರಿವೆ, ಸಮಾನ ನಾಗರಿಕರಾಗಿ ಮಹಿಳೆಯ ಸ್ವಾಯತ್ತತೆಯ ಹಕ್ಕುಗಳನ್ನು ಹಿಂದಕ್ಕೆ ತಳ್ಳಿದೆ ಎಂಬುದನ್ನು ಹೊರಗೆಡಹುತ್ತದೆ ಎನ್ನುತ್ತಾರೆ ಬೃಂದಾ ಕಾರಟ್.

ಈ ಪ್ರಕರಣದ ವಿಚಾರಣೆಗಳು ಉಂಟುಮಾಡಿರುವ ಒಂದು ಅತ್ಯಂತ ಕಳವಳಕಾರಿ ಸಂಗತಿಯೆಂದರೆ ಹಿಂದುತ್ವದ ಕಟ್ಟಾಳುಗಳು ಬಳಸುವ ಪದ 'ಲವ್ ಜಿಹಾದ್' ಗೆ ಈಗ ಅತ್ಯುನ್ನತ ನ್ಯಾಯಾಲಯಗಳೇ ಕಾನೂನಿನ ಮಾನ್ಯತೆ ನೀಡಿವೆ, ಅದನ್ನು ಗೌರವಾರ್ಹ ಪದವನ್ನಾಗಿ ಮಾಡಿವೆ. ಮುಸ್ಲಿ ಪುರುಷರನ್ನು ಮದುವೆಯಾಗುವ ಹಿಂದೂ ಮಹಿಳೆಯರಿಗೆ ತಮ್ಮದೇ ಆದ ಬುದ್ಧಿಯಿಲ್ಲ, ಅವರು ಇಸ್ಲಾಮಿಗೆ ಮತಾಂತರ ಹೊಂದಿದರಂತೂ ಅದೇ ಪಿತೂರಿಯ ಸಾಕ್ಷಿ ಎಂದು ಭಾವಿಸುವಂತೆ ಮಾಡಲಾಗಿದೆ. ಕಳೆದ ಮೇ ತಿಂಗಳಲ್ಲಿ ಕೇರಳ ಹೈಕೋರ್ಟ್ ಹದಿಯಾಳ ಮದುವೆಯನ್ನೇ ರದ್ದು ಮಾಡಿದ್ದು ಇದನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಬೃಂದಾ ಕಾರಟ್ ಹೇಳುತ್ತಾರೆ.

ಮಹಿಳೆಯರ ಸ್ವಾಯತ್ತತೆ, ಸಮಾನ ನಾಗರಿಕತ್ವದ ಹಕ್ಕುಗಳು ನಮ್ಮ ಸಂವಿಧಾನದ ಚೌಕಟ್ಟಿನಿಂದ ದೊರೆತಿದೆಯೇ ಹೊರತು ಧಾರ್ಮಿಕ ಸಂಸ್ಥೆಗಳು ಅಥವ ಸಂಪ್ರದಾಯದಿಂದಲ್ಲ. ನ್ಯಾಯಾಲಯಗಳು ತನ್ನ ಜೊತೆಗಾರನನ್ನು ಆರಿಸಿಕೊಳ್ಳುವ ಒಬ್ಬ ವಯಸ್ಕ ಮಹಿಳೆಯ ಹಕ್ಕನ್ನು, ಜತೆಗೆ ತಮಗೆ ಸರಿಯೆನಿಸಿದ ಧರ್ಮವನ್ನು ಅನುಸರಿಸುವ ಹಕ್ಕು ಆಕೆಗೂ ಇದೆ ಎಂಬುದನ್ನು ಎತ್ತಿ ಹಿಡಿಯಬೇಕಾಗಿದೆ ಎಂಬ ಸಂಗತಿಯತ್ತವೂ ಈ ಪ್ರಕರಣ ಗಮನ ಸೆಳೆಯಬೇಕಾಗಿದೆ. ಹದಿಯಾಳ ವಿಷಯದಲ್ಲಂತೂ ಆಕೆ ಮದುವೆಯ ಒಂದು ವರ್ಷದ ಮೊದಲೇ ಮತಾಂತರ ಹೊಂದಿದ್ದರಿಮದ ಲವ್ ಜಿಹಾದ್ ಎಂಬ ಪ್ರಶ್ನೆಯೇ ಬರಬಾರದಿತ್ತು.

ಬಲವಂತದ ಮತಾಂತರ, ಅದಕ್ಕಾಗಿ ಇಂತಹ ಮದುವೆಗಳ ಬಗ್ಗೆ ಎನ್‌ಐಎ ತನಿಖೆ ಮುಂದುವರಿಯಬೇಕು ಎಂದು ಸುಪ್ರಿಂ ಕೋರ್ಟ್ ಹೇಳಿದೆ. ಕೇರಳ ಸರಕಾರ ತಮ್ಮ ಪೋಲೀಸ್ ತನಿಖೆಗಳಲ್ಲಿ ಎನ್‌ಐಎ ಗೆ ತಿಳಿಸಬೇಕಾದಂತಹ ಯಾವುದೇ ಸಂಗತಿ ಕಂಡು ಬಂದಿಲ್ಲ ಎಂದಿದ್ದರೂ, ಎನ್‌ಐಎ ಗೆ ತನಿಖೆಯನ್ನು ಒಪ್ಪಿಸುವುದನ್ನು ವಿರೋಧಿಸಿದ್ದರೂ, ಸುಪ್ರಿಂ ಕೋರ್ಟಿನ ಅವರ ವಕೀಲರು ತದ್ವಿರುದ್ಧ ನಿಲುವು ತಳೆದರು ಎಂದು ವರದಿಯಾಗಿದೆ. ಇದನ್ನು ಸರಿಪಡಿಸಬೇಕು ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ವಾಸ್ತವವಾಗಿ ಈಗಾಗಲೇ 89 ಇಂತಹ ಪ್ರಕಕರಣಗಳಲ್ಲಿ ದಂಪತಿಗಳನ್ನು ಎನ್‌ಐಎ ವಿಚಾರಣೆಗೆ ಒಳಪಡಿಸಿರುವುದು ಅಂತರ್ಜಾತಿ, ಅಂತರ್–ಧರ್ಮ ಮದುವೆಗಳನ್ನು ಸಂತೋಷದಿಂದ ಸ್ವಾಗತಿಸುವ ಬದಲು, ಅವನ್ನು ಸಂದೇಹದಿಂದ ಕಾಣುವುದು, ಬೇರೊಂದು ಹೆಸರಲ್ಲಿ ನಡೆಸುವ ಕಾವಲುಕೋರತನವೇ ಆಗಿದೆ ಎಂದು ಅವರು ಹೇಳುತ್ತಾರೆ. ಅಂತರ–ಧರ್ಮೀಯ ದಂಪತಿಗಳು ಎಲ್ಲ ಸಮುದಾಯಗಳಲ್ಲೂ ಇರುವ ಕುಖ್ಯಾತ ಗೋರಕ್ಷಕರಂತಹ ಪಡೆಗಳ ದಾಳಿಗೆ ಸಿಲುಕಬೇಕಾದಂತಹ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ.

ಸುಪ್ರಿಂ ಕೋರ್ಟ್ ಯಾವುದು ರಾಷ್ಟ್ರೀಯ ಹಿತಾಸಕ್ತಿ ಎಂಬುದರ ಮೇಲೆ ಕೋಮುವಾದಿ, ಸಾಂಪ್ರದಾಯಿಕ, ವ್ಯಕ್ತಿನಿಷ್ಟ ವ್ಯಾಖ್ಯೆಗಳ ಬಂಧನಗಳಿಲ್ಲದೆ ಮಹಿಳೆಯರ ಹಕ್ಕುಗಳನ್ನು ಬಲಪಡಿಸುವಂತೆ ಕೆಲಸ ಮಾಡುತ್ತದೆ ಎಂದು ಬೃಂದಾ ಕಾರಟ್ ಆಶಿಸುತ್ತಾರೆ.

ಕಾನೂನು ಸಂವಿಧಾನ-ವಿರೋಧಿ "ಧರ್ಮ ಸಂಸತ್ತು"

ಸಂಪಾದಕೀಯ

ಉಡುಪಿಯಲ್ಲಿ ಇತ್ತೀಚೆಗೆ ನಡೆದ ಧರ್ಮ ಸಂಸತ್ತಿನಲ್ಲಿ ಮಾತನಾಡಿದ ಅದರ ಸಂಘಟಕರಾದ ಪೇಜಾವರ ಸ್ವಾಮಿಯವರು ಸಂವಿಧಾನ ಅಪ್ರಸ್ತುತ ಆಗಿದೆಯೆಂದು ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳಿಕೆ ನೀಡಿದ್ದು ತೀವ್ರ ಖಂಡನಾರ್ಹ. ಮುಂದುವರೆದು ಅವರು ಅಲ್ಪಸಂಖ್ಯಾತರಿಗೆ ಸಿಗುವ ಸವಲತ್ತುಗಳನ್ನು ಹಿಂದೂಗಳಿಗೂ ಕೊಡಬೇಕೆಂದು ನೀಡಿದ ಹೇಳಿಕೆ ವಾಸ್ತವದ ಬಗ್ಗೆ ಅಜ್ಞಾನದಿಂದ, ಕಿಡಿಗೇಡಿತನದಿಂದ ಕೂಡಿದ ಅಸಂಬದ್ಧ ಹೇಳಿಕೆ. ಚಾರಿತ್ರಿಕ ತಾರತಮ್ಯ ಅನುಭವಿಸಿದ ಹಿನ್ನೆಲೆಯಲ್ಲಿ ಮೀಸಲಾತಿ ಮತ್ತಿತರ ವಿಶೇಷ ಸವಲತ್ತುಗಳನ್ನು ಪಡೆದಿರುವ ದಲಿತರು, ಹಿಂದುಳಿದ ಜಾತಿಗಳು ಹಿಂದೂಗಳಲ್ಲವೇ? ಮುಸ್ಲಿಮರು ಯಾವ ಮೀಸಲಾತಿ ಅಥವಾ ವಿಶೇಷ ಸವಲತ್ತುಗಳನ್ನು ಪಡೆಯುತ್ತಿದ್ದಾರೆ? ಈ ಪ್ರಶ್ನೆಗಳಿಗೆ ಪೇಜಾವರರಿಗೆ ಉತ್ತರ ಗೊತ್ತಿಲ್ಲವೆಂದಲ್ಲ.

ಪೇಜಾವರರ ಮಾತು ಸಂವಿಧಾನದ ಪ್ರಧಾನ ಆಶಯಗಳಾದ ಸಮಾನತೆ, ಜಾತ್ಯತೀತತೆ, ಮತ್ತು ಭ್ರಾತೃತ್ವದಂತಹ ಉನ್ನತ ಮೌಲ್ಯಗಳನ್ನು ಬುಡಮೇಲು ಮಾಡುವ ಸಂಚಿನ ಫಲವಾಗಿದೆ. ಈಗಿನ ಕೇಂದ್ರ ಸರಕಾರದ ಮೂಲಕ ಜಾರಿಗೆ ತರಲು ಹೋರಟಿರುವ ಶ್ರೇಣಿಕೃತ ಜಾತಿಪದ್ದತಿಯ ರಕ್ಷಣೆ ಮತ್ತು ಹಿಂದೂ ರಾಷ್ಟ್ರದ ಆರ್. ಎಸ್.ಎಸ್ ನ ಅಜೆಂಡಾದ ವಕ್ತಾರನಂತೆ ಪೇಜಾವರ ಸ್ವಾಮಿಗಳು ಮಾತನಾಡುವುದು ಖಂಡನೀಯ. ತಾವೊಬ್ಬ ರಾಜಕೀಯೇತರ ವ್ಯಕ್ತಿಯೆಂದೂ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ ಎಂದು ಹೇಳಿಕೊಳ್ಳುವ ಇವರು ಬಹು ಧರ್ಮಿಯರ ಬಹುನಂಬಿಕೆಯನ್ನು ತಿರಸ್ಕರಿಸಿ ಧರ್ಮ-ಜಾತಿಗಳ ನಡುವೆ ದ್ವೇಷ ಹುಟ್ಟಿಸುವ, ಏಕಧರ್ಮಸ್ಥಾಪನೆಯ ಮಾತು ಮಾತನಾಡುತ್ತಿರುವುದು ಭಾರತದ ಸಾಂಸ್ಕೃತಿಕ ಜಾಯಮಾನಕ್ಕೆ ವಿರೋಧವಾದದ್ದು.

ಭಾರತದ ಸಂವಿಧಾನ ಜಾರಿಯಲ್ಲಿ ಇದ್ದರೆ ಜೀವವಿರೋದಿ ಸ್ತ್ರೀ ಮತ್ತು ತಳ ಸಮುದಾಯದ ವಿರೋಧಿ ಮನು ಸಂಸ್ಕೃತಿಯನ್ನು, ಜಾತಿ ತಾರತಮ್ಯ-ಅಸ್ಪೃಶ್ಯತೆಗಳನ್ನು ಜಾರಿಗೊಳಿಸಲು ತೊಡಕಾಗುತ್ತದೆ ಎನ್ನುವ ಕಾರಣದಿಂದ ಸಂವಿಧಾನವನ್ನೇ ತಿರಸ್ಕರಿಸಲು ಹೊರಟಿದ್ದಾರೆ. ಪ್ರಜಾಪ್ರಭುತ್ವ ವಿರೋಧಿಯಾದ ಧರ್ಮ ಸಂಸತ್ತನ್ನು ಆಯೋಜಿಸಿ ಸಂವಿಧಾನ ವಿರೋಧಿ ಹೇಳಿಕೆ ನೀಡುತ್ತಿರುವುದರ ಹಿಂದಿನ ಕುತಂತ್ರದ ಹುನ್ನಾರವನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಅವರು (ಅಥವಾ ಅವರು ಮತ್ತು ಅವರಂಥ ಧರ್ಮಗುರುಗಳನ್ನು ಮುಂದು ಮಾಡಿ) ಆರೆಸ್ಸೆಸ್-ವಿಶ್ವ ಹಿಂದೂ ಪರಿಷತ್ ಸಂಘಟಿಸಿರುವ ಧರ್ಮ ಸಂಸತ್ ನ ನಿಜವಾದ ಉದ್ದೇಶ ಮುಂದಿನ ವರ್ಷ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಆರಂಭಿಸಿ 2019ರ ಲೋಕಸಭಾ ಚುನಾವಣೆಗಳ ಹೊತ್ತಿಗೆ ಅದನ್ನು ಅಜೆಂಡಾವಾಗಿಸುವುದು. ಆದ್ದರಿಂದಲೇ ದೇಶದ ಕಾನೂನು ಸುಪ್ರೀಂ ಕೋರ್ಟನ್ನು ಧಿಕ್ಕರಿಸಿ, ಕೋರ್ಟಿನಲ್ಲಿ ವಿವಾದಾಸ್ಪದವಾಗಿದ್ದು ಕೋರ್ಟಿನ ತೀರ್ಪಿಗೆ ಕಾಯದೆ "ಅಲ್ಲೇ ರಾಮಮಂದಿರ ಕಟ್ಟುವೆವು" ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ ಭಾಗವತ್ ಅಲ್ಲಿ ಘೋಷಿಸಿದ್ದು. ಹಿಂದೆ ಬಾಬರೀ ಮಸಿದಿ ಧ್ವಂಸದ ಮೊದಲು ಧರ್ಮ ಸಂಸತ್ತಿನಲ್ಲಿ "ಅಲ್ಲೇ ರಾಮಮಂದಿರ ಕಟ್ಟುವೆವು" ಎಂದು ಘೋಷಿಸಿ ಕೋಮು ಪ್ರಚಾರ ದಂಗೆಗಳನ್ನು ಹರಿಯ ಬಿಟ್ಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.



ಈ ಧರ್ಮ ಸಂಸತ್ತಿನಲ್ಲಿ ದೇಶದ ಕಾನೂನು-ಸಂವಿಧಾನದ ವಿರುದ್ಧವಾದ ಘರ್ ವಾಪಸಿ(ಪುನಃ-ಮತಾಂತರ), ನಾಲ್ಕು ಮಕ್ಕಳನ್ನು ಹೆರುವ ಮೂಲಕ ಹಿಂದೂ ಜನಸಂಖ್ಯೆ ಹೆಚ್ಚಿಸಲು ಮಹಿಳೆಯರಿಗೆ ಕರೆ, ಮೀಸಲಾತಿ ವಿರೋಧಿ ಹೇಳಿಕೆಗಳನ್ನು ಕೊಡಲಾಯಿತು. ಹಿಂದೂ ಧರ್ಮದ ಬಗೆಗಿನ ಯಾವುದೇ ಧಾರ್ಮಿಕ ವಿಷಯಗಳ ಬಗೆಗ ಚರ್ಚೆ ಇರಲಿಲ್ಲ. ಕಾನೂನು ಬಾಹಿರ ಹಿಂಸಾಚಾರಕ್ಕೆ ಕರೆ ಕೊಡಲಾಯಿತು.
ಈ ರೀತಿಯ ಕಾನೂನು-ಸಂವಿಧಾನದ ವಿರುದ್ಧವಾದ ಹೇಳಿಕೆ ನೀಡಿದವರ ಮೇಲೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕಾಗಿದೆ.

ಬಿಜೆಪಿಯ ಚುನಾವಣಾ ಕುತಂತ್ರ

ಎಸ್.ವೈ. ಗುರುಶಾಂತ್

ಕರ್ನಾಟಕದ ವಿಧಾನಸಭೆಯಲ್ಲಿ 150 ಸ್ಥಾನಗಳನ್ನು ಗಳಿಸುವ ಗುರಿಯನ್ನು ಹೇಗೆ ತಲುಪುವುದು ಎಂಬ ವ್ಯಾಕುಲದಲ್ಲಿ ಬಿಜೆಪಿ ಮುಳುಗಿದೆ. ಅದು ನಡೆಸುತ್ತಿರುವ ಮಹತ್ವಾಕಾಂಕ್ಷೆಯ 'ಪರಿವರ್ತನಾ ಯಾತ್ರೆ' ಒಂದು 'ಫ್ಲಾಪ್ ಶೋ'. ಬಿಜೆಪಿ ದುರಾಡಳಿತದಿಂದ ಭ್ರಮನಿರಸನಗೊಂಡಿರುವ ಜನರನ್ನು ಉತ್ಸಾಹಗೊಳಿಸುವುದೂ ಅದಕ್ಕೆ ಸಾಧ್ಯವಾಗಿಲ್ಲ. ಮಾತ್ರವಲ್ಲ, ನಾಯಕರ ನಡುವಿನ ಕಿತ್ತಾಟವನ್ನೂ ಕಡಿಮೆ ಮಾಡಿಲ್ಲ. ಸಂಸದೀಯ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವಾಗಿ ಮುಂದಿನ ಪ್ರಧಾನಮಂತ್ರಿ, ಮುಖ್ಯಮಂತ್ರಿ ಯನ್ನೂ ಗೆಲ್ಲುವ ಮೊದಲೇ ಘೋಷಿಸುವ ಅದರ ಚಾಳಿಯಂತೆ ಇಲ್ಲೀಗ ಪ್ರಕಟಿಸುವ ಧೈರ್ಯವೂ ಅದಕ್ಕಿಲ್ಲ. ಅಲ್ಲಿ ಸಾಮೂಹಿಕ ನಾಯಕತ್ವ ಎಂದು ಹೇಳಲೂ ಆಗದ, ವ್ಯಕ್ತಿ ಕೇಂದ್ರಿತ ನಾಯಕತ್ವವೆನ್ನಲೂ ಆಗದ ತೇಲು ಮೇಲಿನ ದುಸ್ಥಿತಿಯಲ್ಲಿ ಬಿಜೆಪಿ-ಸಂಘ ಇವೆ.

ತಲೆದಂಡದ ಗುರಿ

ಹಾಗಾದರೆ ಅದು 150 ರ ಸಂಖ್ಯೆ ತಲುಪುವುದಾದರೂ ಹೇಗೆ? ಅಮಿತ್ ಶಾ, ಮೋದಿಯಂತಹ ಬಿಜೆಪಿಯ 'ಬಿಗ್ ಬಾಸ್'ಗಳು ರಚಿಸಿರುವ ಚುನಾವಣೆಯ ಕಾರ್ಯತಂತ್ರ ಫಲಿಸೀತೇ? ಈ ವಿಶ್ವಾಸ ಅವರಿಗೂ ಇದ್ದಂತಿಲ್ಲ. ಇದ್ದಿದ್ದರೆ ಅವರ ಕಾರ್ಯತಂತ್ರದ ಯದ್ವಾ ತದ್ವಾ ಜಾರಿಗೆ ಇಳಿದು ಮುಖಭಂಗ ಅನುಭವಿಸುತ್ತಿರಲಿಲ್ಲ. ನಿಜ, ಡಿಕೆಶಿ ಯಂತಹ ಕಾಂಗ್ರೆಸ್‌ನ ಪ್ರಮುಖ ನಾಯಕರನ್ನು ಬ್ಲಾಕ್ ಮೇಲ್ ಮಾಡಿ ತನ್ನತ್ತ ಸೆಳೆಯುವುದು, ಇಲ್ಲವಾದರೆ ಬಾಯಿ ಮುಚ್ಚಿಸುವುದು ಅಥವಾ ಮುಂದಿನ ಚುನಾವಣಾ ಸಂಪನ್ಮೂಲಗಳನ್ನು ಸೀಜ್ ಮಾಡಿ 'ದಿಗ್ಬಂಧನ' ವಿಧಿಸುವುದು ಬಿಜೆಪಿ ಕಾರ್ಯತಂತ್ರದ ಪ್ರಮುಖ ಭಾಗ. ಆದರೆ ತನಿಖೆ ನಡೆಸುತ್ತಿರುವ ಕೇಂದ್ರ ಸರಕಾರದ ಜಾರಿ ನಿರ್ದೇಶನಾಲಯದ ಅಧಿಕಾರಿಗಳನ್ನೇ ಈ ಕೆಲಸಕ್ಕೆ ಹಚ್ಚಿರುವುದು ಅನೈತಿಕ, ದುಷ್ಟ ವಿಧಾನ. ಈ ಕುತಂತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬಹಿರಂಗವಾಗಿ ಟೀಕಿಸಿದರು. ಎಸ್.ಎಂ.ಕೃಷ್ಣರವರನ್ನು ಬಿಜೆಪಿ ಗೆ ಸೆಳೆದ ನಂತರವೂ ಅವರ ಅಳಿಯನ ಮೇಲೆ ಐ.ಟಿ ಧಾಳಿ ನಡೆಸಿದ್ದೇಕೆ? ಇದು ಅವರ ಮೇಲೆ ಸತತ ಒತ್ತಡ ಇರಬೇಕು ಅಂದಲ್ಲವೇ?. ಈಗ ಸಚಿವ ಜಾರ್ಜ್ ಅವರನ್ನು ಗುರಿಯಾಗಿಸಿ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆಯ ಪ್ರಕರಣ ಹಿಡಿದು ಸಿಬಿಐ ಮೂಲಕ ಭಾರೀ ಆಟ ಆಡಲಾಗುತ್ತಿದೆ. ಇದಕ್ಕೆ ಮಾಧ್ಯಮಗಳೂ ಸಾಥ್ ನೀಡಿ ತನಿಖೆ ಪೂರ್ಣಗೊಳ್ಳುವ ಮೊದಲೇ ಕೆಲವರನ್ನು ಅಪರಾಧಿಯನ್ನಾಗಿಸಿವೆ! ರಾಜ್ಯ ಸರಕಾರದ ಆಯ್ದ ಕೆಲ ಸಚಿವರನ್ನು 'ಹಗರಣ'ದಲ್ಲಿ ಸಿಲುಕಿಸುವ, ಕೆಲ ಪ್ರಕರಣಗಳನ್ನು ಹುಡುಕಿ ತಲೆದಂಡ ಪಡೆಯುವುದೂ ಬಿಜೆಪಿ ಕಾರ್ಯತಂತ್ರದ ಭಾಗ. ಒಂದೂವರೆ ವರುಷದ ಹಿಂದೆ ಕೊಲೆಯಾದವರೊಬ್ಬರ ಪ್ರಕರಣಕ್ಕೆ ಬಿಜೆಪಿ ನಾಯಕರು ಮರು ಜೀವ ನೀಡುತ್ತಿರುವುದು ಸಚಿವ ವಿನಯ ಕುಲಕರ್ಣಿಯವರನ್ನು ಗುರಿಯಾಗಿಸಿದ ಲೇಟೆಸ್ಟ್ ಆರೋಪ.

ಹೊಸತಲ್ಲದ ತಂತ್ರಗಳು

ಮುಂಬರುವ ಕರ್ನಾಟಕದ ಚುನಾವಣೆಗೆ ಸಂಘಪರಿವಾರ-ಬಿಜೆಪಿ ರೂಪಿಸಿರುವ(ಕು) ತಂತ್ರಗಳ ಜಾರಿಯ ಭಾಗವೇ ಈ ಎಲ್ಲವೂ ಎಂಬುದು ನಿಸ್ಸಂಶಯ. ಹಿಂದೆ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಆರೆಸ್ಸೆಸ್ ನಾಯಕತ್ವದೊಂದಿಗೆ ನಡೆಸಿದ ಜಂಟಿ ಸಮಾಲೋಚನೆಯಲ್ಲಿ ಒಂದು ದೀರ್ಘವಾದ, ವಿಸ್ತಾರದ ತಂತ್ರವನ್ನು ರೂಪಿಸಲಾಗಿತ್ತು. ಈಗ ಅವನ್ನು ವಿವರವಾಗಿ ಪರಿಶೀಲಿಸಿದಾಗ ಅವು ರಾಜ್ಯಕ್ಕಾಗಿಯೇ ರೂಪಿಸಿದ ಹೊಸ ಸಂಶೋಧನೆಗಳೇನಲ್ಲ ಎಂಬುದು ತಿಳಿಯುತ್ತದೆ. ಇವನ್ನು ಉತ್ತರ ಪ್ರದೇಶದ ಚುನಾವಣೆಯಲ್ಲಿ ಪ್ರಯೋಗಿಸಿದಂಥವುಗಳೇ. ಅದಕ್ಕೂ ಹಿಂದೆ ಬಿಜೆಪಿ ಗೆಲುವಿನ ಅಹಮಿಕೆಯಲ್ಲಿದ್ದ ಮೋದಿ-ಶಾ ಜೋಡಿ ರೂಪಿಸಿದ್ದ ಚುನಾವಣಾ ತಂತ್ರಗಳು ಬಿಹಾರದಂತಹ ಕಡೆ ಮಣ್ಣು ಮುಕ್ಕಿದ್ದವು. ಬಿಹಾರ, ಕೇರಳ ದಂತಹ ಕಡೆ ಅಲ್ಲಿನ ಜನತೆ ಇವರ ಅಶ್ವಮೇಧ ಕುದುರೆಯ ಕಾಲನ್ನು ಮುರಿದಿದ್ದರು! ಇದಾದ ನಂತರ ಉತ್ತರ ಪ್ರದೇಶಕ್ಕೆ ವಿಶೇಷ ನಿಗಾ ವಹಿಸಿ ಚುನಾವಣಾ ತಂತ್ರಗಳನ್ನು ಹೆಣೆಯಲಾಗಿತ್ತು. ಅವನ್ನೀಗ ಕರ್ನಾಟಕದಲ್ಲಿಯೂ ಪ್ರಯೋಗಿಸಲಾಗುತ್ತಿದೆ.

ಈ ಬಾರಿ ಉತ್ತರ ಪ್ರದೇಶದ ಮಾದರಿಯೇ?

2017 ರ ಫೆಬ್ರ-ಮಾರ್ಚ್ ನಲ್ಲಿಯ ಉತ್ತರ ಪ್ರದೇಶದ ಚುನಾವಣೆಗಳು ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಬಿಜೆಪಿ ಪಾಲಿಗೆ ಅತ್ಯಂತ ಮಹತ್ವದ್ದಾಗಿತ್ತು. ಅಲ್ಲಿ 80 ಲೋಕಸಭಾ ಸ್ಥಾನಗಳು, 31 ರಾಜ್ಯಸಭಾ ಸ್ಥಾನಗಳಿವೆ. ಹೀಗಾಗಿ ಬಿಜೆಪಿಗೆ ಮುಂದೆ ಬರಲಿದ್ದ ರಾಷ್ಟ್ರಪತಿ ಚುನಾವಣೆಗೂ, ಮೇಲ್ ಮನೆಯಲ್ಲಿ ಬಹುಮತ ಗಳಿಸಲೂ ಅತ್ಯಗತ್ಯವಿತ್ತು. ತನ್ನ ಫ್ಯಾಶಿಸ್ಟ್ ಮಾದರಿ ಅಜೆಂಡಾ ಜಾರಿಗೆ, ಕಾರ್ಪೋರೇಟ್ ಕಂಪನಿಗಳ ಆಡುಂಬೋಲ ನೀತಿಗಳ ತಡೆಯಿಲ್ಲದ ಜಾರಿಗೆ ಈ ಹೊಸ ಬಲ ಅತೀ ಅಗತ್ಯ. ಮತ್ತೊಂದೆಡೆ ಇದಕ್ಕಿರುವ ವಿರೋಧ ಅಥವಾ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುವುದೂ ಅದಕ್ಕೆ ಬೇಕಿತ್ತು. ಹೀಗಾಗಿಯೇ ಚುನಾವಣೆಗೆ ಸುಮಾರು ಎರಡು ವರುಷಗಳ ಮೊದಲೇ ತನ್ನ ಕು-ತಂತ್ರಗಳ ಧಾಳಿಯನ್ನು ತೀವ್ರಗೊಳಿಸಿತ್ತು. ಅವು ರಾಜಕೀಯ-ತಾತ್ವಿಕವಾಗಿ ಹಾಗೂ ಸಂಘಟನಾ ಸ್ವರೂಪವನ್ನು ಹೊಂದಿದ್ದವು.

ಪುಟ 4 ಕ್ಕೆ

ಬಿಜೆಪಿಯ ಚುನಾವಣಾ ಕುತಂತ್ರ............... ಪುಟ 3 ರಿಂದ

ರಾಮ ಮಂದಿರ ನಿರ್ಮಾಣದ ಅಜೆಂಡಾವನ್ನು ಮತ್ತೇ ಬಿರುಸಿನಿಂದ ಮುನ್ನೆಲೆಗೆ ತರಲಾಯಿತು. ಅತ್ಯಂತ ಯೋಜಿತವಾಗಿ ಕೋಮು ಗಲಭೆಗಳನ್ನು ಸಂಘಟಿಸಲಾಯಿತು. ಆ ಅವಧಿಯಲ್ಲಿಯೇ 605 ಕೋಮು ಗಲಭೆಗಳು ನಡೆದವು. ಮತ್ತು ಅದರಲ್ಲಿ ನಿರ್ದಿಷ್ಟ ಜಾತಿ, ಸಮುದಾಯಗಳನ್ನು ತೊಡಗಿಸಲಾಗಿತ್ತು. ಹಾಗೂ ಜಾತಿ, ಮತಗಳ ಆಧಾರದಲ್ಲಿ ವಿಭಜಿಸಿ ರಾಜಕೀಯ ಧ್ರುವೀಕರಣ ಮಾಡಲಾಗಿತ್ತು. ಪ್ರತಿ ಕೋಮು ಗಲಭೆಗಳೂ ಒಂದೊಂದು ಜಾತಿ ಸಮುದಾಯಗಳು ಅಲ್ಪಸಂಖ್ಯಾತರ ವಿರುದ್ಧವಾಗುವಂತೆ ಗಮನ ಹರಿಸಲಾಗಿತ್ತು. ದಲಿತ ಮತ್ತು ಮುಸ್ಲಿಮರ ಮೇಲೆ ಧಾಳಿಗಳು ವ್ಯವಸ್ಥಿತವಾಗಿ ನಡೆದವು. ಇದು ಇತರೆ ಜಾತಿಗಳಿಗೆ ನೀಡಿದ ಅಭಯ ಸಂಕೇತವೂ ಆಗಿತ್ತು.


ಇದರೊಟ್ಟಿಗೆ ವಿಕಾಸ–ಅಭಿವೃದ್ಧಿಯ ಕಲ್ಪನೆಯನ್ನೂ ಹರಿಯಬಿಡಲಾಯಿತು. ಕೇಂದ್ರದ ಅಧಿಕಾರ ಬಳಸಿ ಒಂದು ವರುಷದಲ್ಲೇ 50.2 ಲಕ್ಷ ಉಜ್ವಲ್ ಗ್ಯಾಸ್ ಸಿಲಿಂಡರ್ ಹಂಚಿಕೆ, ವಿದ್ಯುತ್ ಕಾಣದಿದ್ದ 1400 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ನೀಡುವ ಮೂಲಕ ಜನರಲ್ಲಿ ವಿಕಾಸದ ಬಗ್ಗೆ ವಿಶ್ವಾಸ ಹುಟ್ಟಿಸಿದರು. ನರೇಂದ್ರ ಮೋದಿಯನ್ನು ಅಭಿವೃದ್ಧಿಯ ಹರಿಕಾರನೆಂದೇ ಬಿಂಬಿಸಲಾಯಿತಲ್ಲದೇ ಮುಂದೆ ಬಿಜೆಪಿ ಸರಕಾರ ಬಂದಲ್ಲಿ ಅವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ ಎಂದೂ ನಂಬಿಸಲಾಯಿತು.

ಇದೇ ಅವಧಿಯಲ್ಲೇ 'ರಾಷ್ಟ್ರೀಯತೆ'ಯ ಚರ್ಚೆಯನ್ನು ವಿಪರೀತಕ್ಕೆ ಬೆಳೆಸಿ ರಾಷ್ಟ್ರೀಯತೆ, ದೇಶಪ್ರೇಮಗಳನ್ನು ವಿಕೃತಗೊಳಿಸಿ ಫ್ಯಾಸಿಸ್ಟ್ ವ್ಯಾಖ್ಯಾನವನ್ನು ವಿಜೃಂಭಿಸುವಂತೆ ನೋಡಿಕೊಂಡದ್ದು, ಅದನ್ನು ಕಾಶ್ಮೀರದ ಸಮಸ್ಯೆ, ಭಯೋತ್ಪಾದನೆಯ ಪ್ರಶ್ನೆಗಳನ್ನು ತಳುಕು ಹಾಕಿ ಗೊಂದಲಗೊಳಿಸಿದ್ದು ಪ್ರಮುಖ ಅಂಶ. ಪ್ರಜಾಪ್ರಭುತ್ವದ ಮೌಲ್ಯಗಳ ವಿರುದ್ಧವೇ ದೇಶದ ಜನರನ್ನು ಎತ್ತಿ ಕಟ್ಟಲು ಹವಣಿಸಿದರು. ಪ್ರತಿಷ್ಠಿತ ದೆಹಲಿಯ ಜವಹರಲಾಲ್ ಯೂನಿವರ್ಸಿಟಿಯಲ್ಲಿ ನಡೆದ ಪ್ರತಿ ವಿದ್ಯಾಮಾನಗಳನ್ನು ಇದರ ಹಿನ್ನೆಲೆಯಲ್ಲಿ ನೋಡಬಹುದು. ಈ ದ್ವೇಷದ ವಾತಾವರಣ ಹಸಿಯಾಗಿರುವಾಗಲೇ ಚುನಾವಣೆಗೆ ಸ್ವಲ್ಪವೇ ಮೊದಲು ತಂದ ನೋಟುಗಳ ಅಮಾನ್ಯೀಕರಣ ಮತ್ತು ಅದನ್ನು ಸಮರ್ಥಿಸಿಕೊಳ್ಳಲು ನೀಡಿದ ಹಾಸ್ಯಾಸ್ಪದ ಕಾರಣಗಳು, ತನ್ನಲ್ಲಿರುವ ಕಪ್ಪು ಹಣ ಬಿಳಿಯಾಗಿಸಿಕೊಂಡ ನಂತರ ವಿರೋಧ ಪಕ್ಷಗಳಿಗೆ ನೀಡಿದ ಮತ್ತೊಂದು ಮಾಸ್ಟರ್ ಸ್ಟ್ರೋಕ್! ತನ್ನ ರಾಜಕೀಯ ಮುನ್ನಡೆಗೆ ಸಮಾಜವಾದಿ ಪಕ್ಷದ ವೈಫಲ್ಯಗಳನ್ನು, ಅದರೊಳಗಿನ ಜಗಳ ಬಳಸಿಕೊಳ್ಳಲಾಯಿತು. ಅವರ ನಾಯಕರನ್ನು, ಬೆಂಬಲಿಗರನ್ನು ಸೆಳೆಯಲು ಮತ್ತು ಹಣಿಯಲು ಸರ್ವ ಶಕ್ತಿ ಪ್ರಯೋಗವನ್ನು ಸಂಘಪರಿವಾರ ಮಾಡಿತು.

ಮೊದ, ಮೊದಲೇ ಸಿ.ಎಂ.ಗಳನ್ನು ಘೋಷಿಸುವ ಬಿಜೆಪಿಯು ಫಲಿತಾಂಶದವರೆಗೂ ಅದನ್ನು ಪ್ರಕಟಿಸಲಿಲ್ಲ ಎಂಬುದನ್ನು ಉತ್ತರ ಪ್ರದೇಶದ ಚುನಾವಣಾ ಕಾರ್ಯತಂತ್ರದಲ್ಲಿ ವಿಶೇಷವಾಗಿ ಗಮನಿಸಬೇಕು. ಮತದಾರರ ನೊಂದವಣೆಯಲ್ಲಿ ದಲಿತ, ಇತರೆ ಹಿಂದುಳಿದ ವರ್ಗಗಳ ಜನರತ್ತ ಹೆಚ್ಚಿನ ಒತ್ತು ನೀಡಲಾಗಿತ್ತು. ಮುಸ್ಲಿಂ ಅಲ್ಪಸಂಖ್ಯಾತರು ದೂಷಿತ ಅಪರಾಧಿಗಳಾಗಿ ಮೂಲೆಗೊತ್ತಲಾಯಿತು. ಚುನಾವಣಾ ಟಿಕೇಟ್ ನೀಡಿಕೆಯಲ್ಲಿಯೂ ಇದು ಮುಂದುವರಿಯಿತು. ಒಟ್ಟಾರೆ ಬಿಜೆಪಿ–ಸಂಘಪರಿವಾರ ಇಲ್ಲೆಲ್ಲಾ ಅತ್ಯಂತ ಆಕ್ರಮಣಕಾರಿ ನಡೆದುಕೊಂಡಿತು.

ಸಂಘಟನಾ ಸಿದ್ಧತೆ

ಸಂಘಟನಾತ್ಮಕವಾಗಿಯೂ ಅದು ನೀಡಿದ ಗಮನವೂ ವಿಶೇಷ. ರಾಜ್ಯದಲ್ಲಿ ಸುಮಾರು 180 ಲಕ್ಷ ಸದಸ್ಯರನ್ನು ನೊಂದಾಯಿಸಲಾಗಿತ್ತು. 2014 ರಲ್ಲಿ ಬೂತ್ ಸಮಿತಿಗಳು ಶೇ.37 ಇದ್ದವು, ಅದನ್ನು 2017 ರಲ್ಲಿ ಶೇ.87 ಕ್ಕೆ ವಿಸ್ತರಿಸಲಾಗಿತ್ತು. ಇಡೀ ರಾಜ್ಯವನ್ನು 82 ಜಿಲ್ಲಾ ಘಟಕಗಳಾಗಿ ವಿಂಗಡಿಸಿ, 1463 ಮಂಡಲ್, 9937 ಘಟಕಗಳನ್ನಾಗಿ ಮಾಡಲಾಗಿತ್ತು. ಬಳಿಕ ನಾಲ್ಕು ದಿಕ್ಕುಗಳಿಂದ ಎಲ್ಲಾ 75 ಜಿಲ್ಲೆಗಳ 403 ವಿಧಾನಸಭಾ ಕ್ಷೇತ್ರಗಳನ್ನು ತಲುಪುವಂತೆ 'ಪರಿವರ್ತನಾ ಯಾತ್ರೆ' ಗಳನ್ನು ಸಂಘಟಿಸಲಾಯಿತು. ಒಟ್ಟು 8138 ಕಿ.ಮೀ. ಪ್ರಯಾಣಿಸಿ 233 ಸಣ್ಣ, ದೊಡ್ಡ ಸಭೆಗಳು ನಡೆದವು. ಒಟ್ಟು ಸಿದ್ಧತೆಗಳಲ್ಲಿ 50 ಲಕ್ಷ ಜನರನ್ನು ತೊಡಗಿಸಲಾಗಿತ್ತು. ತಾವು ನಾಮಕಾವಾಸ್ತೆ ಭರವಸೆ ಕೊಡುವವರಲ್ಲ, ಜಾರಿಗೆ ಬದ್ಧರು ಎಂದು ಚುನಾವಣಾ ಪ್ರಣಾಳಿಕೆಯನ್ನು ರಚಿಸುವುದೂ ಕೂಡ ಒಂದು ಬಹು ದೊಡ್ಡ ಕಸರತ್ತಾಗಿ ಪ್ರದರ್ಶಿಸಿದರು. ಅದಕ್ಕೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿದ್ದರಿಂದ 30 ಲಕ್ಷ ಸಲಹೆಗಳು ಬಂದಿದ್ದವು! ಅಂತಿಮ ಫಲಿತಾಂಶದಲ್ಲಿ 325 ಸ್ಥಾನಗಳನ್ನು ಗಳಿಸುವ ಮೂಲಕ ಎರಡನೇ ಮೂರರಷ್ಟು ಪ್ರಚಂಡ ಬಹುಮತವನ್ನು ಸಾಧಿಸಿತ್ತು ಬಿಜೆಪಿ. ಇವೆಲ್ಲಕ್ಕೂ ಬೆನ್ನೆಲುಬಾಗಿ ನಿಂತದ್ದು ಅಪಾರ ಪ್ರಮಾಣದ ಅಕ್ರಮ ಹಣ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಇವೆಲ್ಲವನ್ನೂ ರಾಜಕೀಯ ಕಾರ್ಯಕರ್ತರು ಬಹಳ ಸೂಕ್ಷ್ಮವಾಗಿ ಅವಲೋಕಿಸಬೇಕಿದೆ. ಬಿಜೆಪಿ ಕೇವಲ ಒಂದು ರಾಜಕೀಯ ಪಕ್ಷ ಮಾತ್ರವಾಗಿರದೇ ಅದು ಫ್ಯಾಸಿಸ್ಟ್ ಮಾದರಿಯ ಸಂಘದ ಕುಡಿ ಎಂದು ಮತ್ತೇ ನೆನಪಿಸಿಕೊಳ್ಳಬೇಕಿದೆ. ಅದರ ಉದ್ದೇಶ ಕೇವಲ ಚುನಾವಣೆ ಮಾತ್ರವಲ್ಲ, ನಂತರವೂ ಅದಕ್ಕೆ ದೀರ್ಘ ಕಾರ್ಯ ತಂತ್ರವಿದೆ. ಸಿಗುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳಲಿದೆ.

ನಕಲು ಶಾ!

ಇನ್ನು ಕರ್ನಾಟಕದ ಚುನಾವಣೆಯಲ್ಲಿಯೂ ಉತ್ತರ ಪ್ರದೇಶದಲ್ಲಿನ ಕಾರ್ಯತಂತ್ರವನ್ನು ನಕಲು ಮಾಡಲು ಅದು ಹೊರಟಿದೆ. ಅಮಿತ್ ಶಾ ಹಿಂದೆ ಬಂದಾಗ ತಮ್ಮ 'ಪಕ್ಷ ಎನ್.ಜಿ.ಓ. ಆಗಿದೆ. ಅದು ರಾಜಕೀಯ ಪಕ್ಷದಂತೆ ವರ್ತಿಸುತ್ತಿಲ್ಲ' ಎಂದು ಹೇಳಿದ್ದರು. 'ಅಧಿಕಾರ ಹಿಡಿಯಲು ಯಾವುದೇ ದೊಡ್ಡ ರಾಜಕೀಯ ವಿಷಯಗಳೇನೂ ಬೇಡ. ಸಂಘಟನಾ ಕ್ರಮ ಬೇಕು' ಎಂದಿದ್ದರು. ಅದರಂತೆ ರಾಜ್ಯದಲ್ಲಿ ಬಿಜೆಪಿಗೆ 60 ರಿಂದ 80 ಲಕ್ಷ ಸದಸ್ಯರನ್ನು ನೊಂದಾಯಿಸುವ ಗುರಿ ಇರಿಸಿದ್ದರು. 'ಆ ಸದಸ್ಯರು ತಲಾ 3 ಜನರನ್ನು ಒಲಿಸಿಕೊಂಡು ಮತ ಪಡೆಯುವಂತೆ ಆದಲ್ಲಿ ಅಧಿಕಾರ ಗ್ಯಾರಂಟಿ. ಅಷ್ಟೇ ಸಾಕು' ಎಂಬುದು ಅವರ ನಿರ್ದೇಶನ. ಹೀಗಾಗಿ ಆ ಉದ್ದೇಶಕ್ಕಾಗಿಯೇ ಸಂಘಟನಾ ಯೋಜನೆ, ಕಾರ್ಯಕ್ರಮಗಳು ತಯಾರಾಗಿದ್ದವು. ಇದಕ್ಕಾಗಿಯೇ ಹೊರಟ ಪರಿವರ್ತನಾ ಯಾತ್ರೆ, 2 ಲಕ್ಷ ಬೈಕ್ ಸವಾರರ ಜಾಥಾ ಯೋಜನೆ. ಆದರೆ ಅವು ಗೋತಾ ಹೊಡೆಯುತ್ತಿರುವುದು ವಿಶೇಷ! ಈ ಬೈಕ್‌ವಾಲಾ ಗಳನ್ನೇ ಕಾರ್ಯಕರ್ತರನ್ನಾಗಿ ಬಳಸಿ ಇಡೀ ಕರ್ನಾಟಕದ ಎಲ್ಲಾ ಬೂತ್ ಮತ್ತು ಮತದಾರರನ್ನು ತಲುಪುವುದು ಅದರ ಉದ್ದೇಶಿತ ಗುರಿ. ಆದರೆ ಯಾತ್ರೆಯ ಉದ್ಘಾಟನೆಗೆ ನಿರೀಕ್ಷಿಸಿದ ಜನ ಸೇರಲಿಲ್ಲ. ಕಾಂಗ್ರೆಸ್ ಪಕ್ಷವನ್ನು ಕಿತ್ತೊಗೆಯಬೇಕೆಂದು ಗುಡುಗಿ ಲಕ್ಷಾಂತರ ಖಾಲೀ ಖುರ್ಚಿಗಳಿಗೆ ಅಮಿತ್ ಶಾ ಕರೆ ನೀಡಿ ಹೋಗಿದ್ದರು! ಬಂದ ಬೈಕ್ ಸವಾರರೂ ಕ್ಷೀಣವಾಗಿದ್ದರು. ಮುಂದೆ ತುಮಕೂರಿನಲ್ಲಿ ಸ್ವಪಕ್ಷೀಯರೇ ಜಾಥಾ ವಾಹನದ ಮೇಲೆ ಕಲ್ಲು ತೂರಿ ದಾಂಧಲೆ ಮಾಡಿದ್ದರು. ಹೀಗಾಗಿಯೇ ತುಂಬಾ ಹತಾಶೆಯಾದ ಶಾ ಯಾತ್ರೆಯ ಯಶಸ್ಸಿನ ಬಗ್ಗೆ ಚರ್ಚಿಸಲು ಅಲ್ಲ, ಅಲ್ಲೊದಗಿದ ದುಸ್ಥಿತಿಯ ಬಗ್ಗೆ ತನಿಖೆ ನಡೆಸಲು ಕೇಂದ್ರ ಸಚಿವ ಜಾವಡೇಕರ್‌ರನ್ನು ಕಳುಹಿಸಿದ್ದಾರೆ. ನಿಜಕ್ಕೂ ತನಿಖೆ ನಡೆದರೆ ಬಹಳ ನಾಯಕರ ತಲೆದಂಡ ಆಗಬೇಕಾದೀತು. ಹಾಗಾಗುವ ಸಾಧ್ಯತೆ ಕಡಿಮೆ. ಒಂದು ಬಣವಂತೂ ಅದನ್ನೆಲ್ಲಾ ಯಡಿಯೂರಪ್ಪನವರ ತಲೆಗೆ ಕಟ್ಟಲು ತುದಿಗಾಲಲ್ಲಿ ನಿಂತಿದೆ.

ಆರೋಪಗಳ ಸುರಿಮಳೆ

ಬಿಜೆಪಿಯೇನೋ ಸಿದ್ದರಾಮಯ್ಯನವರ ಸರಕಾರದ ಹಗರಣಗಳನ್ನು ಬಯಲಿಗೆಳೆಯುವುದಾಗಿ ಹೊರಟಿದೆ. ಆದರೆ ಬರೀ ಹಗರಣಗಳಲ್ಲೇ ಮುಳುಗಿದ್ದ ಅದರ ನಾಯಕರ ಹಗರಣಗಳು ಸಾಲು, ಸಾಲಾಗಿ ಮತ್ತೇ ವೇದಿಕೆ ಹತ್ತುತ್ತಿವೆ. ಇದರಲ್ಲಿ ಬಿಜೆಪಿಗೆ ಹೆಚ್ಚಿನ ಲಾಭ ಸಿಗುವುದು ಅನುಮಾನ. ಈ ಉಗಿದಾಟದಲ್ಲಿ ಸತ್ಯ ಹೊರ ಬರುತ್ತಿದೆಯಾದರೂ ಕ್ರಮದ ಖಾತ್ರಿಯೇನಿಲ್ಲ. ಅವು ಮನರಂಜನೆಯ ಮಟ್ಟಕ್ಕೆ ನಿಲ್ಲುತ್ತಿವೆ. ಕೆಲವು ಸೇಡಿನ ಬಳಕೆಯ ಸ್ಪರ್ಧೆಯಾಗಿ ಮಾರ್ಪಟ್ಟಿರುವುದು ಅನಾರೋಗ್ಯಕರ.

ಒಳ ಜಗಳದಲ್ಲಿ..?

ಕರ್ನಾಟಕದಲ್ಲಿ ಯಡಿಯೂರಪ್ಪ ನವರೇ ಮುಂದಿನ ಮುಖ್ಯಮಂತ್ರಿ ಎಂದು ಬಹಿರಂಗದಲ್ಲಿ ಬಿಜೆಪಿ ನಾಯಕರು ಹೇಳುತ್ತಿದ್ದರೂ ಅದರ ಒಳ ಸುಳಿ ಗೊತ್ತಿರುವವರಿಗೆ ಅದು ನಿಜವಲ್ಲ ಎಂಬ ಖಾತ್ರಿ ಇದೆ. ಯಡಿಯೂರಪ್ಪ ಸಿ.ಎಂ. ಆಗುವುದು ಬಿಜೆಪಿ–ಆರೆಸ್ಸೆಸ್ ಗೂ ಬೇಕಿಲ್ಲ. ಅದಕ್ಕೆ ಬೆನ್ನೆಲುಬು ಇಲ್ಲದ ಜೀ ಹುಜೂರು ಸೇವಕ ಬೇಕಿದೆ. ಅದ್ದರಿಂದಲೇ ಸಂತೋಷ್ ಎನ್ನುವ ಸ್ವಯಂಸೇವಕನನ್ನು ಮುಂದಿಟ್ಟು ಯಡಿಯೂರಪ್ಪನವರನ್ನು ಕನಸಿನ ಖುರ್ಚಿಯಿಂದ ಉಚ್ಚಾಟಿಸಲು ಪ್ರಯತ್ನಿಸುತ್ತಿದೆ. ಸಂತೋಷ್ ಆಯ್ಕೆ ಅಂತಿಮವೇ ಎಂದರೆ ಅದೂ ಅಲ್ಲ. ಇದೇ ಹೊತ್ತಿನಲ್ಲಿ ಆದಿಚುಂಚನಗಿರಿಸ್ವಾಮಿಗೂ, ಮಾದಾರ ಚೆನ್ನಯ್ಯ ಸ್ವಾಮಿಗೂ ಆಶೆ ಹುಟ್ಟಿಸಿದೆ. ರಾಜಕೀಯ ಬೇರುಗಳು, ಅನುಭವವೂ ಇಲ್ಲದ ಕೇಂದ್ರ ಹಾಗೂ ಸಂಘದ ದುರ್ಬಲ ಕೈಗೊಂಬೆ ಮುಖ್ಯಮಂತ್ರಿ ಅದಕ್ಕೆ ಬೇಕು!

ಯಡಿಯೂರಪ್ಪನವರನ್ನು ಉತ್ತರ ಕರ್ನಾಟಕ ಇಲ್ಲವೇ ಹೈದ್ರಾಬಾದ್ ಕರ್ನಾಟಕದಿಂದ ಸ್ಪರ್ಧೆಗೆ ಇಳಿಯುವಂತೆ ಹೇಳಿದ್ದರಲ್ಲಿ ಕೆಲ ಲೆಕ್ಕಾಚಾರಗಳಿದ್ದವು. ಆರಂಭದಲ್ಲಿ ಒಪ್ಪಿದ್ದ ಅವರು ನಂತರ ಪಕ್ಷದೊಳಗಿನ 'ಬಗಲ್ ಮೇ ಚೂರಿ'ಗಳನ್ನು ನೋಡಿ ತಮ್ಮ ಊರೇ ಸೇಫ್ ಎಂದು ತಿಳಿಸಿದರು.

ಅಲ್ಲಿ ಸ್ಪರ್ಧೆ ಯಾರೇ ಮಾಡಲಿ ಈ ಭಾಗವನ್ನು ಬಿಜೆಪಿ ಆಯ್ಕೆ ಮಾಡಿಕೊಳ್ಳಲು ಪ್ರಮುಖ ಕಾರಣವಿದೆ. 13 ಜಿಲ್ಲೆಗಳನ್ನು ಒಳಗೊಂಡಿರುವ ಈ ಪ್ರದೇಶದಲ್ಲಿ 96 ವಿಧಾನಸಭಾ ಸ್ಥಾನಗಳು ಬರುತ್ತವೆ. 2013 ರ ಚುನಾವಣೆಯಲ್ಲಿ ಬಿಜೆಪಿ ಗೆದ್ದದ್ದು ಕೇವಲ 22 ಮಾತ್ರ. ಅಲ್ಲಿ ಕಾಂಗ್ರೆಸ್ 57, ಜೆ.ಡಿ.ಎಸ್ 6, ಇತರೆ 11 . ಲಿಂಗಾಯತರ ನಡುವೆಯೇ ಬಿಜೆಪಿಗೆ ತಳಹದಿ ಎಂದು ಕೊಳ್ಳುತ್ತಿರುವ ಈ ಭಾಗದಲ್ಲಿ ಈ ಸ್ಥಿತಿಯನ್ನು ಇಟ್ಟುಕೊಂಡು ಯುದ್ಧಕ್ಕೆ ಹೋಗಲು ಬಿಜೆಪಿ ಸಿದ್ಧವಿಲ್ಲ. ಮೇಲಾಗಿ ಲಿಂಗಾಯತ–ವೀರಶೈವ ಪ್ರಕರಣದಲ್ಲಿ ಅದು ಲಿಂಗಾಯತರ ನಡುವಿನಿಂದ ಮತ್ತಷ್ಟೂ ದೂರ ಸರಿದಿದೆ ಎನ್ನುವ ಸ್ಥಿತಿ ಇದೆ. ಹೀಗಾಗಿ ಗೆಲುವಿಗೆ ಏನಾದರೂ ಮಾಡಬೇಕೆಂಬ ಯೋಚನೆಯಲ್ಲಿ ಅದು ಮುಳುಗಿದೆ. ಇಲ್ಲವಾದರೆ 150 ಸ್ಥಾನಗಳು ಎಲ್ಲಿಂದ ಬರಬೇಕು?

ಮತ್ತೊಂಡೆದೆ, ದಕ್ಷಿಣ ಕರ್ನಾಟಕದ ಒಕ್ಕಲಿಗರ ನಡುವೆ ತನ್ನ ನೆಲೆ ರೂಪಿಸಿಕೊಳ್ಳಲು ಅದು ಹೆಣಗುತ್ತಿದ್ದರೂ ಅದು ಜೆಡಿ–ಎಸ್ ನಿಂದಾಗಿ ಕೈಗೂಡುತ್ತಿಲ್ಲ. ಜೊತೆಗೆ ಕಾಂಗ್ರೆಸ್ ಸಹ ಅಲ್ಲಿದೆ. ಈ ಹಿನ್ನೆಲೆಯಲ್ಲಿಯೂ ಎಸ್.ಎಂ.ಕೃಷ್ಣ ಮತ್ತು ಈಗ ಮತ್ತೇ ಡಿ.ಕೆ.ಶಿವಕುಮಾರ್ ರವರಿಗೆ ಅದು ಗಾಳ ಹಾಕುತ್ತಿರುವುದು. ಉಡುಪಿಯಲ್ಲಿ ಯೋಜಿತವಾಗಿದ್ದ ರಾಮಮಂದಿರ ನಿರ್ಮಾಣಕ್ಕಾಗಿ ನಡೆದಿರುವ ಆರೆಸ್ಸೆಸ್‌ನ (ವಿ.ಹಿಂ.ಪ)ಧರ್ಮ ಸಂಸತ್ತಿಗೆ(?!) ಒಕ್ಕಲಿಗರ ಸ್ವಾಮೀಜಿ ಮತ್ತು ತುಮಕೂರಿನ ಶಿವಕುಮಾರಸ್ವಾಮೀಜಿ (ಪ್ರತಿನಿಧಿ) ಯವರನ್ನು ಒಳಗೊಳ್ಳುತ್ತಿದೆ. ಈ ಧರ್ಮ ಸಂಸತ್ತು (!?) ಮೂಲಕ ಕರ್ನಾಟಕದಲ್ಲಿ ರಾಮಮಂದಿರ–ಬಾಬ್ರಿ ಮಸೀದಿಯ ನೆನಪುಗಳನ್ನು ಕೆದಕಿದೆ. 'ಹಿಂದುತ್ವ' ದ ವ್ಯಾಪಕ ಭಾವೋದ್ರೇಕದ ಕೋಮು ವಿಭಜನೆಯ ಭಾವನೆಗಳನ್ನು ಹುಟ್ಟು ಹಾಕಿದೆ. ಅದು ಮುಂದೆ ಗಲಭೆಗಳಾಗಿಸುವಲ್ಲಿ ಪರ್ಯವಸಾನಗೊಂಡರೂ ಆಶ್ಚರ್ಯವೇನಿಲ್ಲ. ಉಡುಪಿಯ ಮೇಳದಲ್ಲಿ ಭಾರತದ ಸಂವಿಧಾನವನ್ನು, ಬಾಬಾ ಸಾಹೇಬರ ಚಿಂತನೆಗಳನ್ನು ವಿಧ್ವಂಸಗೊಳಿಸುವ ಅಜೆಂಡಾಕ್ಕೆ ಮರು ಚಾಲನೆ ನೀಡಿದೆ.

ಮತ ವಿಭಜನೆ

ಜೊತೆಗೆ ಅದು ಹಿಂದಿನಂತೆ ತನಗೆ ವಿರೋಧವಾಗಿರುವ ಮತಗಳನ್ನು ಒಡೆಯುವ ಕೆಲಸವನ್ನೂ ಮಾಡುವುದರಲ್ಲಿ ಅನುಮಾನವಿಲ್ಲ. ವಿರೋಧದ ಮತಗಳು ನೇರವಾಗಿ ಎದುರು ಪಕ್ಷದಲ್ಲಿ ಕ್ರೋಡೀಕರಣಗೊಳ್ಳಬಾರದಲ್ಲ. ಅದಕ್ಕಾಗಿ ಚುನಾವಣಾ ಸಂದರ್ಭದಲ್ಲಿ ತಾನೇ ಪ್ರಾಯೋಜಿಸಿ ಕೆಲವು ಅಭ್ಯರ್ಥಿಗಳನ್ನು ನಿಲ್ಲಿಸುತ್ತದೆ. ಅದಕ್ಕಾಗಿ ಈಗಲೇ ಪ್ರಯತ್ನ ನಡೆಸಿರುವುದನ್ನು ನಿರಾಕರಿಸಲಾಗುವುದಿಲ್ಲ. ನಟ ಉಪೇಂದ್ರ, ಮಾಜಿ ಡಿ.ವೈ.ಎಸ್.ಪಿ. ಅನುಪಮಾ ಶೆಣೈ ರವರ ಹೊಸ ಪಕ್ಷಗಳನ್ನು ಹೇಗೆ ನೋಡಬೇಕು? ಅವರು ಪರಿವಾರದ ನಂಟು ಬಿಟ್ಟಿದ್ದು ಗೊತ್ತಿಲ್ಲ. ಇವರು ಬಿಜೆಪಿಯನ್ನು ಸೋಲಿಸುವರೇ ಅಥವಾ 1000, 2000 ಓಟುಗಳೂ ನಿರ್ಣಾಯಕವಾಗುವ ಕ್ಷೇತ್ರಗಳಲ್ಲಿ ತಮ್ಮದೇ 'ಪಾತ್ರ' ವಹಿಸುವರೇ? ಇವರಿಗೆ ಪಕ್ಷ ಸ್ಥಾಪಿಸುವಷ್ಟು ಹಣ ಎಲ್ಲಿಂದ ಬರುತ್ತದೆ? ಆ ಮೂಲಗಳು ಯಾವುವು?

ಮುಂದೆ ಹೇಗೆ?

ಇಷ್ಟೆಲ್ಲಾ ವರಸೆಗಳ ನಂತರವೂ ಬಿಜೆಪಿ ಅಧಿಕಾರ ದಕ್ಕಿಸಿಕೊಳ್ಳುವ ಆತಂಕದಿಂದ ಮುಕ್ತವಲ್ಲ. ತಂತ್ರಗಳು ಕುತಂತ್ರಗಳಾಗಿ, ತಿರು ಮಂತ್ರಗಳಾಗುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಆದರೆ ಈ ಸನ್ನಿವೇಶಗಳನ್ನು ಸೆಕ್ಯುಲರ್ ಶಕ್ತಿಗಳು ಹೇಗೆ ಬಳಸುತ್ತವೆ ಎಂಬುದು, ಕಾಂಗ್ರೆಸ್, ಬಿಜೆಪಿಯೇತರ ಶಕ್ತಿಗಳು ಹೇಗೆ ಮುನ್ನಡೆಯುತ್ತವೆ ಎಂಬುದೂ ಸಹ ನಿರ್ಣಾಯಕ. ಇವೆಲ್ಲವುಗಳ ನಡುವೆ ಬಲವಿದ್ದವರತ್ತ ಬಾಗುವ ಧ್ಯೇಯದೊಂದಿಗೆ ಜೆಡಿ–ಎಸ್ ಸಹ ಹೆಜ್ಜೆ ಹಾಕುತ್ತಿರುವುದು ಸಹ ಗಮನಿಸಬೇಕಾದ ವಿದ್ಯಮಾನ. ●

ರಾಜ್ಯದ ಗಮನ ಸೆಳೆದ ಕಟ್ಟಡ ಕಾರ್ಮಿಕರ ಐಕ್ಯ ಚಳವಳಿ



ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಮಂಡಳಿಯು 22-06-2017 ರಂದು ನಡೆಸಿದ ಮಂಡಳಿ ಸಭೆಯಲ್ಲಿ ಹಾಗೂ ನಂತರದಲ್ಲಿ ಕೈಗೊಂಡ ಕೆಲವು ಪ್ರಮುಖ ತೀರ್ಮಾನಗಳು (ಇವುಗಳ ವಿವರಗಳನ್ನು ಸಂಚಿಕೆ 48 ಪುಟ 5ರಲ್ಲಿ ಕೊಡಲಾಗಿದೆ) ರಾಜ್ಯಕಟ್ಟಡ ನಿರ್ಮಾಣ ಕಾರ್ಮಿಕರ ಭವಿಷ್ಯದ ಬದುಕು, ಅವರ ಮಧ್ಯ ಕೆಲಸ ಮಾಡುತ್ತಿರುವ ಕಾರ್ಮಿಕ ಸಂಘಗಳ ಕೆಲಸದ ಮೇಲೆ ತೀವ್ರ ಪರಿಣಾಮ ಬೀರುತ್ತಿತ್ತು. ಈ ಕಾರಣದಿಂದಾಗಿ ಕೆಲವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಆಗ್ರಹಿಸಿ ಇದೇ ಪ್ರಥಮ ಬಾರಿಗೆ CITU, NCL, INTUC, AITUC, TUCC, HMKP, BMS ಮುಂತಾದ ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಸಂಯೋಜಿತ ಕಟ್ಟಡ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ನವೆಂಬರ್ 27 ರಿಂದ ಬೆಂಗಳೂರಿನಲ್ಲಿರುವ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಎದುರು ಸತತ ನಾಲ್ಕು ದಿನಗಳ ಕಾಲ ಆಹೋರಾತ್ರಿ ಅನಿರ್ಧಿಷ್ಟ ಹೋರಾಟವನ್ನು ಯಶಸ್ವಿಯಾಗಿ ನಡೆಸಿದರು.

ನವೆಂಬರ್ 27 ರಂದು ಸುಮಾರು ಐದು ಸಾವಿರಕ್ಕಿಂತ ಹೆಚ್ಚಿನ ಕಾರ್ಮಿಕರು ಕಾರ್ಮಿಕ ಭವನದ ಮುಂದೆ ಸೇರಿ ಪ್ರತಿಭಟನೆ ಆರಂಭಿಸಿದರು. ಈ ಸಂದರ್ಭದಲ್ಲಿ ಸಂಘಟನೆಗಳ ವಿವಿಧ ನಾಯಕರುಗಳಲ್ಲದೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮೀ, ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ವಿ. ಅನಂತಸುಬ್ಬರಾವ್, ಐಎನ್‌ಟಿಯುಸಿ ರಾಜ್ಯ ಅಧ್ಯಕ್ಷ ರಾಕೇಶ ಮಲ್ಲಿ, ಬಿಎಂಎಸ್ ರಾಜ್ಯಪ್ರಧಾನ ಕಾರ್ಯದರ್ಶಿ ರಾಮಮೂರ್ತಿ, ಎನ್.ಸಿ.ಎಲ್ ಅಧ್ಯಕ್ಷರಾದ ಎನ್.ಪಿ. ಸ್ವಾಮಿ, ಹೆಚ್.ಎಂ.ಕೆ.ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಳಪ್ಪ, ಟಿಯುಸಿಸಿ ರಾಜ್ಯ ಅಧ್ಯಕ್ಷರಾದ ಜಿ.ಆರ್. ಶಿವಶಂಕರ್, ಎಐಸಿಸಿಟಿಯು ರಾಜ್ಯ ಉಪಾಧ್ಯಕ್ಷ ಬಾಲನ್ ಹಾಗೂ ಮಾಜಿ ಶಾಸಕ ನ.ಲ. ನರೇಂದ್ರ ಬಾಬು, ಶಾಸಕ ಸುರೇಶಕುಮಾರ್, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಹೆಚ್.ಎನ್. ಗೋಪಾಲಗೌಡ, ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನಿರಾಜು ಸೇರಿದಂತೆ ಕಟ್ಟಡ ಕಾರ್ಮಿಕ ಸಂಘಗಳ ನಾಯಕರು ಮಾತನಾಡಿದರು.

ಸಂಜೆ ಕಾರ್ಮಿಕ ಇಲಾಖೆ ಜಂಟಿ ಆಯುಕ್ತರಾದ ನರಸಿಂಹಮೂರ್ತಿ ಮನವಿ ಸ್ವೀಕರಿಸಿದರು. ಆದರೆ ಸಚಿವರು ಹಾಗೂ ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳು ಯಾವುದೇ ಮಾತುಕತೆಯನ್ನು ಹೋರಾಟ ನಿರತ ಮುಖಂಡರ ಜೊತೆ ನಿಗದಿ ಮಾಡದಿದ್ದರಿಂದ ಹೋರಾಟವನ್ನು ಅಲ್ಲೇ ಅಡುಗೆ ತಯಾರಿಸಿ ಊಟ ಮಾಡುವ ಮೂಲಕ ಮುಂದುವರೆಸಲಾಯಿತು. ಚಳುವಳಿ ಎರಡನೇ ದಿನ ಕಳೆದರೂ ಯಾವುದೇ ಪ್ರತಿಕ್ರಿಯೆ ಬರದೇ ಇದ್ದಾಗ ನವೆಂಬರ್ 30 ರಂದು ನಡೆಯಲಿದ್ದ ಮಂಡಳಿ ಸಭೆಯನ್ನು ಮುತ್ತಿಗೆ ಹಾಕಲು ಹಾಗೂ ಅಲ್ಲಿಯವರೆಗೆ ಸರಣಿ ಸತ್ಯಾಗ್ರಹ ಮುಂದುವರೆಸಲು ನಿರ್ಧರಿಸಲಾಯಿತು. ಹೋರಾಟ ನಿರಂತರವಾಗಿ ಮುಂದುವರೆಯುತ್ತಿದ್ದಂತೆ ಹಲವು ಸಂಘಟನೆಗಳ ನಾಯಕರು ಸ್ಥಳಕ್ಕೆ ಬಂದು ಬೆಂಬಲಿಸಿ ಹಣಕಾಸು ಹಾಗೂ ಊಟ ಮತ್ತು ಉಪಹಾರದ ವ್ಯವಸ್ಥೆ ಮಾಡಿದರು.

ಮಾತುಕತೆ ಮತ್ತು ಡಿಸೆಂಬರ್ 9 ಸಭೆ ನಿಗದಿ : ಸಚಿವರು ಹಾಗೂ ಅಧಿಕಾರಿಗಳ ಈ ಹಠಮಾರಿ ಧೋರಣೆ ವಿರುದ್ದ ಸಂಘಟನೆಗಳ ನಿಯೋಗ ನವೆಂಬರ್ 29 ರಂದು ಗೃಹಸಚಿವ ಶ್ರೀ ರಾಮಲಿಂಗರೆಡ್ಡಿಯವರನ್ನು ಭೇಟಿ ಮಾಡಿ ಹೋರಾಟದ ಬೇಡಿಕೆಗಳ ಬಗ್ಗೆ ಮನವರಿಕೆ ಮಾಡಿತು. ಅವರ ಮಧ್ಯಪ್ರವೇಶದಿಂದಾಗಿ ಅದೇ ದಿನ ಕಾರ್ಮಿಕ ಇಲಾಖಾ ಕಾರ್ಯದರ್ಶಿ ಜೊತೆ ಸುಮಾರು 3 ಘಂಟೆಗಳ ಕಾಲ 18 ಬೇಡಿಕೆಗಳ ಕುರಿತು ಮಾತುಕತೆ ನಡೆಸಲಾಯಿತು. ಮತ್ತು ಡಿಸೆಂಬರ್ 9 ರಂದು ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಿಗದಿಯಾಗಿರುವ ಕುರಿತಂತೆ ಲಿಖಿತ ಪತ್ರವನ್ನು ಹೋರಾಟ ನಿರತ ಮುಖಂಡರಿಗೆ ನೀಡಲಾಯಿತು. ಇದಾದ ನಂತರ ಸಭೆ ನಡೆಸಿದ ಮುಖಂಡರು ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆಯುವ ನಿರ್ಧಾರಕ್ಕೆ ಬಂದರು. ಇದಾದ ಬಳಿಕ ಕಲ್ಯಾಣ ಮಂಡಳಿ ಸಭೆ ನವೆಂಬರ್ 30 ರಂದು ನಡೆದಿದೆ. ಆದರೆ ಅಲ್ಲಿ ಪೂರ್ಣ ಪ್ರಮಾಣದ ಫಲಿತಾಂಶ ಸಿಕ್ಕಿಲ್ಲವಾದರೂ ಚಳವಳಿಯಲ್ಲಿ ಎತ್ತಿದ ಹಲವು ಬೇಡಿಕೆಗಳನ್ನು ಭಾಗಶಃ ಈಡೇರಿಸಿಕೊಳ್ಳಲು ಸಾಧ್ಯವಾಗಿದೆ. ಡಿಸೆಂಬರ್ 9 ರ ಸಚಿವರ ಸಭೆ ಬಳಿಕಾ ಮುಂದಿನ ಹೋರಾಟದ ರೂಪುರೇಷ ಸಿದ್ದಗೊಳ್ಳಲಿದೆ.





ಪ್ರಮುಖ ಹಕ್ಕೊತ್ತಾಯಗಳು

- ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ಸೆಸ್ ಹಣ ಬಳಸಬೇಕು.
- ಮಾಲಿಕರಿಂದ ಪ್ರಮಾಣ ಪತ್ರ ರದ್ದುಗೊಳಿಸಬೇಕು:
- ಮದುವೆ ಹಾಗೂ ಹೆರಿಗೆಧನ ಸಹಾಯ ಮೊದಲಿನಂತೆ ಮುಂದುವರೆಸಬೇಕು:
- ಕಟ್ಟಡ ಕಾರ್ಮಿಕರಿಗೆ ಭವಿಷ್ಯನಿಧಿ ಜಾರಿ ಮಾಡಬೇಕು.
- ಇರುವ ಸೌಲಭ್ಯಗಳ ಧನ ಸಹಾಯ ಹೆಚ್ಚಿಸಿ, ಬಾಕಿ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕು.
- ಪ್ರತ್ಯೇಕ ಸಿಇಓ ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಅಗತ್ಯ ಸಿಬ್ಬಂದಿ ನೇಮಿಸಬೇಕು.
- ರಾಜ್ಯ ಸಲಹಾ ಸಮಿತಿಯನ್ನು ಕೂಡಲೇ ರಚಿಸಬೇಕು
- ನರೇಗಾ ಕಾರ್ಮಿಕರಿಗೆ ಸೌಲಭ್ಯ ನೀಡಲು ಕೇಂದ್ರ ಸರಕಾರದ ನಿಧಿ ಬಳಸಿ
- ಮರಳು ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಿ
- ಕಟ್ಟಡ ಸಾಮಗ್ರಿಗಳ ಬೆಲೆಗಳನ್ನು ನಿಯಂತ್ರಿಸಬೇಕು.
- ಕಾರ್ಮಿಕ ಬಂಧು ನೇಮಕಾತಿ ನಿಲ್ಲಿಸಬೇಕು

– ಕೆ. ಮಹಾಂತೇಶ ●

"ಮಾತೃಪೂರ್ಣ ಯೋಜನೆ ಜಾರಿಯ ಸಮಸ್ಯೆಗಳನ್ನು ಸರಿಪಡಿಸಿ"

ಮಾತೃಪೂರ್ಣ ಯೋಜನೆ ಜಾರಿಯಲ್ಲಿ ಇರುವ ಸಮಸ್ಯೆಗಳನ್ನು ಸರಿಪಡಿಸುವುದು, ಅಂಗನವಾಡಿ ಕೇಂದ್ರಗಳ ವೆಚ್ಚಗಳಿಗಾಗಿ ಬಾಲ ವಿಕಾಸ ಸಮಿತಿ ಅಧ್ಯಕ್ಷರೊಂದಿಗೆ ಜಂಟಿ ಖಾತೆ ತೆರೆಯುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದರು. ಇಂತಹ ಪ್ರತಿಭಟನೆಗಳು ನಡೆದಿರುವ ವರದಿಗಳು ತುಮಕೂರು, ಉತ್ತರ ಕನ್ನಡ, ಹಾಸನ, ಹುಣಸೂರು, ದೇವದುರ್ಗ ಮುಂತಾದ ಸ್ಥಳಗಳಿಂದ ಬಂದಿವೆ.

ತುಮಕೂರು ನಗರದ ಕೆ.ಎಸ್.ಫಿ.ಸಿ. ಇಂಡಸ್ಟ್ರಿಯಲ್ ಪ್ರದೇಶದಲ್ಲಿರುವ ಸಿಡಿಪಿಓ ಕಚೇರಿ ಎದುರು ಕಾರ್ಯಕರ್ತೆಯರು (ಸಂಚಿಕೆಯ ಮುಖಪುಟದಲ್ಲಿರುವ ಚಿತ್ರ) ತಮ್ಮ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿದರು.

ಎಲ್ಲಾ ತಾಲೂಕುಗಳಲ್ಲಿ ಖಾತೆ ತೆಗೆಸಿ ಬಹಳಷ್ಟು ಸಮಸ್ಯೆಗಳು ಉಂಟಾಗಿದ್ದು ನಂತರ ಖಾತೆಗಳನ್ನು ಬಂದ್ ಮಾಡಲಾಯಿತು. ಮತ್ತೆ ಅದೇ ರೀತಿ ಆದೇಶ ನೀಡುವುದು ಕಾರ್ಯಕರ್ತೆಯರನ್ನು ಬಲಿಪಶು ಮಾಡುವುದು ಸರಿ ಅಲ್ಲ. ಹಾಗಾಗಿ ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸಬೇಕು. ಮಾತೃಪೂರ್ಣ ಯೋಜನೆ ಜಾರಿ ಮಾಡಲು ಹಲವು ಸಮಸ್ಯೆಗಳಿದ್ದು, ಇವುಗಳನ್ನು ಸರಿಪಡಿಸಿ ಯೋಜನೆ ಸಮರ್ಪಕ ಜಾರಿಗೆ ವ್ಯವಸ್ಥೆ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ತರಕಾರಿ, ಮೊಟ್ಟೆ, ಗ್ಯಾಸ್ ಖರೀದಿಸಲು ಮುಂಚಿತವಾಗಿ ಕಾರ್ಯಕರ್ತೆಯರ ಖಾತೆಗೆ ಹಣ ಜಮಾ ಮಾಡಬೇಕು. ಇವುಗಳ ಖರೀದಿಯನ್ನು ಕಾರ್ಯಕರ್ತೆಯರ ಗೌರವಧನದಲ್ಲಿ ಭರಿಸಲು ಸಾಧ್ಯವಿಲ್ಲ. ಇದೇ ವೇಳೆ ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಆಹಾರ ಪದಾರ್ಥ ಸರಬರಾಜು ಆಗಬೇಕು. ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಬೇಕು ಎಂದು ಪ್ರತಿಭಟನಾಕಾರ ಅಂಗನವಾಡಿ ತಾಯಂದಿರು ಒತ್ತಾಯಿಸಿದರು.

ಅಡಿಗೆ ಮಾಡಲು ಬೇಕಾದ ಪಾತ್ರೆಗಳು ಮತ್ತೊಂದು ಕುಕ್ಕರ್, ಡಬ್ಬಲ್ ಒಲೆ, ಡಬ್ಬಲ್ ಸಿಲಿಂಡರ್, ಕುಡಿಯುವ ನೀರು, ಅಂಗನವಾಡಿ ಕೇಂದ್ರಕ್ಕೆ ಪೂರೈಕೆ ಮಾಡಬೇಕು. ಕಾರ್ಯಕರ್ತೆಯರಿಗೆ ಈಗ ನೀಡುತ್ತಿರುವ ದಾಖಲೆಗಳು ಹೆಚ್ಚು ಹೊರೆ ಆಗಿರುವುದರಿಂದ ಕಡಿಮೆ ದಾಖಲೆ ನಿರ್ವಹಣೆ ಆಗಬೇಕು. ಇದಕ್ಕಾಗಿ ಹೊಸ ದಾಖಲೆಗಳನ್ನು ಕೊಡಬೇಕು ಎಂದೂ ಆಗ್ರಹಿಸಿದರು.

ಎಲ್ಲಾ ತಾಲೂಕುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿತಿಂಗಳ 5ನೇ ತಾರೀಖಿನ ಒಳಗೆ ಗೌರವಧನ ಬಿಡುಗಡೆ ಮಾಡಬೇಕು. ರಿಟೈರ್ಡ್ ಆದ ಕಾರ್ಯಕರ್ತೆಯರಿಗೆ, ಸಹಾಯಕಿಯರಿಗೆ ನಿವೃತ್ತಿ ಹಣ ತಕ್ಷಣ ಬಿಡುಗಡೆ ಆಗಬೇಕು. ಮರಣ ಹೊಂದಿದ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪರಿಹಾರ ನಿಧಿ ಬಿಡುಗಡೆ ಮಾಡಬೇಕು ಎಂದು ತಿಳಿಸಿದರು. ಹತ್ತು ವರ್ಷಕ್ಕಿಂತ ಹೆಚ್ಚು ಕಾಲ ನಗರದಲ್ಲಿ ಇರುವ ಮೇಲ್ವಿಚಾರಕಿಯರನ್ನು ಕೂಡಲೇ ವರ್ಗಾವಣೆ ಮಾಡಬೇಕು. ಅನಗತ್ಯ ಕಿರುಕುಳಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಫೆಬ್ರವರಿ 2015ರಲ್ಲಿ ತಡೆಹಿಡಿದ 15 ದಿನಗಳ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಅಂಗನವಾಡಿ ಕೇಂದ್ರಗಳ ಬಾಡಿಗೆ ಹಣವನ್ನು ಪ್ರತಿ ತಿಂಗಳೂ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಖಾಲಿ ಇರುವ ಅಂಗನವಾಡಿ ಕೇಂದ್ರಕ್ಕೆ ಅರ್ಹ ಸಹಾಯಕಿಯರಿಗೆ ಮುಂಬಡ್ತಿ ನೀಡಬೇಕು. ಖಾಲಿ ಇರುವ ಕೇಂದ್ರಕ್ಕೆ ವರ್ಗಾವಣೆ ಕೇಳಿದ ಕಾರ್ಯಕರ್ತೆಯರು, ಸಹಾಯಕಿಯರಿಗೆ ವರ್ಗಾವಣೆ ನೀಡಿ ನಂತರ ಹೊಸ ನೇಮಕಾತಿ ಮಾಡಬೇಕು. ಖಾಲಿ ಇರುವ ಸಹಾಯಕಿ ಮತ್ತು ಕಾರ್ಯಕರ್ತೆಯರ ಹುದ್ದೆಗಳನ್ನು ಕಾಲಕಾಲಕ್ಕೆ ತುಂಬಬೇಕು ಎಂದು ಮನವಿ ಮಾಡಿದರು.

ನಗರ ಪ್ರದೇಶದಲ್ಲಿರುವ ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರನ್ನು ನೀಡಬೇಕು. ಮಾತೃಪೂರ್ಣ ಕೆಲಸ ಹೆಚ್ಚು ಇರುವುದರಿಂದ ಮಿನಿ ಕೇಂದ್ರಕ್ಕೆ ಸಹಾಯಕಿ ಹಾಗೂ ಫಲಾನುಭವಿಯ ಆಧಾರದ ಮೇಲೆ ಮತ್ತೊಬ್ಬ ಸಹಾಯಕಿಯನ್ನು ಎಲ್ಲಾ ಕೇಂದ್ರಗಳಿಗೆ ನೀಡಬೇಕು. ಬೇರೆ ಬೇರೆ ಇಲಾಖೆ ಕೆಲಸಗಳನ್ನು ಅಂಗನವಾಡಿ ನೌಕರರಿಗೆ ವಹಿಸಬಾರದು. ಅಮಾನ್ಯಗೊಳಿಸಿದ ಹಾಗೂ ಡಿಸ್ಮಿಸ್ ಆದ ನೌಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡು ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕು ಎಂದು ಹೇಳಿದರು. ●


ಹಾಸನ


ಹುಣಸೂರು

ಕೆ.ಪಿ.ಎಂ.ಇ. 2017 ತಿದ್ದುಪಡಿ
ಹಲ್ಲು ಕಿತ್ತ ಹಾವಲ್ಲ, ಬರಿಯ ಬೊಗಳುವ ನಾಯಿ ಆದೀತೆ?

ಕೆ.ಪಿ.ಎಂ.ಇ ಕಾಯಿದೆ 2007ಕ್ಕೆ ಸರಕಾರ ತಂದ ತಿದ್ದುಪಡಿ ವೈದ್ಯರು, ಸರಕಾರ ಮತ್ತು ಸಾರ್ವಜನಿಕರ ಮಧ್ಯೆ ತೀವ್ರ ವಾಗ್ವಾದಕ್ಕೆ ಕಾರಣವಾಗಿತ್ತು. ಸಾರ್ವಜನಿಕರು, ಜನಾರೋಗ್ಯ ಚಳುವಳಿ, ಸಾರ್ವಜನಿಕರು ಒಂದು ಕಡೆ; ವೈದ್ಯರು, ಆಸ್ಪತ್ರೆ ಮಾಲಕರು, ಸರಕಾರ ಆಳುವ–ವಿರೋಧ ಪಕ್ಷಗಳಲ್ಲಿ ಇರುವ ಖಾಸಗಿ ಆಸ್ಪತ್ರೆ ಉದ್ಯಮದ ಪ್ರಬಲ ಲಾಬಿ ಇನ್ನೊಂದು ಕಡೆ. ವೈದ್ಯರ ಮುಷ್ಕರ, ಹತ್ತಾರು ಸಾವುಗಳಿಗೆ ಕಾರಣವಾಗಿ ರಾಷ್ಟ್ರೀಯ ಗಮನ ಸೆಳೆದಿತ್ತು. ಕೊನೆಗೆ ಸರಕಾರ ಮತ್ತು ಖಾಸಗಿ ವೈದ್ಯರ ನಡುವೆ ಮಾತುಕತೆ ನಡೆದು ಪರಸ್ಪರ ಒಪ್ಪಲಾದ ತಿದ್ದುಪಡಿಗಳು ವಿಧಾನಸಭೆಯಲ್ಲಿ ಮಂಜೂರಾಗಿವೆ. ಆದರೆ ಈ ತಿದ್ದುಪಡಿಗಳ ನಂತರ, ಈ ಕಾಯಿದೆ ಬರಿಯ ಹಲ್ಲು ಕಿತ್ತ ಹಾವಾಗಿದೆ ಎಂಬ ಟೀಕೆ ಕೇಳಿ ಬಂದಿದೆ.

ಜೈಲಿಗೆ ಕಳಿಸುವ ಅಂಶ ಬಿಟ್ಟರೆ ಹಿಂದೆ ಪ್ರಸ್ತಾವಿಸಲಾದ ಯಾವುದೇ ಪ್ರಮುಖ ಅಂಶಗಳನ್ನು ಕೈ ಬಿಡಲಾಗಿಲ್ಲ. ಕೆಲವು ಅಂಶಗಳನ್ನು (ಉದಾ: ದಂಡ ಕಡಿಮೆ ಮಾಡಿರುವುದು) ತೆಳುಗೊಳಿಸಿರುವುದು ಬಿಟ್ಟರೆ, ತಿದ್ದುಪಡಿಗಳು 'ಜನಪರ'ವಾಗಿಯೇ ಇವೆ. 2007ರ ಮೂಲ ಕಾಯಿದೆಗೆ ಇನ್ನಷ್ಟು ಮೊನಚು ಬಂದಿದೆ – ಅಂತ ತಿದ್ದುಪಡಿಗಳನ್ನು ವಿಶ್ಲೇಷಿಸುವ ಈ ಲೇಖನದಲ್ಲಿ ಹೇಳುತ್ತಾರೆ, ಹಿಂದೆ ಜನಾರೋಗ್ಯ ಚಳುವಳಿಯ ನಾಯಕರೂ ಜನಪರ ವೈದ್ಯರೂ ಆಗಿರುವ ಡಾ. ಪ್ರಕಾಶ್ ಸಿ ರಾವ್.

ಆದರೆ 2017ರ ತಿದ್ದುಪಡಿಗಳು ವಾಸ್ತವದಲ್ಲಿ ಅಸಹಾಯಕ ರೋಗಿ ಹಾಗೂ ಅವರ ಕುಟುಂಬವನ್ನು ವಿವಿಧ ರೀತಿಯಲ್ಲಿ ಶೋಷಿಸುತ್ತಿರುವ ವೈದ್ಯರು ಆಸ್ಪತ್ರೆಗಳನ್ನು ವಿಚಾರಣೆಗೊಳಿಸಿ ಶಿಕ್ಷಿಸಿ ಇಂತಹ ಶೋಷಣೆಯನ್ನು ನಿಲ್ಲಿಸುವ ಮಟ್ಟಿಗೆ ಕಟ್ಟು ನಿಟ್ಟಿನ ಜಾರಿ ಬರುವುದೇ? ಅದೇ ರೀತಿ ದರಗಳ ಮೇಲೆ ಮಿತಿ ಜಾರಿ ಮಾಡಲಾಗುವುದೇ? ಖಾಸಗಿ ವೈದ್ಯಕೀಯ ಲಾಬಿಯ ಬಲ ಮುರಿದು ಜಾರಿ ಮಾಡುವ ರಾಜಕೀಯ ಇಚ್ಛೆ ಮತ್ತು ಅದಕ್ಕೆ ಸಜ್ಜಾದ ಜಾರಿ ಯಂತ್ರ ಇದೆಯೇ? – ಎಂಬುದು ಪ್ರಮುಖ ಪ್ರಶ್ನೆ.

ಖಾಸಗಿ ಲಾಬಿ ಪ್ರಬಲವಾಗಿರುವ ಶಾಲಾ ಮತ್ತು ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ – ಟ್ಯೂಶನ್, ಕ್ಯಾಪಿಟೇಶನ್, ಡೊನೇಶನ್ ಫೀ ಗಳ ಮೇಲೆ ಕಾನೂನುಬದ್ಧ ಮಿತಿ; ಶಾಲೆಗಳಲ್ಲಿ ಆರ್.ಟಿ.ಇ. ವ್ಯವಸ್ಥೆ – ಮುಂತಾದವುಗಳ ಜಾರಿಯ ಅಭಾವದ ಪರಿಸ್ಥಿತಿ ನೋಡಿದರೆ ಈ ಬಗ್ಗೆ ಅನುಮಾನ ಮೂಡುವುದು ಸಹಜ. ಕೆ.ಪಿ.ಎಂ.ಇ. ಕಾಯಿದೆ ಹಲ್ಲು ಕಿತ್ತ ಹಾವಲ್ಲ, ಆದರೆ ಆರ್.ಟಿ.ಇ.ಮತ್ತಿತರ ಹಲವು ಶಿಕ್ಷಣ ಕ್ಷೇತ್ರದ ಕಾನೂನುಗಳಂತೆ ಬೊಗಳುವ ಆದರೆ ಕಚ್ಚದ ನಾಯಿ ಆದೀತೇ ಎಂಬ ಅನುಮಾನ ಉಳಿಯುತ್ತದೆ

ಉಡುಪಿಯ ಉತ್ತಮ ಸರಕಾರಿ ಆಸ್ಪತ್ರೆಯನ್ನು ಖಾಸಗಿಯವರಿಗೆ ಒಪ್ಪಿಸಿರುವುದು ಇದನ್ನು ಗಟ್ಟಿಗೊಳಿಸುತ್ತದೆ. ಅಲ್ಲದೆ ಸರಕಾರಿ ಆರೋಗ್ಯ ವ್ಯವಸ್ಥೆಯನ್ನು ವಿಸ್ತರಿಸದೆ ಗಟ್ಟಿಗೊಳಿಸದೆ ಖಾಸಗಿ ಆರೋಗ್ಯ ವ್ಯವಸ್ಥೆಯನ್ನು ನಿಯಂತ್ರಿಸುವುದು ಕಷ್ಟ ಸಾಧ್ಯ. ಕೊನೆಗೆ ಖಾಸಗಿ ಆರೋಗ್ಯ ಸಂಸ್ಥೆಗಳ ರಾಷ್ಟ್ರೀಕರಣ ಮತ್ತು ಸಾರ್ವತ್ರಿಕ ಆರೋಗ್ಯ ಸೇವೆ ಜಾರಿ ಮಾಡಲೇಬೇಕಾಗುತ್ತದೆ. ಈ ಬಗ್ಗೆ ಚರ್ಚೆ ನಡೆಯಬೇಕು.

ಡಾ. ಪ್ರಕಾಶ್ ಸಿ ರಾವ್

ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್‌ಗೆ (ಕೆ.ಪಿ.ಎಂ.ಇ.) ಸಂಬಂಧಿಸಿದ ಕಾನೂನು 2007ರಲ್ಲಿ ಜಾರಿಗೆ ಬಂದಿತ್ತು. ಈಗಿನ ಆರೋಗ್ಯ ಮಂತ್ರಿಗಳು, ಆ ಕಾನೂನಿನಲ್ಲಿದ್ದ ಕೊರತೆಗಳನ್ನು ಮನಗಂಡು, ಪರಿಹಾರ ಕಂಡುಹಿಡಿಯಲು ಜಸ್ಟಿಸ್ ವಿಕ್ರಮ್‌ಸೆನ್ ಸಮಿತಿಯನ್ನು ರಚಿಸಿ ಈ ಸಮಸ್ಯೆಗೆ ಪರಿಹಾರಕ್ಕಾಗಿ 2007ರ ಕಾನೂನಿನಲ್ಲಿ ತಿದ್ದುಪಡಿಯನ್ನು ತರಲು ತೀರ್ಮಾನಿಸಿದ್ದರು. ಅದು 2017 ತಿದ್ದುಪಡಿಯಾಗಿ ಹೊರಬಂದನಂತರ ವೈದ್ಯರೊಂದಿಗೆ ಚರ್ಚಿಸಿದಾಗ, ವೈದ್ಯರು ಅದರಲ್ಲಿನ ಕೆಲವು ಕಲಮುಗಳನ್ನು ಒಪ್ಪದಾದರು, ಹಾಗೂ ಬದಲಾವಣೆ ತರಲು ಸೂಚಿಸಿದರು. ಯಾವ ಕಲಮನ್ನು ಖಾಸಗೀ ವೈದ್ಯರು ಒಪ್ಪಲಿಲ್ಲ.

"ಜಿಲ್ಲಾ ದೂರು ಸಮಿತಿಯ ಅಗತ್ಯತೆ ಇಲ್ಲ, ತಪ್ಪಿತಸ್ಥ ವೈದ್ಯರಿಗೆ ಐದು ವರ್ಷ ಜೈಲು ಶಿಕ್ಷೆ ಕೊಡುವುದು, 5 ಲಕ್ಷ ದಂಡ ವಿಧಿಸುವುದು ಸರಿಯಲ್ಲ. ಈಗಾಗಲೇ ಹಲವಾರು ಕಾನೂನುಗಳಿದ್ದಾಗ ಈ ಕಾನೂನಿನ ಅಗತ್ಯತೆ ಇಲ್ಲ".

ಸರಕಾರ ಚಿಕಿತ್ಸೆ ಹಾಗೂ ಪರೀಕ್ಷೆಗಳ ಮೇಲೆ ಬೆಲೆ ನಿಗದಿ ಮಾಡಲು ಹೊರಟಿದೆ. ಅದು ವೈದ್ಯರಿಗೆ ಒಪ್ಪಿಗೆಯಿಲ್ಲ. ವೈದ್ಯರು "ನಾವು ಅಪಾರ ಹಣ ಖರ್ಚು ಮಾಡಿ ನಮ್ಮ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುತ್ತಿರುತ್ತೇವೆ' ಸರಕಾರ ನಿಗದಿ ಮಾಡಿದ ದರದಲ್ಲಿ ಕೊಟ್ಟರೆ ನಮಗೆ ನಷ್ಟವಾಗುವುದಿಲ್ಲವೇ?

ಈಗ ಉಂಟಾಗಿರುವ ಸಮಸ್ಯೆಗೆ ಪರಿಹಾರ ದೊರಕಿದೆ. ವೈದ್ಯರು ತಮ್ಮ ನಿಲುವನ್ನು ಬದಲಿ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿದ್ದರಿಂದ, ಈ ವಿಧೇಯಕ ಜನಸಾಮಾನ್ಯರ, ವೈದ್ಯರ ಒಳಿತಿಗೇ ಎಂಬುದನ್ನು ವೈದ್ಯರು ಒಪ್ಪಿಕೊಂಡಂತಾಗಿದೆ.

ತಿದ್ದುಪಡಿ ಕಾನೂನಿನಲ್ಲೇನಿದೆ?

22.11.2017 ರಂದು ತಿದ್ದುಪಡಿ ವಿಧಾನಮಂಡಲದ ಎರಡು ಸದನಗಳಲ್ಲಿ ಮಂಡನೆಯಾಗಿ, ಚರ್ಚೆಗಳೂ ನಡೆದಿದೆ. ಈ ತಿದ್ದುಪಡಿ ಕಾನೂನಿನಲ್ಲೇನಿದೆ ಎಂಬುದನ್ನು ತಿಳಿಯುವುದು ಅಗತ್ಯವಾಗುತ್ತದೆ.

2007 ರಲ್ಲಿ ಈ ಕಾನೂನು ಜಾರಿಯಾಗಿತ್ತು. ನೋಂದಣಿ ಹಾಗೂ ಕುಂದುಕೊರತೆ ನಿವಾರಣೆ ಉತ್ತಮ ಪಡಿಸಲು ಹಾಗೂ ಕೆಲವು ಲೋಪದೋಷಗಳನ್ನು ಗುರುತಿಸಿದ್ದ ಆರೋಗ್ಯ ಮಂತ್ರಿಗಳು ಅದನ್ನು ತಿದ್ದುಪಡಿ ಮಾಡುವುದಕ್ಕೆ ಮುಂದಾದರು.

ಜೈಲು ಶಿಕ್ಷೆ ಇಲ್ಲ

ವೈದ್ಯರ ವಿರುದ್ಧ ದೂರು ಇದ್ದಲ್ಲಿ ಅದು ಈ ಸಮಿತಿ ಎದುರಿಗೆ ಬರುತ್ತದೆ. ಈ ಸಮಿತಿ ಅದನ್ನು 3 ತಿಂಗಳಿಗೆ ಇತ್ಯರ್ಥ ಮಾಡಬೇಕು. ಈ ಸಮಿತಿಯಲ್ಲಿ ಜಿಲ್ಲಾಧಿಕಾರಿ, ಜಿಲ್ಲಾವೈದ್ಯಾಧಿಕಾರಿ, ಆಯುಷ್ ಅಧಿಕಾರಿ, ಒಬ್ಬ ಮಹಿಳಾ ಅಧಿಕಾರಿ ಇರುತ್ತಾರೆ. ಇವರಿಗೆ ಈ ವಿಷಯಗಳನ್ನು ಇತ್ಯರ್ಥಪಡಿಸಲು ತರಬೇತಿ ನೀಡಲಾಗಿರುತ್ತದೆ. ಆದರೆ ವೈದ್ಯರು ಈ ಕಲಮಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅವರು ಹೇಳುತ್ತಾರೆ,

"ಈ ತಜ್ಞರ ಸಮಿತಿ ಮುಂದೆ ನಿಂತುಕೊಂಡು ನಮ್ಮ ವಾದವನ್ನು ಮಂಡನೆ ಮಾಡುವುದು ಸಾಧ್ಯವಿಲ್ಲ. ನಮಗೆ ವಕೀಲರು ನಮ್ಮ ಪರವಾಗಿ ವಕಾಲತ್ತು ಮಾಡಲು ಅವಕಾಶ ಇರಬೇಕು" ಎಂದು ತಿದ್ದುಪಡಿಯಲ್ಲಿ ವೈದ್ಯರು ವಕಾಲತ್ತು ಮಾಡಲು ವಕೀಲರ ಸಹಾಯ ತೆಗೆದುಕೊಳ್ಳಬಹುದು ಎಂದು ಬದಲಿಸಲಾಗಿದೆ.

ಈ ತರಹದ ಸಮಿತಿ ಸುಲಿಗೆ ಕೇಂದ್ರವಾಗಲು ಸಾಧ್ಯವೆಂಬುದು ವೈದ್ಯರ ವಾದ. ಆದ್ದರಿಂದ ಈ ಸಮಿತಿಯ ಅಗತ್ಯತೆ ಇಲ್ಲವೆಂಬುದು ವೈದ್ಯರ ವಾದ. ಈ ಕಾನೂನಿನ ಉದ್ದೇಶ ಖಾಸಗೀ ವೈದ್ಯಕೀಯ ಕ್ಷೇತ್ರದಲ್ಲಾಗುವ ಅನ್ಯಾಯಗಳನ್ನು ಗುರುತಿಸಿ ಸರಿಪಡಿಸಬೇಕೆಂಬುದು. ಈ ದೂರು ಸಮಿತಿ ಈ ಕೆಲಸವನ್ನು ಮಾಡುತ್ತದೆ. ಆದ್ದರಿಂದ ಇದನ್ನು ತೆಗೆದು ಹಾಕಬೇಕಿಲ್ಲ ಎಂಬುದು ಸರಕಾರದ ವಾದ. ಇದು ಸರಕಾರದ ಸರಿಯಾದ ನಿಲುವು ಎನ್ನಬಹುದು. ಹಾಗೂ ಕೊನೆಯಲ್ಲಿ ದೂರು ಸಮಿತಿಯನ್ನು ತೆಗೆದುಹಾಕಿಲ್ಲ. ಈ ದೂರು ಸಮಿತಿ ಸುಲಿಗೆ ಕೇಂದ್ರವಾಗದಂತೆ ತಡೆಯುವುದು ಸರಕಾರದ ಜವಾಬ್ದಾರಿ. ವೈದ್ಯರ ದೂರು ಬಂದರೆ ಅದನ್ನು ಪರಿಶೀಲಿಸಿದ ನಂತರ ಅಗತ್ಯಬಿದ್ದರೆ ಸೂಕ್ತ ದಂಡವನ್ನು ವಿಧಿಸಬಹುದು (ಮೊದಲು 3 ಲಕ್ಷ ನಂತರ 5 ಲಕ್ಷ) ಅಥವಾ ಶಿಕ್ಷೆಯನ್ನೂ ವಿಧಿಸಬಹುದು ಇದೆ ಎಂಬ ಕಾನೂನಿದೆ. ಆದರೆ ಇದಕ್ಕೆ ವೈದ್ಯರು ಆಕ್ಷೇಪವೆತ್ತಿದಾಗ ದಂಡವನ್ನು ಕಡಿಮೆ ಮಾಡಲಾಗಿದೆ ಹಾಗೂ ಜೈಲು ಶಿಕ್ಷೆಯನ್ನು ತೆಗೆದು ಹಾಕಲಾಗಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ದರ ನಿಗದಿ

ವೈದ್ಯರು ಮಾಡಿಸುತ್ತಿರುವ ಪರೀಕ್ಷೆಗಳು, ಚಿಕಿತ್ಸೆಗಳು ದುಬಾರಿಯಾಗಿವೆ. ಆದ್ದರಿಂದ ಬೆಲೆ ನಿಗದಿಪಡಿಸಬೇಕೆಂಬುದನ್ನು ಹೊಸ ಕಾನೂನು ಹೇಳುತ್ತದೆ. ಈ ವಿಷಯದಲ್ಲಿಯೂ ವೈದ್ಯರ ಭಿನ್ನಾಭಿಪ್ರಾಯವಿದೆ. ಆದರೆ ಸರಕಾರ ಇದನ್ನು ಒಪ್ಪುತ್ತಿಲ್ಲ. ತಜ್ಞರ ಹಾಗೂ ಖಾಸಗೀ ವೈದ್ಯ ಸಂಸ್ಥೆಗಳು ಒಪ್ಪುವಂತೆ ಅವರ ಆಸ್ಪತ್ರೆಗಳನ್ನು ವಿಂಗಡಿಸಿ ಬೇರೆ ಬೇರೆ ದರ ವಿಧಿಸಲು ಮುಂದಾಗಿದೆ.

ವೈದ್ಯರು ಹೇಳುತ್ತಾರೆ, ನಾವು ವಿಪರೀತ ಹಣ ಖರ್ಚು ಮಾಡಿ ಆಸ್ಪತ್ರೆ ಕಟ್ಟಿರುತ್ತೇವೆ ಹಾಗೂ ಈ ಕಾನೂನು ದರ ನಿಗದಿ ಮಾಡಿದರೆ ನಮಗೆ ನಷ್ಟವಾಗುತ್ತದೆ. ನಾವು ಆಸ್ಪತ್ರೆ ನಡೆಸಲು ಸಾಧ್ಯವಿಲ್ಲ, ವೈದ್ಯರು ಬೇರೆ ರಾಜ್ಯಗಳಿಗೆ ಹೋಗಬಹುದು, ಆಗ ಕರ್ನಾಟಕದ ವೈದ್ಯ ವ್ಯವಸ್ಥೆಗೆ ತೊಂದರೆಯಾಗುವುದಿಲ್ಲವೇ" ಈ ವಾದವನ್ನು ವೈದ್ಯರು ಸರಕಾರದ ಮುಂದಿಟ್ಟಿದ್ದರು. ಆದರೆ ಈಗ ಅ ವಾದಕ್ಕೆ ಪುಷ್ಟಿ ಸಿಕ್ಕಿಲ್ಲ ಹಾಗೂ ತೆರೆ ಬಿದ್ದಿದೆ.

ತುರ್ತು ಸ್ಥಿತಿ, ಸಾವಿನ ಪ್ರಕರಣಗಳಲ್ಲಿ

ವೈದ್ಯರಲ್ಲಿಗೆ ತುರ್ತು ಪರಿಸ್ಥಿತಿಯಲ್ಲಿ ರೋಗಿ ಬಂದರೆ "ನಮಗೆ ಚಿಕಿತ್ಸೆ ನೀಡಲಾಗುವುದಿಲ್ಲ, ಬೇರೆ ಆಸ್ಪತ್ರೆಗೆ ಹೋಗಿರಿ" ಎಂದು ಹೇಳುವಂತಿಲ್ಲ. ರೋಗಿಯನ್ನು ಪರೀಕ್ಷೆ ಮಾಡಿ, ರೋಗ ಸಮಸ್ಯೆಯನ್ನು ಹತೋಟಿಗೆ ತಂದು, ನಂತರ ಬೇರೆ ಆಸ್ಪತ್ರೆಗೆ ಕಳಿಸಬಹುದು ಎಂದು ತಿದ್ದುಪಡಿ ಕಾನೂನು ಹೇಳುತ್ತದೆ.

ರೋಗಿ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದ್ದಲ್ಲಿ, ರೋಗಿಯ ಚಿಕಿತ್ಸೆಗೆ ಸಂಪೂರ್ಣ ಹಣ ಪಾವತಿಸದೇ ಹೆಣವನ್ನು ಕೊಡಲು ಆಸ್ಪತ್ರೆಗಳು ಇನ್ನು ಮುಂದೆ ನಿರಾಕರಿಸುವಂತಿಲ್ಲ. ಸಾಧ್ಯವಿದ್ದಷ್ಟು ಹಣವನ್ನು ಕೂಡಲೇ ಕೊಟ್ಟು ಹೆಣ ತೆಗೆದುಕೊಂಡು ಹೋಗಬಹುದು. ಬಾಕಿ ಇದ್ದ ಹಣವನ್ನು ಆಸ್ಪತ್ರೆಯವರು ಸರಕಾರದಿಂದ ನಂತರ ಪಡೆಯಬಹುದೆಂದು ತಿದ್ದುಪಡಿಯಾಗಿದೆ.

ಖಾಸಗೀ ಪರೀಕ್ಷೆ ಪ್ರಯೋಗಾಲಯಗಳು ಸರಕಾರೀ ಆಸ್ಪತ್ರೆಯ 200 ಮೀಟರ್ ಹೊರಗೆ ಇರಬೇಕು ಎಂದು ಕಾನೂನು ಹೇಳುತ್ತದೆ.

ಚಿಕಿತ್ಸಾ ದರದ ಮಿತಿ

ಈ ಕಾನೂನಿನಡಿ ಎಲ್ಲ ವೈದ್ಯರು ತಮ್ಮ ಚಿಕಿತ್ಸಾಲಯದಲ್ಲಿ ಅಥವಾ ಆಸ್ಪತ್ರೆಯಲ್ಲಿ ತಾವು ವಿಧಿಸುವ ಚಿಕಿತ್ಸಾ ದರದ ಪಟ್ಟಿಯನ್ನು ರೋಗಿಗಳಿಗೆ ಗುರುತಿಸಲು ಸಾಧ್ಯವಾಗುವ ಸ್ಥಳದಲ್ಲಿ ಪ್ರದರ್ಶಿಸಬೇಕು. ಆ ದಂಡ ಪಟ್ಟಿಯಲ್ಲಿರುವುದಕ್ಕಿಂತ ಹೆಚ್ಚು ಹಣವನ್ನು ರೋಗಿಯಿಂದ ಪಡೆದಲ್ಲಿ, ದೂರು ಎದುರಿಸಬೇಕಾಗುತ್ತದೆ. ಚಿಕಿತ್ಸಾ ದರದ ಪಟ್ಟಿಯನ್ನು ಆಸ್ಪತ್ರೆ ಜಾಲತಾಣದಲ್ಲಿಯೂ ನೀಡಬಹುದು. ಪ್ರಾರಂಭದಲ್ಲಿಯೇ ಚಿಕಿತ್ಸೆಯ ಅಂದಾಜು ವೆಚ್ಚವನ್ನು ತಿಳಿಸಬೇಕು. ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲೂ ವೈದ್ಯರು ಜನಾರೋಗ್ಯ ಸನ್ನದು (Patients Charter) ಖಾಸಗೀ ವೈದ್ಯಕೀಯ ಸಂಸ್ಥೆಯ ಸನ್ನದನ್ನು ಸುಲಭವಾಗಿ ಗುರುತಿಸಲು ಸಹಾಯವಾಗುವಂತೆ ಪ್ರದರ್ಶಿಸಬೇಕು. ಅದರ ಬಗ್ಗೆ ದೂರು ಬಂದಾಗ ಅದನ್ನು ಪರಿಶೀಲಿಸಿ ವೈದ್ಯರಿಗೆ ದಂಡ ವಿಧಿಸಬೇಕಾದರೆ 50 ಸಾವಿರ ರೂಪಾಯಿವರೆಗೆ ವಿಧಿಸಬಹುದಾಗಿದೆ. ಈ ಆದೇಶವನ್ನು ಸಮಯ ಮಿತಿಯೊಳಗೆ ಪಾಲಿಸಿದ್ದಲ್ಲಿ ಹಾಗೂ ಸಮಿತಿ ಮುಂದೆ ಬಂದು ವಿವರಣೆ ಕೊಡದಿದ್ದಲ್ಲಿ, ಆ ವ್ಯಕ್ತಿಯ ನೋಂದಣಿಯನ್ನು ರದ್ದು ಮಾಡಲಾಗುವುದು.

ಆಸ್ಪತ್ರೆ/ವೈದ್ಯ ಚಿಕಿತ್ಸೆಗೆ ಮಿತಿಮೀರಿ ಹಣ ಪಡೆದುಕೊಂಡರೆ ಕೊಡಬೇಕಾಗಿದ್ದ ಹಣದ ಒಂದೂವರೆ ಪಟ್ಟು ಹಣವನ್ನು ದಂಡದ ರೂಪದಲ್ಲಿ ಕಟ್ಟಬೇಕಾಗುತ್ತದೆ. ಈ ದಂಡ ಪಡೆದ ನಂತರ ರೋಗಿಗೆ ಅವನು ಕೊಟ್ಟ ಹೆಚ್ಚು ಹಣವನ್ನು ತಿರುಗಿ ಕೊಡಲಾಗುವುದು. ಉಳಿದ ಹಣವನ್ನು ಜಿಲ್ಲೆಯ ಆರೋಗ್ಯ ರಕ್ಷಣ ಸಮಿತಿಗೆ ನೀಡಲಾಗುವುದು ಹಾಗೂ ಆ ಹಣವನ್ನು ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಬಳಸಲಾಗುವುದು.

ಆಸ್ಪತ್ರೆ/ವೈದ್ಯ ಈ ರೀತಿ ರೋಗಿಗೆ ಮೂರು ಬಾರಿ ಹೆಚ್ಚಿನ ದರ ವಿಧಿಸಿದರೆ ದೂರು ಸಮಿತಿಯು ಸಂಬಂಧಪಟ್ಟ ನ್ಯಾಯಾಲಯಕ್ಕೆ ದೂರು ಕೊಡಲು ಮುಂದಾಗುವುದು. ಜನಾರೋಗ್ಯ ಸನ್ನದು (Patients Charter) ಹಾಗೂ ಖಾಸಗೀ ಸಂಸ್ಥೆಯ ಸನ್ನದು (Private Medical Establishment Charter) ನಿಯಮಗಳನ್ನು ಉಲ್ಲಂಘಿಸಿದರೆ ಮೊದಲ ಬಾರಿಗೆ ಹತ್ತು ಸಾವಿರ, ಎರಡನೇ ಬಾರಿಗೆ 20 ಸಾವಿರ ದಂಡ ವಿಧಿಸಲಾಗುವುದು. ಇದರಲ್ಲಿ 50% ಹಣವನ್ನು ರೋಗಿಗೆ ನೀಡಲಾಗುವುದು ಹಾಗೂ ಇನ್ನೂ 50% ಹಣವನ್ನು ಆರೋಗ್ಯ ರಕ್ಷಣಾ ಸಮಿತಿಗೆ ನೀಡಲಾಗುವುದು.

ದೂರು ಸಮಿತಿ ಮೇಲೆ ಇರುವ ಮೇಲ್ಮನವಿ ನ್ಯಾಯಾಲಯದಲ್ಲಿ ಈ ಮುಂದಿನ ಸದಸ್ಯರಿರುವರು – ಆಯುಷ್ ನಿರ್ದೇಶಕರು, ಸ್ನಾತಕೋತ್ತರ ಪದವಿ ಹೊಂದಿದ ಜನರಲ್ ಮೆಡಿಸಿನ್ ತಜ್ಞ, ವೈದ್ಯಕೀಯ ಶಿಕ್ಷಣದ ನಿರ್ದೇಶಕರು. ಈ ಕಾನೂನಿನಡಿ ಯಾರೇ ತಪ್ಪು ದೂರು ಕೊಟ್ಟಲ್ಲಿ ಹತ್ತು ಸಾವಿರ ದಂಡ ವಿಧಿಸಿ ಅವರಿಗೆ ಶಿಕ್ಷೆ ವಿಧಿಸಲಾಗುವುದು.

ಕೊನೆಯದಾಗಿ

ಈ ಕಾನೂನು ಈ ಹಂತದಲ್ಲಿ ಸರಿಯಾಗಿದೆ ಎಂದು ತೋರುತ್ತದೆ. ಜಸ್ಟೀಸ್ ವಿಕ್ರಂಜೀತ್ ಸೇನ್ ನೀಡಿರುವ ವರದಿಯ ಸುಮಾರು ಎಲ್ಲಾ ಅಂಶಗಳನ್ನು ಇಲ್ಲಿ ತರಲಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಸಾರ್ವಜಿಕರು ಎದುರಿಸುವ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಇನ್ನೊಂದು ವಿಧೇಯಕವನ್ನು ತರುವ ಅಗತ್ಯ ಇದೆ. ಸರಕಾರ ಅದನ್ನು ಕೂಡಲೇ

⇨

ಬಾಬರಿ ಮಸೀದಿ ಧ್ವಂಸದ 25ನೇ ವಾರ್ಷಿಕ

ಕರಾಳ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಟವೇ ಏಕೈಕ ದಾರಿ



ಚಿತ್ರಕೃಪೆ: ಪಿ.ಮಹಮ್ಮದ್

ಅಯೋಧ್ಯೆಯಲ್ಲಿನ ಬಾಬರಿ ಮಸೀದಿ ಧ್ವಂಸಕ್ಕೆ ಇದೇ ಡಿಸೆಂಬರ್ 6ಕ್ಕೆ 25 ವರ್ಷ ತುಂಬುತ್ತದೆ. ಇದು ಭಾರತಕ್ಕೆ ಒಂದು ಮಹತ್ವದ ದಿನ. ಅಲ್ಲಿ ನಾಶವಾಗಿದ್ದು 16ನೇ ಶತಮಾನದ ಒಂದು ಮಸೀದಿ ಮಾತ್ರವಲ್ಲ, ಬದಲಿಗೆ ಅದು ಭಾರತೀಯ ಸಂವಿಧಾನಕ್ಕೆ ಮತ್ತು ಜಾತ್ಯತೀತ–ಗಣರಾಜ್ಯ ಮೌಲ್ಯಗಳಿಗೆ ಎಸೆದ ನೇರ ಸವಾಲು ಆಗಿತ್ತು.

1992 ಡಿಸೆಂಬರ್ 6, ರಾಜಕೀಯ ಅಧಿಕಾರವನ್ನು ಹಿಡಿಯಲು ಹಿಂದುತ್ವ ಶಕ್ತಿಗಳು ಆರಂಭಿಸಿದ ನಡೆಯ ಮೈಲುಗಲ್ಲು ಎಂದು ಪರಿಗಣಿಸಬಹುದಾಗಿದೆ. 25 ವರ್ಷಗಳ ನಂತರ ಅದೇ ಶಕ್ತಿಗಳು ದೆಹಲಿಯಲ್ಲಿ ಅಧಿಕಾರ ಗದ್ದುಗೆಯಲ್ಲಿ ವಿರಾಜಮಾನವಾಗಿವೆ.

ಆರ್‌ಎಸ್‌ಎಸ್ ನೇತೃತ್ವದ ಶಕ್ತಿಗಳು ಆಗ ಹೂಡಿದ ವಂಚನೆಯ ತಂತ್ರಗಳೇನು?. ಅಯೋಧ್ಯೆಯಲ್ಲಿ ಕರಸೇವೆಯ ಹೆಸರಿನಲ್ಲಿ ನಡೆಸುವ ಯಾವುದೇ ರೀತಿಯ ಕಾರ್ಯಗಳು ಮಸೀದಿ ಕಟ್ಟಡಕ್ಕೆ ಹಾನಿ ಮಾಡುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ನೀಡಿದ್ದ ವಚನಕ್ಕೆ ಅವು ದ್ರೋಹ ಬಗೆದಿದ್ದವು. ಉತ್ತರ ಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್, ಯಥಾಸ್ಥಿತಿಯಲ್ಲಿ ಯಾವುದೇ ಬದಲಾವಣೆ ಮಾಡಲು ಸರಕಾರ ಅವಕಾಶ ನೀಡುವುದಿಲ್ಲ ಎಂದು ಸರಣಿ ಆಶ್ವಾಸನೆಗಳನ್ನು ನೀಡಿದ್ದರು. ತೊಂದರೆ ಆಗಬಹುದೆಂದು ಅನುಮಾನ ವ್ಯಕ್ತಪಡಿಸಿದ ರಾಷ್ಟ್ರೀಯ ಸಮಗ್ರತಾ ಮಂಡಳಿ (ಎನ್‌ಐಸಿ) ಒಂದು ವಿಶೇಷ ಸಭೆಯನ್ನು ಕರೆದು, ದೇಶದ ಸಂವಿಧಾನವನ್ನು ರಕ್ಷಿಸಲು ಮತ್ತು ಕಾನೂನನ್ನು ರಕ್ಷಿಸಲು ಹಾಗೂ ನ್ಯಾಯಾಲಯದ ಆದೇಶಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಪ್ರಧಾನಿಗೆ ಅಧಿಕಾರ ನೀಡುವ ನಿರ್ಣಯವನ್ನು ಅಂಗೀಕರಿಸಿತ್ತು. ಆ ಸಭೆಯಲ್ಲಿ ಬಿಜೆಪಿ ಭಾಗವಹಿಸಿರಲಿಲ್ಲ.

ಬಾಬರಿ ಮಸೀದಿ ಸುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಿದ್ದರೂ ಹತ್ತಾರು ಸಾವಿರ 'ಕರಸೇವಕರು' ಕರಸೇವೆಗಿಂತ ಕೆಲವು ದಿನಗಳ ಮುನ್ನವೇ ಅಲ್ಲಿ ಸೇರಲು ಅವಕಾಶ ನೀಡಲಾಯಿತು. ಯಾವುದೇ ರೀತಿಯ ಆಕ್ರಮಣವಾಗುವುದನ್ನು ಅಥವಾ ಯಥಾಸ್ಥಿತಿಯಲ್ಲಿ ಮಾರ್ಪಾಡು ಮಾಡುವುದನ್ನು ತಡೆಯಲಿಕ್ಕಾಗಿ ಅಯೋಧ್ಯೆಯಲ್ಲಿ 20 ಸಾವಿರಕ್ಕೂ ಹೆಚ್ಚು ಕೇಂದ್ರೀಯ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿತ್ತು. ಆದರೆ ಆ ದೌರ್ಭಾಗ್ಯದ ದಿನದಂದು, ಯಾವುದೇ ಕ್ರಮ ಕೈಗೊಳ್ಳಲು ರಾಜ್ಯ ಸರಕಾರ ವಿಫಲವಾದಾಗ ಈ ಪಡೆಗಳಿಗೆ ಕಾರ್ಯಾಚರಿಸಲು ಯಾವುದೇ ಆಜ್ಞೆಗಳು ಬರಲಿಲ್ಲ.

ಉತ್ತರ ಪ್ರದೇಶ ಸರಕಾರದ ಬೆಂಬಲ ಹೊಂದಿದ್ದ ಹಿಂದುತ್ವ ಶಕ್ತಿಗಳು ಜಾತ್ಯತೀತ ಸಿದ್ಧಾಂತದ ಮೇಲೆ ಹಾಗೂ ನಾಡಿನ ಕಾನೂನಿನ ಮೇಲೆ ನಗ್ನ ದಾಳಿ ಮಾಡಲು ಭಾರತೀಯ ಪ್ರಭುತ್ವದ ಶಕ್ತಿಯನ್ನು ಮತ್ತು ಸುಪ್ರೀಂಕೋರ್ಟ್ ಆದೇಶಗಳನ್ನು ಉಲ್ಲಂಘಿಸಲು ಸಮರ್ಥರಾದರು. ವಿವಾದಿತ ಜಾಗದಲ್ಲಿ ಒಂದು ರಾಮ ಮಂದಿರವನ್ನು ನಿರ್ಮಾಣ ಮಾಡುವುದಷ್ಟೇ ಉದ್ದೇಶವಲ್ಲ, ಅದು ಒಂದು ರಾಜಕೀಯ ತಂತ್ರವೆನ್ನುವುದು 1989ರಲ್ಲಿ ಪಾಲಂಪುರ್‌ನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಗೊತ್ತುವಳಿ ಅಂಗೀಕರಸಿದಂದಿನಿಂದಲೇ ಸ್ಪಷ್ಟವಾಗಿತ್ತು. ಕೋಮು ಘರ್ಷಣೆ ಮತ್ತು ಅಪಾರ ನಾಶ–ನಷ್ಟಗಳಿಗೆ ಕಾರಣವಾದ ಎಲ್.ಕೆ. ಆಡ್ವಾಣಿ ನೇತೃತ್ವದಲ್ಲಿ ನಡೆದ ಕುಖ್ಯಾತ ರಥ ಯಾತ್ರೆಯು ಮಸೀದಿಯನ್ನೇ ಗುರಿಯಾಗಿರಿಸಿಕೊಂಡ ಮುಂದಿನ ಹೆಜ್ಜೆಯಾಗಿತ್ತು. ರಾಮ ಅಲೆಯನ್ನೇರಿದ ಬಿಜೆಪಿ 1991ರ ಉತ್ತರ ಪ್ರದೇಶ ವಿಧಾನ ಸಭೆ ಚುನಾವಣೆಗಳಲ್ಲಿ ಜಯಶಾಲಿಯಾಯಿತು. ಕೋಮು ಧೃವೀಕರಣವೂ ಅದಕ್ಕೆ ನೆರವಾಯಿತು. ಬಾಬರಿ ಮಸೀದಿಯಿರುವ ಜಾಗದಲ್ಲಿ ರಾಮ ಮಂದಿರವನ್ನು ನಿರ್ಮಿಸುವ ಸಂಕಲ್ಪವನ್ನು ಆರ್‌ಎಸ್‌ಎಸ್–ವಿಎಚ್‌ಪಿ ಕೂಟ ಈ ಅವಧಿಯುದ್ದಕ್ಕೂ ಗುಟ್ಟಾಗಿ ಇಟ್ಟಿರಲಿಲ್ಲ.

1992 ಡಿಸೆಂಬರ್ 6ರಂದು ಆರ್‌ಎಸ್‌ಎಸ್ ನೇತೃತ್ವದ ಗುಂಪುಗಳೇನೋ ಘೋರ ಕೃತ್ಯವನ್ನು ನಡೆಸಿದವು. ಆದರೆ ಅದೇ ವೇಳೆಗೆ ಕೇಂದ್ರದ ಪಿ.ವಿ. ನರಸಿಂಹ ರಾವ್ ಸರಕಾರದ ಪಾತ್ರವೂ ನೀಚತನದ್ದಾಗಿತ್ತು. ಮಸೀದಿ ಮೇಲಿನ ಆಕ್ರಮಣವನ್ನು ತಡೆಯಲು ಯಾವುದೇ ಕ್ರಮ ಕೈಗೊಳ್ಳದಿರಲು ಪ್ರಧಾನಿ ನರಸಿಂಹ ರಾವ್ ಪ್ರಜ್ಞಾಪೂರ್ವಕವಾಗಿಯೇ ನಿರ್ಧರಿಸಿದ್ದರು. ಮಸೀದಿಯ ಮೂರು ಗುಮ್ಮಟಗಳ ಪೈಕಿ ಮೊದಲನೇ ಗುಮ್ಮಟ ಉರುಳಿದ ನಂತರವೂ ಕೇಂದ್ರ ಸರಕಾರ ಮಧ್ಯ ಪ್ರವೇಶ ಮಾಡಲೂ ಇಲ್ಲ ಅಥವಾ ಕ್ರಮ ಕೈಗೊಳ್ಳುವಂತೆ ಕೇಂದ್ರೀಯ ಪಡೆಗಳಿಗೆ ಸೂಚನೆ ನೀಡಲೂ ಇಲ್ಲ. ಮಸೀದಿ ಮೇಲೆ ಆಕ್ರಮಣ ಮಾಡಲು ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಾರೆ ಎಂದು ಡಿಸೆಂಬರ್ 6ಕ್ಕೆ ಕೆಲವು ದಿನಗಳ ಮುಂಚೆ ಕೇಂದ್ರೀಯ ಗುಪ್ತಚರ ಇಲಾಖೆ ವರದಿ ನೀಡಿದ್ದರೂ ಮತ್ತು ಅಯೋಧ್ಯೆಯಲ್ಲಿನ ಮುಸ್ಲಿಂ ಸಮುದಾಯದವರು ಹತಾಶರಾಗಿ ಮನವಿಗಳನ್ನು ಮಾಡಿದ್ದರೂ ನರಸಿಂಹ ರಾವ್, ಆ ಸ್ಥಳದಲ್ಲಿ ಕೇವಲ ಪೂಜೆ ನಡೆಸುವುದಾಗಿ ಆರ್‌ಎಸ್‌ಎಸ್ ನಾಯಕರು ತನಗೆ ಆಶ್ವಾಸನೆ ನೀಡಿದ್ದಾರೆ ಎಂದೇ ಹೇಳುತ್ತಾ ಬಂದರು.

ಮಸೀದಿ ನಾಶದ ಕೆಲವೇ ಗಂಟೆಗಳಲ್ಲಿ ಆ ಜಾಗದಲ್ಲಿ ತಾತ್ಕಾಲಿಕ ಮಂದಿರವೊಂದನ್ನು ನಿರ್ಮಿಸಿದ್ದು ಇನ್ನೂ ಆಘಾತದ ವಿಚಾರ. ಡಿಸೆಂಬರ್ 7ರಂದು ರಾಷ್ಟ್ರಪತಿ ಆಡಳಿತ ಹೇರಿದ್ದರೂ ಅದನ್ನು ನಿರ್ಮಿಸಲು ಅವಕಾಶ ನೀಡಲಾಯಿತು. ಆ ತಥಾಕಥಿತ ತಾತ್ಕಾಲಿಕ ಮಂದಿರವನ್ನು ತೆಗೆದು ಹಾಕಲು ಕೇಂದ್ರ ಸರಕಾರ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ.

ಅಷ್ಟು ಮಾತ್ರವೇ ಅಲ್ಲ. 1993 ಜನವರಿಯಲ್ಲಿ ಅಂತಿಮ ಪರಿಹಾರ ಕಂಡುಕೊಳ್ಳುವವರೆಗೆ ಆ ತಾತ್ಕಾಲಿಕ ಮಂದಿರವನ್ನು ನ್ಯಾಯಸಮ್ಮತಗೊಳಿಸುವ ಅಯೋಧ್ಯೆ ಕಾನೂನನ್ನು ಸಂಸತ್ತಿನಲ್ಲಿ ಸರಕಾರ ಅಂಗೀಕರಿಸಿತು. ಮೂಲ ಜಾಗದಲ್ಲೇ ಮಸೀದಿಯನ್ನು ಪುನರ್ ನಿರ್ಮಿಸುವ ಹಿಂದಿನ ಆಶ್ವಾಸನೆಯನ್ನು ಕೈಬಿಡಲಾಯಿತು. ದುರದೃಷ್ಟವಶಾತ್, ಈ ಅಯೋಧ್ಯೆ ಕಾನೂನನ್ನು ಸುಪ್ರೀಂ ಕೋರ್ಟ್ 3:2 ಬಹುಮತದಿಂದ ಅನುಮೋದಿಸಿತು. ಸಂವಿಧಾನ ಮತ್ತು ಕಾನೂನಿನ ಆಡಳಿತದ ಮೇಲೆ ಅತ್ಯಂತ ಗಂಭೀರ ಆಕ್ರಮಣ ನಡೆಯುತ್ತಿದ್ದರೂ ಭಾರತೀಯ ಪ್ರಭುತ್ವ ಮತ್ತು ಅದರ ಅಂಗಗಳಾದ ಕಾರ್ಯಾಂಗ ಮತ್ತು ನ್ಯಾಯಾಂಗ ನಿರ್ಧಾರಾತ್ಮಕವಾಗಿ ಕಾರ್ಯಾಚರಿಸಲು ವಿಫಲವಾದವು. ತನ್ನ ತುಷ್ಟೀಕರಣ ನೀತಿ ಹಾಗೂ ಚಂಚಲತೆಯಿಂದಾಗಿ ಕಾಂಗ್ರೆಸ್ ಸರಕಾರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು.

ವಿವಾದಿತ ಜಾಗವನ್ನು ಮೂರು ಭಾಗಗಳನ್ನಾಗಿ ಮಾಡಿ ಅದರಲ್ಲಿ ಒಂದು ಭಾಗವನ್ನು ಮಾತ್ರ ಮುಸ್ಲಿಮರಿಗೆ ನೀಡುವಂಥ ಅಲಹಾಬಾದ್ ಹೈಕೋರ್ಟ್‌ನ ತಪ್ಪಾದ ತೀರ್ಪಿನ ವಿರುದ್ಧ ಸಲ್ಲಿಸಲಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇನ್ನಷ್ಟೇ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿದೆ. ಇದೇ ಡಿಸೆಂಬರ್ 5ರಂದು ವಿಚಾರಣೆ ಆರಂಭವಾಗಲಿದ್ದು ಸುಪ್ರೀಂ ಕೋರ್ಟ್ ಮೇಲೆ ಪ್ರಭಾವ ಬೀರುವ ಕೆಲಸವನ್ನು ಮಾಡಲಾಗುತ್ತಿದೆ. ಮಸೀದಿ ಇದ್ದ ಜಾಗದಲ್ಲೇ ರಾಮ ಮಂದಿರವನ್ನು ನಿರ್ಮಿಸಲಾಗುವುದು ಎಂದು ವಿಎಚ್‌ಪಿ ಇತ್ತೀಚೆಗೆ ಉಡುಪಿಯಲ್ಲಿ ನಡೆಸಿದ ಧರ್ಮ ಸಂಸತ್‌ನಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪುನರುಚ್ಚರಿಸಿದ್ದಾರೆ. ಶ್ರೀ ಶ್ರೀ ರವಿಶಂಕರ್ ನ್ಯಾಯಾಲಯದ ಹೊರಗಿನ ಇತ್ಯರ್ಥಕ್ಕಾಗಿಯೆಂದು ಒಂದು ಹುಸಿ ಸಂಧಾನವನ್ನು ನಡೆಸಿದ್ದಾರೆ. ಹಿಂದುತ್ವ–ಪರ ಸ್ವಾಮಿಗಳು ಈ ಹಿಂದೆಯೂ ಈ ರೀತಿಯ ತಂತ್ರಗಳನ್ನು ನಡೆಸಿದ್ದರೆನ್ನುವುದನ್ನು ಮರೆಯಬಾರದು.

ಬಾಬರಿ ಮಸೀದಿ–ರಾಮಜನ್ಮಭೂಮಿ ವಿವಾದವು ಭಾರತದ ಜಾತ್ಯತೀತತೆ ಮತ್ತು ಗಣರಾಜ್ಯ ಪ್ರಭುತ್ವಕ್ಕೆ ಒಂದು ಪರೀಕ್ಷೆಯಾಗಿದೆ. 1992ರ ಪಾಠಗಳನ್ನು ಕಲಿಯಬೇಕಾಗಿದೆ. ಭಾರತದ ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ನಾಶಪಡಿಸುವ ಹಾಗೂ ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ದೇಶ ಹೊಂದಿರುವ ಶಕ್ತಿಗಳ ಜೊತೆ ರಾಜಿ ಮಾಡಿ ಕೊಳ್ಳುವ ಪ್ರಶ್ನೆಯೇ ಇಲ್ಲ. ರಾಜಿಯಿಂದ ಮತ್ತು ಕೋಮುವಾದಿ ಶಕ್ತಿಗಳನ್ನು ತುಷ್ಟೀಕರಿಸುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂದು ಯೋಚಿಸುವವರು ತಮ್ಮ ಸಮಯಸಾಧಕತನದಿಂದ ಆದ ಕಹಿ ಅನಾಹುತಗಳಿಂದ ಪಾಠ ಕಲಿತಿದ್ದಾರೆ ಎಂದು ಆಶಿಸೋಣ.

ಜಾತ್ಯತೀತತೆಯ ರಕ್ಷಣೆ ಮತ್ತು ಕರಾಳ ಪ್ರತಿಗಾಮಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಜನರನ್ನು ಅಣಿನೆರೆಯಿಸುವತ್ತ ದೃಢವಾದ ಹೆಜ್ಜೆಯಿರಿಸುವುದಲ್ಲದೆ ಬೇರೆ ಯಾವ ದಾರಿಯೂ ನಮ್ಮ ಮುಂದಿಲ್ಲ.

ಅನು: ವಿಶ್ವ

ಬಾಬರಿ ಮಸೀದಿ–ರಾಮಜನ್ಮಭೂಮಿ ವಿವಾದವು ಭಾರತದ ಜಾತ್ಯತೀತತೆ ಮತ್ತು ಗಣರಾಜ್ಯ ಪ್ರಭುತ್ವಕ್ಕೆ ಒಂದು ಪರೀಕ್ಷೆಯಾಗಿದೆ. 1992ರ ಪಾಠಗಳನ್ನು ಕಲಿಯಬೇಕಾಗಿದೆ. ಭಾರತದ ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ನಾಶಪಡಿಸುವ ಹಾಗೂ ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ದೇಶ ಹೊಂದಿರುವ ಶಕ್ತಿಗಳ ಜೊತೆ ರಾಜಿ ಮಾಡಿ ಕೊಳ್ಳುವ ಪ್ರಶ್ನೆಯೇ ಇಲ್ಲ. ರಾಜಿಯಿಂದ ಮತ್ತು ಕೋಮುವಾದಿ ಶಕ್ತಿಗಳನ್ನು ತುಷ್ಟೀಕರಿಸುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂದು ಯೋಚಿಸುವವರು ತಮ್ಮ ಸಮಯಸಾಧಕತನದಿಂದ ಆದ ಕಹಿ ಅನಾಹುತಗಳಿಂದ ಪಾಠ ಕಲಿತಿರಬೇಕು...



ಪ್ರಕಾಶ ಕಾರಟ್

ಮಾಡಬೇಕು.

ಆರೋಗ್ಯ ಮಂತ್ರಿಗಳು ತಂದ ತಿದ್ದುಪಡಿಗೆ ವೈದ್ಯರ ವಿರೋಧದ ಮಧ್ಯದಲ್ಲಿಯೇ ಅದನ್ನು ಸದನದಲ್ಲಿ ಮಂಡಿಸಲಾಗಿದೆ. ಈ ತಿದ್ದುಪಡಿಯನ್ನು ವೈದ್ಯರು 'ಪ್ರತಿಷ್ಟೆ' ಗಾಗಿ ವಿರೋಧಿಸುತ್ತಿದ್ದಾರೆಂದು ಆರೋಗ್ಯ ಮಂತ್ರಿಗಳು ಹೇಳುತ್ತಾರೆ. ಈ ತಿದ್ದುಪಡಿ ಸರಿಯಾಗಿದೆಯೆಂದೇ ಅಂದುಕೊಳ್ಳಿ. ಆದರೆ ಕೆಲವೇ ವೈದ್ಯರು ಈ ಕಾನೂನಿನಿಂದ ಪ್ರಭಾವಿತರಾಗುತ್ತಾರೆ. ಹೆಚ್ಚಿನ ಖಾಸಗೀ ವೈದ್ಯರ ಸಮಸ್ಯೆ ಬೇರೆನೇ ಆಗಿದೆ. ವೈದ್ಯರಿಗೆ ಬಡ್ತಿ ಇಲ್ಲಾ, ನಿಗದಿತ ಆದಾಯ ಇಲ್ಲ, ಕೆಲಸದಲ್ಲಿ ಭದ್ರತೆ ಇಲ್ಲ, ಸವಲತ್ತುಗಳಿಲ್ಲ, ಸ್ಥಾನಮಾನಗಳಿಲ್ಲ. ಇದನ್ನು ಸರಕಾರ ಪರಿಗಣಿಸಿದೆಯೆ ಎಂದು ಕೇಳುತ್ತಾರೆ ವೈದ್ಯರು.

ಇದೇ ಸಂದರ್ಭದಲ್ಲಿ ಆರೋಗ್ಯ ಮಂತ್ರಿಗಳು ಕೆಲವು ಸವಲತ್ತುಗಳನ್ನು ಸುಧಾರಿಸುವುದಾಗಿ ವಾಗ್ದಾನ ಮಾಡಿದ್ದಾರೆ.

- 10–15 ಕಿ.ಮೀ ಅಂತರದಲ್ಲಿ ಒಂದು ತುರ್ತು ವಾಹನ
- ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ವೆಂಟಿಲೇಟರ್
- ತಾಲ್ಲೂಕು ಆಸ್ಪತ್ರೆಯಲ್ಲಿ ವೆಂಟಿಲೇಟರ್
- ತಾಲ್ಲೂಕು ಆಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೌಲಭ್ಯ
- ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಟೆಲಿಮೆಡಿಸಿನ್ ಸೌಲಭ್ಯ

ಈ ಎಲ್ಲವುಗಳನ್ನು "ಹಲೋ ಮಿನಿಸ್ಟರ್" ಕಾರ್ಯಕ್ರಮದಲ್ಲಿ ಆರೋಗ್ಯ ಮಂತ್ರಿಗಳು ವಾಗ್ದಾನವಾಗಿ ಘೋಷಿಸಿದ್ದಾರೆ. ಇವು ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆ ಎಂದು ಕಾದು ನೋಡಬೇಕು.

ಈ ತಿದ್ದುಪಡಿ ಚರ್ಚೆ ನಡೆದಾಗ ಎರಡು ವಿಷಯಗಳನ್ನು ಗಮನಿಸಬೇಕು. ಸರಕಾರ ಕೇವಲ ಖಾಸಗಿ ವೈದ್ಯರೊಂದಿಗೆ ಹಾಗೂ ಅವರ ಸಂಸ್ಥೆಗಳೊಂದಿಗೆ ಚರ್ಚೆ ಮಾಡಿತು. ಜನಪರ ಆರೋಗ್ಯ ಸಂಸ್ಥೆಗಳನ್ನು ಕಡೆಗಣಿಸಿದೆ. ನಿಜ ಹೇಳಬೇಕೆಂದರೆ ಇವರೇ ಪ್ರಾರಂಭದಲ್ಲಿ ಜನಪರ ನೀತಿಯನ್ನು ಪ್ರತಿಪಾದಿಸಿದ್ದಾರೆ.

ಇಂದಿನ ಬಿಕ್ಕಟ್ಟಿನ ಆರೋಗ್ಯ ಪರಿಸ್ಥಿತಿಗೆ ಮುಖ್ಯ ಕಾರಣ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಕಡೆಗಣಿಸಿರುವುದು. ಸೂಕ್ತ ದ್ವಿತೀಯ, ತೃತೀಯ ಆರೋಗ್ಯ ಸೇವೆಗಳನ್ನು ಸ್ಥಾಪಿಸದೇ ಹೋಗಿರುವುದು, ಕಾರ್ಪೊರೆಟ್ ಇತ್ಯಾದಿ ಒಂದು ಆಸ್ಪತ್ರೆ ತೆರೆಯಲು 125 ಕೋಟಿ ಬೇಕಾಗುತ್ತದೆ ಎಂದು ಆರೋಗ್ಯ ಮಂತ್ರಿಗಳು ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮೂಲಭೂತ ಪ್ರಾಥಮಿಕ, ದ್ವಿತೀಯ, ಹಾಗೂ ತೃತೀಯ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಬಲಪಡಿಸುವ ಅಗತ್ಯತೆಯನ್ನು ಅವರು ಕಾಣಲಿಲ್ಲವೇ?

ಖಾಸಗೀ ಆರೋಗ್ಯ ವ್ಯವಸ್ಥೆಯ ವಿಷಯ ಬಂದಾಗ ಕರ್ನಾಟಕದಲ್ಲಿ ವಿರೋಧ ಪಕ್ಷದವರು ಭಾರೀ ಸದ್ದು ಮಾಡಲು ಮುಂದಾಗಿದ್ದರು. ಅದಲ್ಲದೆ ಅಧಿಕಾರಕ್ಕೆ ಬಂದರೆ ಈ ಕಾಯಿದೆಯನ್ನು ಕಿತ್ತು ಹಾಕುವುದಾಗಿ ವೀರಾವೇಶದ ಮಾತನಾಡಿದ್ದಾರೆ.

ಇಂದು ಆರೋಗ್ಯ ಕ್ಷೇತ್ರ ತಂತ್ರಜ್ಞಾನ ಹಾಗೂ ತಜ್ಞರನ್ನು ಅವಲಂಬಿಸಿದೆ. ಪರೀಕ್ಷೆಗಳು ಹಾಗೂ ಚಿಕಿತ್ಸೆಗಳು ದುಬಾರಿಯಾಗಿವೆ. ಅದ್ದರಿಂದ ಈ ವ್ಯವಸ್ಥೆಯನ್ನು ರಾಷ್ಟ್ರೀಕರಣ ಮಾಡುವ ಅವಕಾಶವಿದೆ. ರಾಷ್ಟ್ರೀಕರಣ ಮಾಡಿದರೂ ಎಲ್ಲಿಯವರೆಗೆ ಅದನ್ನು ದಕ್ಷ ರೀತಿಯಿಂದ ನಿರ್ವಹಿಸುವುದಿಲ್ಲವೋ ಅದರಿಂದಲೂ ಸಮಸ್ಯೆ ಪರಿಹಾರಾಗುವುದಿಲ್ಲ. ಈ ಎಲ್ಲ ವಿಷಯಗಳ ಬಗ್ಗೆ ರಾಜ್ಯದಲ್ಲಿ ಹಾಗೂ ಇಡೀ ರಾಷ್ಟ್ರದಲ್ಲೂ ಚರ್ಚೆಯಾಗಬೇಕು.

ಕೊನೆಯದಾಗಿ ಆರೋಗ್ಯ ಮಂತ್ರಿಗಳು ಕರ್ನಾಟಕದಲ್ಲಿ ಸಾರ್ವಜನಿಕ ಆರೋಗ್ಯ ಸೇವೆ (Universal Health Care) ವ್ಯವಸ್ಥೆಯನ್ನು ಆಯೋಜಿಸುವುದಾಗಿ ಹೇಳುತ್ತಿದ್ದಾರೆ. ಕಾದು ನೋಡಬೇಕಿದೆ. ಆದರೆ ಈಗ ಜಾರಿಗೆ ಬಂದಿರುವ ಕಾಯಿದೆ ಸರಿಯಾಗಿ ಜಾರಿ ಮಾಡಿದರೆ ಜನಪರವಾಗಿದೆ ಎಂದು ಹೇಳಬಹುದು. ●



ಉಡುಪಿಯ ಧರ್ಮ ಸಂಸದ್ : ಕಾನೂನು ಸಂವಿಧಾನಕ್ಕೆ ಸವಾಲು

ಕರ್ನಾಟಕ ರಾಜ್ಯದಲ್ಲಿ ಏಕಕಾಲದಲ್ಲಿ ಎರಡು ಬೃಹತ್ ಸಮ್ಮೇಳನಗಳು ನಡೆದಿವೆ. ನವೆಂಬರ್ 24 ರಿಂದ 26ರವರೆಗೆ 83ನೇ ಕನ್ನಡ ಸಾಹಿತ್ಯ ಸಮ್ಮೇಳನವು ಸಾಂಸ್ಕೃತಿಕ ನಗರವೆಂದೇ ಖ್ಯಾತವಾದ ಮೈಸೂರಿನಲ್ಲಿ ನಡೆದರೆ, ವಿಶ್ವಹಿಂದೂ ಪರಿಷದ್‌ನ 15 ಧರ್ಮ ಸಂಸದ್ ದೇವಾಲಯಗಳ ನಗರವೆಂದೇ ಖ್ಯಾತವಾಗಿರುವ ಉಡುಪಿಯಲ್ಲಿ ನಡೆದಿವೆ. ವಿಪರ್ಯಾಸವೆಂದರೆ, ಸಾಹಿತ್ಯ ಸಮ್ಮೇಳನ ಕಟ್ಟುವ (ಐಕ್ಯತೆಯ) ಸಂಸ್ಕೃತಿಗೆ ಕರೆ ನೀಡಿದರೆ, ಧರ್ಮ ಸಂಸದ್ ಕೊಲ್ಲುವ ಸಂಸ್ಕೃತಿಗೆ ಕರೆನೀಡಿದೆ.

ಕೊಲ್ಲುವ ಸಂಸ್ಕೃತಿಗೆ ಕರೆ ನೀಡಿದವರು ಒಂದಕ್ಕಿಂತ ಹೆಚ್ಚು ಮುಖಂಡರಿದ್ದಾರೆ. ವಿಶ್ವಹಿಂದೂ ಪರಿಷದ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಗೋಪಾಲರ್‌ರವರು, 'ಶಿವಾಜಿ ಮಹಾರಾಜನು ಗೋಹತ್ಯೆಗೆ ತಯಾರಿ ನಡೆಸಿದ ಪಠಾನನೊಬ್ಬನ ಕೈಯನ್ನೇ ಕಡಿದಿದ್ದ ಅವನ ಆದರ್ಶ ನಮ್ಮ ಮುಂದೆ ಇದೆ. ಅನ್ನುವ ಮೂಲಕ ಗೋಹತ್ಯೆ ನಡೆಸಿದವರ ಕೈ ಕಡಿಯಬೇಕು ಅನ್ನುವ ಕರೆಯನ್ನು ನೀಡಿರುತ್ತಾರೆ.

ಗೋಪಾಲರವರು "ಮುಸ್ಲಿಂ ಯುವಕರು ಹಿಂದೂ ಹುಡುಗಿಯರನ್ನು ಪ್ರೀತಿಸಿ ಮದುವೆಯಾದರೆ ಹಿಂದೂ ಸಂಘಟನೆಗಳ ಯುವಕರು ಮುಸ್ಲಿಂ ಯುವತಿಯರನ್ನು ಬಲವಂತವಾಗಿ ಮದುವೆಯಾಗಬೇಕಾಗುತ್ತದೆ" ಎಂದು ಎಚ್ಚರಿಸಿದರು. ಅಂದರೆ ಸಮಾಜದಲ್ಲಿ ಅಶಾಂತಿಯನ್ನು ಸೃಷ್ಟಿಸುವ ಗುರಿಯಿಂದ ಧರ್ಮ ಸಂಸದ್ ನಡೆದಿದೆ ಎಂದು ಹೇಳಬೇಕಾಗುತ್ತದೆ.

ಐತಿಹಾಸಿಕ ಬಾಬರಿ ಮಸೀದಿಯನ್ನು ಕೆಡವಿ 6ನೇ ತಾರೀಖಿಗೆ 25ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಧರ್ಮ ಸಂಸದ್ ಉಡುಪಿಯಲ್ಲಿ ನಡೆಯಲಿದೆ ಎಂದು ತಿಳಿದಾಗಲೇ 'ಏನಾದರೂ ಅನಾಹುತ ಸಂಭವಿಸುತ್ತದೆ' ಎಂದು ಊಹಿಸಲಾಗಿತ್ತು. ಏಕೆಂದರೆ 1985ರಲ್ಲಿ ಉಡುಪಿಯಲ್ಲಿ ನಡೆದ ಧರ್ಮ ಸಂಸದ್‌ನಲ್ಲಿ ಮಸೀದಿಯ ಬೀಗ ತೆರೆಯಬೇಕು ಎಂಬ ನಿರ್ಣಯವನ್ನು ಅಂಗೀಕರಿಸಿ, ಅದೇ ಜಾಗದಲ್ಲಿ ರಾಮ ಮಂದಿರ ನಿರ್ಮಾಣದಲ್ಲಿ ಆಗ್ರಹಿಸಲಾಗಿತ್ತು. ಮೃದು ಹಿಂದುತ್ವ ಧೋರಣೆಯನ್ನು ತಳೆದಿದ್ದ ಕಾಂಗ್ರೆಸ್ ಪಕ್ಷ, ಕೋಮುವಾದಿಗಳ ಅಪಾಯವನ್ನು ಮನಗಾಣದೆ, ಅಂದಿನ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಬಾಬರಿ ಮಸೀದಿಯ ಬೀಗ ತೆರವುಗೊಳಿಸುವುದಕ್ಕೆ ಆದೇಶಿಸಿದರು. ಕಾಂಗ್ರೆಸ್‌ನ ದೌರ್ಬಲ್ಯವನ್ನು ಸಮರ್ಪಕವಾಗಿ ಬಳಸಿಕೊಂಡ ಬಿ.ಜೆ.ಪಿ. ಮತ್ತು ಸಂಘಪರಿವಾರ ರಾಮಮಂದಿರ ಹೋರಾಟವನ್ನು ಮುಂದುವರಿಸಿ, ರಥಯಾತ್ರೆ, ಬಾಬ್ರಿ ಮಸೀದಿ ಕೆಡವಿದ್ದು ಮೊದಲಾದ ಕ್ರಮಗಳ ಮೂಲಕ ದೇಶದಾದ್ಯಂತ ಕೋಮುಗಲಭೆ ಸೃಷ್ಟಿಸಿ, ಸಾವಿರಾರು ಮಂದಿ ಸಾವಿಗೆ ಕಾರಣವಾದದ್ದು ಈಗ ಇತಿಹಾಸ.

ನವೆಂಬರ್ 24 ರಿಂದ 26ರವರೆಗೆ ನಡೆದ ಧರ್ಮಸಂಸದ್‌ನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ ಮುಂದೆ ಬರುವ ಅನಾಹುತಕ್ಕೆ ಮುನ್ಸೂಚನೆ ಎಂದರೆ ತಪ್ಪಾಗಲಿಕ್ಕಿಲ್ಲ.

ಆರ್.ಎಸ್.ಎಸ್./ವಿ.ಹೆಚ್.ಪಿ. ಮೇಲುಗೈ:

ಧರ್ಮ ಸಂಸದ್‌ನಲ್ಲಿ 2000ಕ್ಕೂ ಹೆಚ್ಚು ಸಂನ್ಯಾಸಿಗಳು, ಮಠಾಧಿಪತಿಗಳು ಎಂದು ಘೋಷಿಸಿಕೊಂಡರೂ ಅದು ಆರ್.ಎಸ್.ಎಸ್. ಸರಸಂಘ ಚಾಲಕ ಮೋಹನ ಭಾಗವತ್ ಮತ್ತು ವಿ.ಹೆಚ್.ಪಿ.ಯ ಅಂತರರಾಷ್ಟ್ರೀಯ ಕಾರ್ಯಾಧ್ಯಕ್ಷ ಪ್ರವೀಣ್ ತೊಗಾಡಿಯವರದ್ದೇ ಮೇಲ್ಗೈಯಾಗಿತ್ತು. ಪೇಜಾವರ ಶ್ರೀಗಳ ಎದುರಲ್ಲೇ ಪ್ರವೀಣ್ ಬ್ಯಾ ತೊಗಾಡಿಯಾ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿದೆ.

ನಮ್ಮ ರಾಮ ಜೋಪಡಿಯಲ್ಲಿದ್ದಾನೆ. ಅದರಿಂದಾಗಿಯೇ ದೇಶ ಸಂಕಷ್ಟದಲ್ಲಿ ನರಳುತ್ತಿದೆ. ಭವ್ಯವಾದ ರಾಮ ಮಂದಿರ ತಲೆಯೆತ್ತಿದರೆ ದೇಶದ ಸಂಕಷ್ಟಗಳೆಲ್ಲವೂ ಪರಿಹಾರವಾಗುತ್ತದೆ" ಎಂದು ಹೇಳಿದ ತೊಗಾಡಿಯಾ ಇಂದಿನ ಸಂಕಟಗಳಿಗೆ ಮೋದಿಯವರಾಗಲೀ, ವ್ಯವಸ್ಥೆಯಾಗಲೀ ಎಂದು ಕಾರಣವಲ್ಲ ಎಂದು ಹೇಳಿದ್ದಾರೆ. ಸರ್ಕಾರ ಮತ್ತು ವ್ಯವಸ್ಥೆಯ ಮೇಲಿರುವ ಜನರ ಅತೃಪ್ತಿಯನ್ನು ಕ್ರೋಢೀಕರಿಸಿ ಬಲವಾದ ಚಳುವಳಿಯನ್ನು ರೂಪಿಸಬೇಕಾಗಿರುವ ಇಂದಿನ ಸಂದರ್ಭದಲಿ ಹಾದಿ ತಪ್ಪಿಸುವ ಕೆಲಸವನ್ನು ಆರ್.ಎಸ್.ಎಸ್. ವಿ.ಹೆಚ್.ಪಿ. ಮಾಡುತ್ತಿದೆ.

ಹಿಂದೂ ಮತಗಳ ಕ್ರೋಢೀಕರಣಕ್ಕೆ ಪ್ರಯತ್ನ:

ಸುಮಾರು 5.5 ಕೋಟಿ ರೂ. ವೆಚ್ಚದಲ್ಲಿ ನಡೆಸಿದ ಧರ್ಮ ಸಂಸದ್ ಬಿ.ಜೆ.ಪಿ. ನಾಯಕರ ದಂಡೇ ಕಾಣಿಸುತ್ತಿತ್ತು. ಪರಿವರ್ತನಾ ರ್‍ಯಾಲಿಯಲ್ಲಿ ಬಿಸಿಯಾಗಿದ್ದ ಯಡಿಯೂರಪ್ಪನವರು, ಉದ್ಘಾಟನಾ ಸಮಾರಂಭದಲ್ಲಿ ಹಾಜರಾಗಿದ್ದರು. ಉಡುಪಿಯ ಲೋಕಸಭಾ ಸದಸ್ಯ ಸಾಮಾನ್ಯವಾಗಿ ಉಡುಪಿಯಲ್ಲಿ ಇರುತ್ತಿರಲಿಲ್ಲ. ಉಡುಪಿ-ಆಗುಂಬೆ ರಾಷ್ಟ್ರೀಯ ಹೆದ್ದಾರಿ ಸಂಚಾರಕ್ಕೆ ಅಯೋಗ್ಯವಾಗಿದ್ದರೂ ಗಮನ ನೀಡಿರಲಿಲ್ಲ. ಆದರೆ ಹಿಂದೂ ಸಮಾಜೋತ್ಸವದ ಸಂದರ್ಭದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು.

ಇದು ಸಾಧು-ಸಂತರ ಸಮಾವೇಶವಾಗಿರದೇ, ಬಿ.ಜೆ.ಪಿ. ಮತ ಬ್ಯಾಂಕ್‌ಗಳನ್ನು ಹೆಚ್ಚಿಸಿಕೊಳ್ಳಲು ಮಾಡಿರುವ ಕುತಂತ್ರವೆಂದೇ ಉಡುಪಿಯ ಜನಸಾಮಾನ್ಯರು ಮಾತನಾಡುತ್ತಿದ್ದಾರೆ. ಸಂಘ ಪರಿವಾರದ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು ಎಂಬುದನ್ನು ಒಪ್ಪಿಕೊಳ್ಳುವುದಾದರೂ ಜನ ಮನದಲ್ಲಿ ಮೌನ ವಿರೋಧವಿದೆ ಎಂಬುದು ವ್ಯಕ್ತವಾಗುತ್ತದೆ.

ಇನ್ನೊಂದು ಅಂಶವನ್ನು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಬಿ.ಜೆ. ಪಿ. ಆರಂಭಿಸಿದ ಪರಿವರ್ತನಾ ರ್‍ಯಾಲಿಗಳಲ್ಲಿ ಜನರ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಮಹದಾಯಿ ಯೋಜನೆ, ಮೊದಲಾದ ವಿಷಯಗಳಲ್ಲಿ ಬಿ.ಜೆ.ಪಿ. ಧೋರಣೆಗಳಿಂದಾಗಿ ಉತ್ತರ ಕರ್ನಾಟಕದಲ್ಲಿ ಬಿ.ಜೆ.ಪಿ. ಸ್ಥಾನಗಳ ಸಂಖ್ಯೆ ಗಮನಾರ್ಹವಾಗಿ ಕುಸಿಯಲಿದೆ. ಆದ್ದರಿಂದ ಕರಾವಳಿ ಜಿಲ್ಲೆಗಳಲ್ಲಿ ಅದನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಾರ್ವಜನಿಕರಲ್ಲಿ ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಪತ್ರಿಕೆಗಳಲ್ಲಿ ಜಾತಿಯ, ದೊಡ್ಡ ದೊಡ್ಡ ಪ್ಲೆಕ್ಸ್‌ಗಳ ಮೂಲಕ ಬಿ.ಜೆ.ಪಿ.ಯ ಮುಖಂಡರು ಲಕ್ಷಗಟ್ಟಲೆ ಖರ್ಚು ಮಾಡಿದ್ದಾರೆ. ಕೃಷ್ಣ ಮಠದ ಹಿಂಬದಿಯಲ್ಲಿ ಹಾಕಿದ ದೊಡ್ಡದೊಂದು ಪ್ಲೆಕ್ಸ್‌ನಲ್ಲಿ ಅಟಲ್ ಬಿಹಾರಿ ವಾಜಪೇಯಿ ಮತ್ತು ನರೇಂದ್ರ ಮೋದಿಯವರ ಭಾವಚಿತ್ರ ಕೂಡಾ ಇದೆ.

ಸಂವಿಧಾನ ವಿರೋಧಿ ಹೇಳಿಕೆಗಳು:

ರಾಜಕೀಯ ಸನ್ಯಾಸಿ ಎಂದೇ ಪ್ರಖ್ಯಾತವಾಗಿರುವ ಪೇಜಾವರ ಶ್ರೀಗಳು ಧರ್ಮ ಸಂಸದ್‌ನ ಅಧ್ಯಕ್ಷತೆ ವಹಿಸಿ, ಸಂವಿಧಾನ ವಿರೋಧಿಯಾಗಿ ಮಾತನಾಡಿರುವುದು ಈ ಲೇಖನ ಪ್ರಕಟವಾಗುವ ಹೊತ್ತಿಗೆ ಸಾಕಷ್ಟು ಚರ್ಚೆಯಾಗಿದೆ. "ನಾನು ಹಾಗೆ ಹೇಳಿಲ್ಲ" ಎಂದು ಪೇಜಾವರ ಶ್ರೀಗಳು ಪತ್ರಿಕಾಗೋಷ್ಠಿ ನಡೆಸಿ, ಹೇಳುವಾಗಲೂ "ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಸವಲತ್ತು ನೀಡಲಾಗಿದೆ" ಎಂದು ಹೇಳಿಕೊಂಡಿದ್ದಾರೆ. ಆದರೆ ಕೊಂಕಣಿ ಅಲ್ಪಸಂಖ್ಯಾತರ ಹೆಸರಿನಲ್ಲಿ ಮಣಿಪಾಲದ ಶಿಕ್ಷಣ ಸಂಸ್ಥೆಗಳು ತುಳು ಅಲ್ಪಸಂಖ್ಯಾತರ ಹೆಸರಿನಲ್ಲಿ ವಿನಯ ಹೆಗ್ಡೆಯವರು (ಸಂಘಪರಿವಾರಕ್ಕೆ ಸಾಕಷ್ಟು ಹಣ ಸಹಾಯ ನೀಡುವವರು) ನಿಟ್ಟೆ ಶಿಕ್ಷಣ ಸಂಸ್ಥೆಗಳು, ಜೈನ್ ಅಲ್ಪ ಸಂಖ್ಯಾತರ ಹೆಸರಿನಲ್ಲಿ, ಸ್ವಾಗತ ಸಮಿತಿಯ ಅಧ್ಯಕ್ಷರಾಗಿರುವ ವೀರೇಂದ್ರ ಹೆಗ್ಡೆಯವರ ಶಿಕ್ಷಣ ಸಂಸ್ಥೆಗಳು ಈ ಸೌಲಭ್ಯವನ್ನು ಪಡೆಯುತ್ತಿವೆ ಎಂಬುದನ್ನು ಪೇಜಾವರ ಶ್ರೀಗಳು ಮರೆತಿದ್ದಾರೊ ಅಥವಾ ಅವರ ಜಾಣ ಮರೆವೋ ಎಂದು ತಿಳಿಯಬೇಕಾಗಿದೆ.

ರಾಮಜನ್ಮಭೂಮಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿರುವುದು ತಿಳಿದಿದ್ದರೂ, ಯಾವುದೇ ಚರ್ಚೆಗೆ ಆಸ್ಪದವಿಲ್ಲ, ಮಂದಿರವನ್ನು ಅಲ್ಲೇ (ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲಿ ಕಟ್ಟುತ್ತೇವೆ) ಎಂಬ ನಿರ್ಣಯ ಅಂಗೀಕರಿಸುವ ಮೂಲಕ ಸಂವಿಧಾನ ವಿರೋಧಿ ಧೋರಣೆಯನ್ನು ತಿಳಿಸಲಾಗಿದೆ.

ಗೋಹತ್ಯಾ ನಿಷೇಧ ದೇಶದಾದ್ಯಂತ ಜಾರಿಯಾಗಬೇಕು ಎಂದು ಘೋಷಿಸುವ ಮೂಲಕ ದಲಿತರು, ಮುಸ್ಲಿಮರು, ಕ್ರಿಶ್ಚಿಯನ್ನರಲ್ಲದೇ ದೊಡ್ಡ ಜನ ವಿಭಾಗದ ಜನರ ಆಹಾರದ ಹಕ್ಕಿನ ಮೇಲೆ ದಾಳಿ ನಡೆಸಿರುವುದು ಇನ್ನೊಂದು ಸಂವಿಧಾನ ವಿರೋಧಿ ಸತ್ಯವಾಗಿದೆ. ಮಾತ್ರವಲ್ಲ, ಪರಿವಾರಕ್ಕೆ ಸೇರಿದ ಯುವಕರನ್ನು ಪ್ರಚೋದನೆಗೊಳಿಸಲಾಗಿದೆ. ಕೇರಳದಲ್ಲಿ ಆರ್.ಎಸ್.ಎಸ್. ಕೊಲೆಯ ಕಾರ್ಯಕರ್ತರ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಿದ ಧರ್ಮಸಂಸದ್ ಉಡುಪಿ ಜಿಲ್ಲೆಯಲ್ಲಿ ಸಂಘ ಪರಿವಾರದ ಕಾರ್ಯಕರ್ತರಿಂದಲೇ ಹತನಾದ ಪ್ರವೀಣ ಪೂಜಾರಿಯ ಬಗ್ಗೆ ಚಕಾರವೆತ್ತಿಲ್ಲ.

ಈ ವರ್ಷದ ಮೊಹರಂ ಸಂದರ್ಭದಲ್ಲಿ ಕೃಷ್ಣ ಮಠದ ಒಳಗಡೆ ಕೆಲವು ಮುಸ್ಲಿಂ ಬಾಂಧವರಿಗೆ ಇಫ್ತಾರ್ ಕೂಟ ಏರ್ಪಡಿಸಿದಾಗಲೇ ಧರ್ಮ ಸಂಸದ್‌ನಲ್ಲಿ ಅಪಾಯಕಾರಿ ನಿಲುವುಗಳು ಘೋಷಣೆಯಾಗಲಿವೆ ಎಂದು ಊಹಿಸಲಾಗಿತ್ತು. ಕೆಲವೊಂದು ಹಿಂದೂ ಸಂಘಟನೆಗಳು ಪೇಜಾವರ ಶ್ರೀಗಳ ನಿಲುವನ್ನು ವಿರೋಧಿಸಿದ ಸಂದರ್ಭದಲ್ಲಿ ಅವರೊಂದಿಗೆ ಮಾತನಾಡಿದ ಖಟ್ಟರ್ ಹಿಂದೂವಾದಿ ಚಕ್ರವರ್ತಿ ಸೂಲಿಬೆಲೆ "ಪೇಜಾವರ ಶ್ರೀಗಳು ದೂರದೃಷ್ಟಿ ಹೊಂದಿದವರು" ಎಂದು ಹೇಳಿಕೆ ನೀಡಿದ್ದರು ಎಂಬುದನ್ನು ಗಮನಿಸಬೇಕು.

ಒಟ್ಟಾರೆಯಾಗಿ ದೇಶದ ಐಕ್ಯತೆ, ಸಮಗ್ರತೆ ಎಲ್ಲಾ ಜನವಿಭಾಗದ ರಕ್ಷಣೆ ಆಗಬೇಕೆಂದು ಬಯಸುವ ಎಲ್ಲರಿಗೂ ಧರ್ಮ ಸಂಸದ್ ದೊಡ್ಡ ಸವಾಲನ್ನು ಮುಂದಿರಿಸಿದೆ. ಅದನ್ನು ಧೈರ್ಯದಿಂದ ಐಕ್ಯತೆಯಿಂದ ಎದುರಿಸಬೇಕಾಗಿದೆ.

ನಕಲಿ ಹಿಂದುತ್ವವಾದಿಗಳನ್ನು ಹತ್ತಿಕ್ಕಿ: ಸುತ್ತೂರು ಸ್ವಾಮೀಜಿ

ಧರ್ಮ ಸಂಸದ್‌ನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿಯವರು "ಗೋರಕ್ಷಣೆ ಹೆಸರಿನಲ್ಲಿ ಹಿಂಸಾಚಾರ ನಡೆಸುವವರು, ಧರ್ಮ ರಕ್ಷಣೆ ನೆಪದಲ್ಲಿ ಅನೈತಿಕ ಪೊಲೀಸ್‌ಗಿರಿ ನಡೆಸುವವರು ಮತ್ತು ಕಳ್ಳ ಸನ್ಯಾಸಿಗಳಿಂದ ಹಿಂದೂ ಧರ್ಮಕ್ಕೆ ಕಳಂಕ ಅಂಟಿಕೊಳ್ಳುತ್ತಿದೆ ಇಂತಹವುಗಳನ್ನು ಸಹಿಸಿಕೊಳ್ಳಲಾಗದು" ಎಂದರು. ಅವರು ಮುಂದುವರಿಸುತ್ತಾ "ಹಿಂದುತ್ವದ ಹೆಸರಿನಲ್ಲಿ ಹಿಂಸಾಚಾರ, ದಾಂಧಲೆ ನಡೆಸುತ್ತಿರುವ ಕೆಲವು ಹಿಂದುತ್ವವಾದಿ ಗುಂಪುಗಳಿಂದ ಹಿಂದೂ ಧರ್ಮಕ್ಕೆ ಕಳಂಕ ಅಂಟಿಕೊಳ್ಳುತ್ತಿದೆ. ಇಂತಹ ಗುಂಪುಗಳನ್ನು ಹತ್ತಿಕ್ಕಬೇಕು" ಎಂದು ಕರೆ ನೀಡಿದರು.

ಡಿಡಿಪಿಐ ಸುತ್ತೋಲೆ ವಾಪಾಸ್

ಉಡುಪಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ದಿನಕರ ಬಾಬುರವರು ಬಿ.ಜೆ.ಪಿ.ಯ ಮುಖಂಡರು. ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮೇಲೆ ಪ್ರಭಾವ ಬೀರಿ ಧರ್ಮ ಸಂಸದ್ ಅಂಗವಾಗಿ 'ಹಿಂದೂ ವೈಭವ' ಹೆಸರಿನ ವಸ್ತ್ರ ಪದರ್ಶನ ನೋಡಲು ಶಾಲಾ ಮಕ್ಕಳಿಗೆ ಅವಕಾಶ ಮಾಡಿಕೊಡಲು ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಸುತ್ತೋಲೆ ಕಳುಹಿಸಿದ್ದರು.

ಇದಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು. ಒಂದು ರಾಜಕೀಯ ಪಕ್ಷದ ಪರವಾಗಿರುವ ಹಾಗೂ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವ ಸಂಘಟನೆ ಆಯೋಜಿಸಿರುವ ವಸ್ತು ಪ್ರದರ್ಶನಕ್ಕೆ ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗುವುದು ಸರಿಯಲ್ಲ ಎಂದು ಸಾರ್ವಜನಿಕರು ಹೇಳಿದರು. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಏರ್ಪಡಿಸುವ ವಸ್ತು ಪ್ರದರ್ಶನಕ್ಕೂ ಶಾಲಾ ಮಕ್ಕಳನ್ನು ಕಳುಹಿಸುತ್ತೀರಾ ಎಂದು ಕೆಲವರು ಪ್ರಶ್ನಿಸಿದರು. ಈ ಹಿನ್ನೆಲೆಯಲ್ಲಿ ಡಿಡಿಪಿಐ ಶೇಷಶಯನರವರು ಸುತ್ತೋಲೆ ವಾಪಾಸು ಪಡೆದರು.

3 ಮಠದ ಸ್ವಾಮಿಗಳು ಗೈರು

ಉಡುಪಿ ಶ್ರೀ ಕೃಷ್ಣ ಮಠದ ಉಸ್ತುವಾರಿಯನ್ನು 8 ಮಠಗಳು ನಡೆಸುತ್ತವೆ. 2 ವರ್ಷಕ್ಕೊಮ್ಮೆ ಪರ್ಯಾಯ ಉತ್ಸವ ನಡೆಸುವುದರ ಮೂಲಕ ದೇವಸ್ಥಾನದ ಪೂಜೆ, ಪುನಸ್ಕಾರ, ಆಡಳಿತ ಎಲ್ಲವೂ ಪರ್ಯಾಯ ಮಠದ ಸ್ವಾಮೀಜಿಯವರ ಕೈಗೆ ಬರುತ್ತದೆ. ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರ ಪರ್ಯಾಯ ಜನವರಿ 2018ಕ್ಕೆ ಕೊನೆಗೊಂಡು ಪಲಿಮಾರು ಮಠದ ಸ್ವಾಮೀಜಿಗಳ ಕೈಗೆ ಬರುತ್ತದೆ.

ಅಷ್ಟಮಠಗಳ ಪೈಕಿ ಅದಮಾರು, ಶಿರೂರು ಮತ್ತು ಪಲಿಮಾರು ಮಠದ ಸ್ವಾಮೀಜಿಗಳು ಧರ್ಮ ಸಂಸದ್‌ಗೆ 3 ದಿನಗಳೂ ಹಾಜರಾಗಿಲ್ಲ. ಗೈರು ಹಾಜರಿಗೆ ನಿಜವಾದ ಕಾರಣ ಏನೆಂದು ತಿಳಿಯದಿದ್ದರೂ ಪೇಜಾವರ ಶ್ರೀಗಳ ಮುತುವರ್ಜಿಗೆ ಎಲ್ಲಾ ಮಠಗಳ ಒಪ್ಪಿಗೆ ಇಲ್ಲ ಎಂಬ ಸಂದೇಶವಂತೂ ರವಾನೆಯಾಗಿದೆ.

ಹಾಗೆ ನೋಡಿದರೆ ಕಟ್ಟಳೆಯ ಪ್ರಕಾರ, ಪರ್ಯಾಯ ಪೀಠಸ್ಥಾನದ ಪೇಜಾವರ ಶ್ರೀಗಳು ಕೃಷ್ಣ ಮಠ ಬಿಟ್ಟು ಹೊರಬರುವಂತಿಲ್ಲ. ಆದರೂ ಧರ್ಮ ಸಂಸದ್‌ನ ಮೆರವಣಿಗೆಯಲ್ಲಿ ಗಾಲಿಕುರ್ಚಿಯಲ್ಲಿ ತೆರಳಿದರು. ಇತ್ತೀಚೆಗೆ ಅವರ ಆರೋಗ್ಯ ಕೆಟ್ಟಾಗ ಅವರನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆ, ಬೇಡವೇ ಎಂಬ ಬಗ್ಗೆ ಚರ್ಚೆ ನಡೆದು ಕೊನೆಗೆ ವೈದ್ಯರ ಒತ್ತಾಯದ ಮೇರೆಗೆ ಮಣಿಪಾಲದ ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆದುಕೊಂಡಿದ್ದರು.

ನವೆಂಬರ್ 24ರಿಂದ 26ರವರೆಗೆ ನಡೆದ 83ನೇ ಸಾಹಿತ್ಯ ಸಮ್ಮೇಳನ ಹಲವು ರೀತಿಗಳಲ್ಲಿ ವಿಶಿಷ್ಟವಾಗಿತ್ತು. ನಾಡು-ನುಡಿಗಳ ಹಲವು ಪ್ರಸ್ತುತ - ಸಮ್ಮೇಳನದ ಸ್ವರೂಪ, ಸೆಕ್ಯುಲರ್ ರಾಜಕಾರಣ, ಪ್ರಾದೇಶಿಕ/ರಾಷ್ಟ್ರೀಯ ಪಕ್ಷ, ಬಹುತ್ವ, ಒಕ್ಕೂಟ ತತ್ವ, ಮಾತೃಭಾಷಾ ಮಾಧ್ಯಮ ಇತ್ಯಾದಿ - ವಿಷಯಗಳ ಬಗ್ಗೆ ಸಾರ್ವಜನಿಕ ಕುತೂಹಲ ವಿವಾದ ಕೆರಳಿಸಿದ ಅರ್ಥಪೂರ್ಣ ಸಂವಾದಕ್ಕೂ ಕಾರಣವಾದ ಸಮ್ಮೇಳನ. ಅದು ಹೊತ್ತಿಸಿದ ಸಂವಾದದ ಕಿಡಿ ಹೊತ್ತಿಸಿದ ಬೆಳಕು ಆ ಮೇಲೂ ಮುಂದುವರೆದಿದೆ. ಅದರಲ್ಲೂ ದೇಶದ ಭವಿಷ್ಯದ ಬಗ್ಗೆ ಕಾಳಜಿ ಇರುವ ಎಲ್ಲರಲ್ಲೂ ಆತಂಕ ಸೃಷ್ಟಿಸಿದ ಅದೇ ಸಮಯದಲ್ಲಿ ಉಡುಪಿಯಲ್ಲಿ ನಡೆದ ಧರ್ಮ ಸಂಸತ್ ನ ಹಿನ್ನೆಲೆಯಲ್ಲಿ ಸಮ್ಮೇಳನದ ಬೇರೇನೇ ರಾಗ-ತಾಳ ಇನ್ನಷ್ಟು ಮಹತ್ವದ್ದಾಗಿತ್ತು. ಸಮ್ಮೇಳನದ ಬಗ್ಗೆ ಹೆಚ್ಚಿನ ದೈನಿಕಗಳು ಸಾಕಷ್ಟು ವಿವರವಾಗಿ ವರದಿ ಮಾಡಿವೆ. ಆದ್ದರಿಂದ ಇಲ್ಲಿ ಅರ್ಥಪೂರ್ಣ ಸಂವಾದಕ್ಕೆ ಕಾರಣವಾದ ಸಮ್ಮೇಳನದ ಸರ್ವಾಧ್ಯಕ್ಷ ಚಂದ್ರಶೇಖರ ಪಾಟೀಲ ಅವರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣದ ತುಣುಕುಗಳನ್ನು ಅದರ ಕಿರು ವಿಶ್ಲೇಷಣೆ ಜತೆಗೆ ಇಲ್ಲಿ ಕೊಡಲಾಗಿದೆ. ಇದಲ್ಲದೆ ಸಮ್ಮೇಳನದ 'ರುಚಿ' ಕೊಡುವ "ಜನಪರ ಚಳುವಳಿಗಳು" ಗೋಷ್ಟಿಯಲ್ಲಿ ಮಂಡಿಸಲಾದ "ಕಾರ್ಮಿಕ ಚಳುವಳಿ"ಗಳ ಬಗ್ಗೆ ಒಂದು ಪ್ರಬಂಧ ಮತ್ತು ಒಂದು ಗಮನ ಸೆಳೆದ ಕವಿತೆ ಕೊಡಲಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನ-83
ನಾಡು-ನುಡಿಗಳ ಬಗ್ಗೆ ಅರ್ಥಪೂರ್ಣ ಸಂವಾದ

- ವಸಂತರಾಜ ಎನ್ ಕೆ.

ಚಂಪಾ ತಮ್ಮ ಭಾಷಣದಲ್ಲಿ ಸೆಕ್ಯುಲರ್ ರಾಷ್ಟ್ರೀಯ ಪಕ್ಷಕ್ಕೆ ಮತ ಹಾಕಿ ಎಂದು ಹೇಳಿದ್ದರ ಬಗ್ಗೆ ಹೆಚ್ಚು ವಾದ-ವಿವಾದ ನಡೆಯಿತಾದರೂ, ಅವರೂ ಮುಖ್ಯಮಂತ್ರಿಗಳೂ ಒಕ್ಕೂಟ ತತ್ವದ, ಚಂಪಾ ಕನ್ನಡ ಚಳುವಳಿಯ ಭವಿಷ್ಯದ ಬಗ್ಗೆ ಮಂಡಿಸಿದ ಅಭಿಪ್ರಾಯಗಳು ಸಕಾರಾತ್ಮಕವದ್ದು, ಸಕಾಲಿಕವಾದದ್ದು, ಗಮನಾರ್ಹವಾದದ್ದು ಆಗಿವೆ.

ಒಕ್ಕೂಟ ತತ್ವದ ಬಗ್ಗೆ ಮುಖ್ಯಮಂತ್ರಿಯವರು ಉದ್ಧರಿಸಿದ ಕುವೆಂಪು ಮತ್ತು ಚಂಪಾರವರ ಮಾತುಗಳು, ಆಶಯದ ಹಾಗೂ ಒಟ್ಟು ಧೋರಣೆಯ ನೆಲೆಯಲ್ಲಿ ಉಚಿತ. ಚಂಪಾರವರು ಒಕ್ಕೂಟದ ತತ್ವದ ಬಗ್ಗೆ ಕೆಲವು ಮಾತು ಹೇಳಬಹುದು. "ಈ ಅಮ್ಮ ತಾನು ಪಡೆದ ಮಕ್ಕಳಲ್ಲಿ ಕೆಲವರಿಗೆ ಮೊಲೆ ಹಾಲನ್ನು, ಉಳಿದವರಿಗೆ ಬಾಟಲಿ ಹಾಲನ್ನು ಕುಡಿಸುತ್ತಿದ್ದಾಳೆ. ಬಹುಪಾಲು ಹಾಲನ್ನು ಬಹುಶಃ ತಾನೇ ಕುಡಿಯುತ್ತಿರಬೇಕು." ಎಂದು ಹೇಳುವಾಗ ಅವರು "ಹಿಂದಿ ವಲಯದ ವ್ಯಾಪಾರಿ ವರ್ಗ" ಎಂದು ಹೇಳುವ ಹಿನ್ನೆಲೆಯಲ್ಲಿ, ಭಾರತದ ಆಳುವವರು "ಹಿಂದಿ ರಾಷ್ಟ್ರೀಯತೆ"ಯವರು ಎನ್ನುವ ಧೋರಣೆಯ ವಾಸನೆ ಹೊಡೆಯುತ್ತದೆ. ನೇರವಾಗಿ ಹೇಳದಿದ್ದರೂ ಹಿಂದಿ ಮತ್ತು ಇತರ ಭಾಷಿಕ ಪ್ರಾಂತ್ಯಗಳ ನಡುವೆ ಕೇಂದ್ರ ತಾರತಮ್ಯ ಮಾಡುತ್ತಿದೆ ಎಂಬ ಭಾವನೆಯೂ ಇದೆ. ರಾಜ್ಯ-ರಾಜ್ಯಗಳ ನಡುವೆ ಹಲವು ತಾರತಮ್ಯಗಳಿದ್ದರೂ, ಇದು ವಾಸ್ತವಕ್ಕೆ ದೂರವಾದದ್ದು ಎಂದು ಎಡ ಚಳುವಳಿಯಲ್ಲಿರುವ ನಾವಾದರೂ ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಹಿಂದೀ ರಾಜ್ಯಗಳು ದೇಶದಲ್ಲೆ ಅತ್ಯಂತ ಹಿಂದುಳಿದ ರಾಜ್ಯಗಳಾಗಿರುತ್ತಿರಲಿಲ್ಲ. ಯಾವುದೇ ನಿರ್ದಿಷ್ಟ ಭಾಷಿಕ-ರಾಷ್ಟ್ರೀಯತೆಗೆ ಸೇರದ ಭಾರತದ ಆಳುವ ವರ್ಗ ಹಿಂದಿ ಯನ್ನು ಎಲ್ಲಾ ರಾಜ್ಯಗಳ ಸ್ವಾಯತ್ತತೆ ಮೇಲೆ ದಾಳಿ ಮಾಡುವ ಕೇಂದ್ರೀಕರಣದ ಉಪಕರಣವಾಗಿ ಬಳಸುತ್ತಿದೆ. ತಥಾಕಥಿತ "ಹಿಂದಿ" ರಾಜ್ಯಗಳಲ್ಲೂ ಸ್ಥಳೀಯ ಭಾಷೆಗಳನ್ನು ದಮನ ಮಾಡಲಾಗುತ್ತಿದೆ. ಈಗ ಕೇಂದ್ರದಲ್ಲಿ ಬಳಸಲಾಗುತ್ತಿರುವ "ಹಿಂದಿ" ಯಾವ ರಾಜ್ಯದ ಜನತೆಯ ಭಾಷೆಯೂ ಅಲ್ಲ. ಇಂಗ್ಲಿಷ್ ಮತ್ತು ಹಿಂದಿ ಎರಡೂ ಆಳುವ ವರ್ಗದ ಪ್ರಜಾಪ್ರಭುತ್ವ-ವಿರೋಧಿ ಕೇಂದ್ರೀಕರಣದ ಉಪಕರಣಗಳು ಎಂದು ಅರಿತುಕೊಳ್ಳಬೇಕು. ಒಕ್ಕೂಟ ತತ್ವದ ತೀವ್ರ ಉಲ್ಲಂಘನೆ ನವ-ಉದಾರವಾದಿ ನೀತಿಗಳ ಪ್ಯಾಕೇಜಿನ ಭಾಗ. ಸಿದ್ಧರಾಮಯ್ಯನವರ ಕಾಂಗ್ರೆಸ್ ಆ ಪ್ಯಾಕೇಜು ಬಿಟ್ಟು ಕೊಡದೆ ಒಕ್ಕೂಟ ತತ್ವವನ್ನು ಎತ್ತಿ ಹಿಡಿಯಲು ಸಾಧ್ಯವಿಲ್ಲ.

ಎಡಪಂಥೀಯರು ಸಾಹಿತ್ಯ ಮತ್ತು ರಾಜಕಾರಣವನ್ನು ಪ್ರತ್ಯೇಕಿಸುವುದನ್ನು ಒಪ್ಪಿರಲಿಲ್ಲ. ಈಗ ಹಲವು ಸೆಕ್ಯುಲರ್ ಪ್ರಜಾಪ್ರಭುತ್ವವಾದಿಗಳು ಈ ರೀತಿ ಪ್ರತ್ಯೇಕಿಸುವುದರ ಹಾಗೂ ಸಾಹಿತ್ಯ ಸಮ್ಮೇಳನದಲ್ಲಿ ರಾಜಕಾರಣ ಚರ್ಚೆ ಮಾಡುವುದರ ಬಗ್ಗೆ ಮಡಿವಂತಿಕೆ ಬಿಡುತ್ತಿರುವುದೂ ಶುಭಸೂಚನೆ. ಆದರೆ ಚಂಪಾರವರ "ಪ್ರಾದೇಶಿಕ" ಮತ್ತು "ರಾಷ್ಟ್ರೀಯ" ಮತ್ತು "ಪ್ರಾದೇಶಿಕ ಅಜೆಂಡಾ ಇರುವ ರಾಷ್ಟ್ರೀಯ" ಪಕ್ಷಗಳ ಪರಿಕಲ್ಪನೆ ಸಮಸ್ಯಾತ್ಮಕವಾದದ್ದು. ಹಲವು (ಅವರ ದೃಷ್ಟಿಯಲ್ಲಿ) ಸಫಲ ಪ್ರಬಲ ಪ್ರಾದೇಶಿಕ ಪಕ್ಷಗಳು ಕೇಂದ್ರವನ್ನು ಕೇಂದ್ರೀಕರಣವನ್ನೂ ವಿರೋಧಿಸಲು ಸಾಧ್ಯವಾಗದೆ, "ರಾಷ್ಟ್ರೀಯ ಪಕ್ಷ"ಗಳ ಜತೆ ಶಾಮೀಲಾಗುವದನ್ನು ಗಮನಿಸಿದಂತಿಲ್ಲ. ಇದು ದೇಶದ ಆಳುವ ವರ್ಗಗಳ ಸ್ವರೂಪದ ಬಗ್ಗೆ ತಿಳುವಳಿಕೆಯ ಅಭಾವದಿಂದ ಬಂದಿದ್ದು. ಅವರು ಎಡಪಕ್ಷಗಳನ್ನು ಯಾವ ಬಕೆಟಿಗೆ ಸೇರಿಸುತ್ತಾರೆ ? "ಪ್ರಾದೇಶಿಕ" ಮತ್ತು "ರಾಷ್ಟ್ರೀಯ" ಅಜೆಂಡಾಗಳ ನಡುವೆ ವೈರುಧ್ಯವಿಲ್ಲ. ಆಳುವ ವರ್ಗ ಮತ್ತು ಜನತೆಯ ನಡುವೆ ವೈರುಧ್ಯ ಇದೆ. "ಪ್ರಾದೇಶಿಕ" ಮತ್ತು "ರಾಷ್ಟ್ರೀಯ" ಆಳುವ ವರ್ಗಗಳ ನಡುವೆ ತಿಕ್ಕಾಟ ಇತ್ತು. ಈಗ ಅದು ಚೌಕಾಶಿ-ಸಹಕಾರವಾಗಿ ಪರಿವರ್ತಿತವಾಗುತ್ತಿದೆ.

*****

ಚಂಪಾ ಭಾಷಣದ ಆಯ್ದ ತುಣುಕುಗಳು

ಸಾಹಿತ್ಯ ಸಮ್ಮೇಳನ ಸಂತೆ-ಜಾತ್ರೆಯೇ!

'ಸಂತೆ', 'ಜಾತ್ರೆ' ಅಂತ ಮೂದಲಿಸುವವರೆಲ್ಲ ಸಂತೆಯನ್ನೇ ಸವಿಯದ, ಜಾತ್ರೆಯ ಸಂಭ್ರಮವನ್ನೇ ಅರಿಯದ ನಗರ ಪ್ರಜ್ಞೆಯ ಕೂಪಮಂಡೂಕಗಳು. ಹಳ್ಳಿಗಾಡಿನಿಂದ ಬಂದ ನನ್ನಂಥವರಿಗೆ; ಸಾಹಿತ್ಯ ಎಂಬುದು ಕೇವಲ ಕೆಲವು ಶಿಷ್ಟ ಪ್ರಜ್ಞೆಗಳ, ಪಾಂಡಿತ್ಯಪೂರ್ಣ ಅಭಿಪ್ರಾಯಗಳ, ಪಿಸುಮಾತಿನ ಪಕ್ಷಪಾತದ ವಿಮರ್ಶೆಗಳ, ಪರಸ್ಪರ ಬೆನ್ನು ಕೆರೆಯುವ ಕ್ಲಬ್ ಸದಸ್ಯರ ಬೌದ್ಧಿಕ ವ್ಯಾಯಾಮ ಎಂಬುದರಲ್ಲಿ ನಂಬಿಕೆ ಇಲ್ಲ. ಬದಲಾಗಿ ಅದು ನಮ್ಮ ಸಮುದಾಯದ ಅಭಿವ್ಯಕ್ತಿಯಾಗಿ, ಒಳ್ಳೆಯದರ ಕುರಿತು ಸಂಭ್ರಮಪಡುವ ಹಾಗ ಕೆಟ್ಟದರ ಬಗ್ಗೆ ಆರೋಗ್ಯಪೂರ್ಣ ಆತ್ಮ ವಿಮರ್ಶೆಗೆ ಅನುವು ಮಾಡಿಕೊಡುವ ಸಾಂಸ್ಕೃತಿಕ ವಿದ್ಯಮಾನ. ನಮ್ಮ ಸಮುದಾಯ ಬದುಕಿನಲ್ಲಿ ಸಚಿತೆ ಮತ್ತು ಜಾತ್ರೆಗಳಿಗೆ ಇರುವ ಸಾಂಸ್ಕೃತಿಕ ಮಹತ್ವವನ್ನು ನಾವು ನೋಡಬೇಕು.





ರಾಜಕೀಯ ಆಯ್ಕೆ

ಕನ್ನಡ-ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಾದೇಶಿಕ ಪಕ್ಷವೊಂದರ ಅಗತ್ಯವಿದೆ. ಆದರೆ, ಸದ್ಯಕ್ಕೆ ಹೊಸ ಪಕ್ಷದ ಸಾಧ್ಯತೆ ಕಾಣಿಸುತ್ತಿಲ್ಲವಾದ್ದರಿಂದ ಜಾತ್ಯತೀತವಾದ ರಾಷ್ಟ್ರೀಯ ಪಕ್ಷವೊಂದನ್ನು ಬೆಂಬಲಿಸುವುದು ಅಗತ್ಯ

ಕನ್ನಡನಾಡಿನ ಹಿತಾಸಕ್ತಿಗಳ ಸಂರಕ್ಷಣೆಯ ಹಿನ್ನೆಲೆಯಲ್ಲಿ ನಮ್ಮ ಆಯ್ಕೆ ಸ್ಪಷ್ಟವಾಗಿರಬೇಕು. ನಾವು ಬೆಂಬಲಿಸುವ ಪಕ್ಷಕ್ಕೆ 'ಪ್ರಾದೇಶಿಕ ಅಜೆಂಡಾ' ಇದೆಯೇ ಎಂಬುದನ್ನು ಪರಿಶೀಲಿಸಬೇಕು. ರಾಜ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಆ ಪಕ್ಷದ ಒಲವು ನಿಲುವುಗಳನ್ನು ಒರೆಗೆ ಹಚ್ಚಬೇಕು

ಹಿಂದಿ ಹೇರಿಕೆ ಹಾಗೂ ಕನ್ನಡ ಧ್ವಜಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ರಾಷ್ಟ್ರೀಯ ಪಕ್ಷವೊಂದು ಮೌನವಾಗಿದ್ದುದನ್ನು ಕನ್ನಡ ಜನತೆ ಗಮನಿಸಬೇಕು.

ಮಾತೃಭಾಷಾ ಶಿಕ್ಷಣ ಮಾಧ್ಯಮ

'ಮಗುವಿನ ಶಿಕ್ಷಣ ಮಾಧ್ಯಮ ನಿರ್ಣಯಿಸುವುದು ಪೋಷಕರ ಆಯ್ಕೆಗೆ ಬಿಟ್ಟಿದ್ದು ಎನ್ನುವ ಸುಪ್ರೀಂಕೋರ್ಟ್ ತೀರ್ಪನ್ನು ಸಂವಿಧಾನ ತಿದ್ದುಪಡಿಯ ಮೂಲಕ ಬದಲಿಸಬೇಕು. ಈ ನಿಟ್ಟಿನಲ್ಲಿ ಹೋರಾಟವೇ ಒಂದು ಪರಂಪರೆಯಾಗಿರುವ ಕರ್ನಾಟಕ ಇಡೀ ದೇಶಕ್ಕೆ ದಾರಿ ತೋರಿಸಬೇಕು'

ತಮ್ಮ ಪತ್ರಕ್ಕೆ ಜನಪ್ರಿಯ ಪ್ರಧಾನಿ ಉತ್ತರಿಸಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುಮ್ಮನಿರುವಂತಿಲ್ಲ, ಅವರು ಸುಮ್ಮನಿರಲು ನಾವು ಬಿಡುವುದೂ ಇಲ್ಲ. ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶರ ಹತ್ಯೆ ಸಂದರ್ಭದಲ್ಲೂ ಪ್ರಧಾನಿ ತುಟಿ ಬಿಚ್ಚಲಿಲ್ಲ. ಹೀಗಾಗಿ, ಪ್ರಧಾನಿ ಪ್ರತಿಕ್ರಿಯೆಗೆ ಕಾಯದೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಬೆಂಗಳೂರಿನಲ್ಲಿ ಕ್ಕರೆಯಬೇಕು. ರಾಜ್ಯಭಾಷೆಗಳಿಗೆ ಒದಗಿರುವ ಸಂಕಟದ ಕುರಿತು ಚ್ಚರ್ಚಿಸಿ ಒಮ್ಮತದ ನಿರ್ಣಯಕ್ಕೆ ಬರಬೇಕು. ಈ ಮೂಲಕ ಸಂವಿಧಾನ ತಿದ್ದುಪಡಿಗೆ ಸಂಸತ್ತಿನ ಮೇಲೆ ಒತ್ತಡ ತರುವ ಕೆಲಸವನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಮಾಡಬೇಕಿದೆ.

ಬಹುತ್ವದ ಮೇಲೆ ದಾಳಿ

'ಬಹುತ್ವ'ವನ್ನು ಬುನಾದಿಯಾಗಿ ಹೊಂದಿರುವ ದೇಶದ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕುರೂಪಗೊಳಿಸುವ ಕೆಲಸವನ್ನು ಪ್ರಸ್ತುತ ಕೇಂದ್ರದಲ್ಲಿರುವ 'ಪ್ರಭುತ್ವ' ಮಾಡುತ್ತಿರುವ ಆತಂಕ ಶುರುವಾಗಿದೆ. 'ಒಂದೇ ಭಾಷೆ, ಒಂದೇ ಧರ್ಮ, ಒಂದೇ ಸಿದ್ಧಾಂತ' ಎಂಬ ಧಾಟಿಯಲ್ಲಿ, ನಾವೆಲ್ಲಾ ದಶಕಗಳುದ್ದಕ್ಕೂ ತುಂಬು ಕೊರಳಿನಿಂದ ಹಾಡುತ್ತಿದ್ದ 'ವಂದೇ ಮಾತರಂ' ಗೀತೆಯನ್ನು ಈ ಶಕ್ತಿಗಳು ಹೈಜಾಕ್ ಮಾಡಿದಂತಿದೆ.

'ಅಭಿವ್ಯಕ್ತಿ ಸ್ವಾತಂತ್ರ್ಯ, 'ವೈಚಾರಿಕತೆ'ಗಳ ಮೇಲೆ ನಡೆಯುತ್ತಿರುವ ದಾಳಿಗಳು, ಪ್ರಶ್ನೆ ಮಾಡುವುದೇ 'ರಾಷ್ಟ್ರದ್ರೋಹ' ಎಂದು ಬಿಂಬಿಸುವುದು ಫ್ಯಾಸಿಸಂ ವಾತಾವರಣವನ್ನು ಸೃಷ್ಟಿಸಿವೆ. ಇದನ್ನೆಲ್ಲ ತೆರೆದ ಕಣ್ಣುಗಳಿಂದ ಅರ್ಥಮಾಡಿಕೊಂಡು ಪರಿಹಾರದ ಪ್ರಯತ್ನಗಳತ್ತ ಹೊರಳುವುದು ನಮ್ಮ ಇಂದಿನ ಕರ್ತವ್ಯ

ಜಾತ್ಯತೀತ ಕನ್ನಡ ಪರಂಪರೆ

ಪ್ರತಿ ವರ್ಷ ಕನ್ನಡದ ಹೆಸರಿನಲ್ಲಿ ಲಕ್ಷಾಂತರ ಜನ ಸೇರಿ ಸಂಭ್ರಮಿಸುವುದು ಕನ್ನಡದ ಪ್ರಜ್ಞೆಯ ಸಂಕೇತವಾದರೆ, ಜಾತಿ-ಧರ್ಮಗಳ ಹೆಸರಿನಲ್ಲಿ ಸಮಾವೇಶಗೊಳ್ಳುವುದು ಸಮಾಜದ ವಿಘಟನೆಯ ಸಂಕೇತ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರತಿಗಾಮಿ-ಜೀವವಿರೋಧಿ ಧ್ವನಿಗಳು ಅಲ್ಲಲ್ಲಿ ಕೇಳಿಸಿದರೂ, ಅವು ಒಂದು ಪ್ರತ್ಯೇಕ ಧಾರೆಯಾಗಿ ರೂಪುಗೊಂಡಿಲ್ಲ. ಎರಡು ಸಾವಿರ ವರ್ಷಗಳುದ್ದಕ್ಕೂ ಉಳಿದುಕೊಂಡು ಬಂದಿರುವುದು 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಲೋಕದೃಷ್ಟಿಗೆ ದೃಷ್ಟಾಂತವಾಗಿರುವ ಕೃತಿಗಳು.

ಕನ್ನಡ ಚಳುವಳಿ ಹೇಗಿರಬೇಕು?

18ನೇ ಶತಮಾನದಿಂದ ಈಚೆಗೆ ಚಳವಳಿಯಿಲ್ಲದೆ ನಾವು ಏನನ್ನೂ ಪಡೆದಿಲ್ಲ. ಇಂಥ ಕನ್ನಡ ಚಳವಳಿ ನಿರಂತರವಾಗಿ ನಡೆಯುತ್ತಿರಬೇಕು

ಕನ್ನಡ ಭಾಷೆಗೆ, ಬದುಕಿಗೆ, ಸಂಸ್ಕೃತಿಗೆ ಪ್ರೇರಕ ಶಕ್ತಿಗಳಾಗಬೇಕಿದ್ದ ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳು ಇಂದು ಕನ್ನಡದ 'ಕಡುವೈರಿ'ಗಳಾಗಿರುವುದಕ್ಕೆ ಇಂದಿನ ಕೇಂದ್ರೀಕೃತ ವ್ಯವಸ್ಥೆಯೇ ಕಾರಣ. ನಮಗೆ ಇಂದು ಬಹು ದೊಡ್ಡ ಆತಂಕ ಎದುರಾಗಿರುವುದು 'ಭಾಷೆ'ಗಳ ವಲಯದಲ್ಲಿ. ಪ್ರಬುದ್ಧ ಭಾಷೆಯಾದ ಸಂಸ್ಕೃತ, ಕೃತ್ರಿಮ ಶ್ರೇಷ್ಠತೆಯನ್ನು ಆರೋಪಿಸಿಕೊಂಡು ಬಂದ ಪುರೋಹಿತ ವರ್ಗದ ಒಳಸಂಚಿನಿಂದಾಗಿ ಓಣಿಯ ಕೂಸಾಗಿ ಬೆಳೆಯುವ ಬದಲು ಕೋಣೆಯ ಕೂಸಾಗಿ ಕೊಳೆಯತೊಡಗಿತು. ಜಗತ್ತಿನೊಂದಿಗೆ ಅರ್ಥಪೂರ್ಣ ಸಂಬಂಧ ಹೊಂದಲು ಅನುವು ಮಾಡಿಕೊಡುವ ಇಂಗ್ಲಿಷ್ ಹುಸಿ ಕಾನ್ವೆಂಟ್ ಸೊಕ್ಕಿನ ಕಹಳೆಯಾಗಿದೆ. ಉತ್ತರ ಭಾರತದ ಹಿಂದಿ ಸರ್ವಾಧಿಕಾರಿಗಳ ಕೈಯಲ್ಲಿನ ದಮನಕಾರಿ ಅಸ್ತ್ರವಾಗುತ್ತಿದೆ. ಈ ವಿರೋಧಾಭಾಸಕ್ಕೆ ಬಂಡವಾಳಶಾಹಿ, ಅಧಿಕಾರಶಾಹಿ ಹಾಗೂ ಪುರೋಹಿತಶಾಹಿ ಶಕ್ತಿಗಳ ಸ್ವಾರ್ಥ, ತಪ್ಪು ನೀತಿಗಳು ಕಾರಣ.

ಭಾಷೆ, ಸಾಹಿತ್ಯ, ಸಂಸ್ಕೃತಿಯ ಉಳಿವು ಎನ್ನುವ ಸೀಮಿತ ಚೌಕಟ್ಟನ್ನು ಮೀರಿ, ನಾಡ ಜನತೆಯ ಬದುಕಿನ ಸಕಲ ಮಗ್ಗಲುಗಳನ್ನೂ ಚಳವಳಿ ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳಬೇಕಾಗಿದೆ. ತಮಿಳರ ವಿರುದ್ಧ ಹೋರಾಡುವುದೇ ಕನ್ನಡ ಚಳವಳಿ ಎಂಬ ಮಿಥ್ಯೆ ಅಳಿದುಹೋಗಬೇಕು. ನಮ್ಮ ನಿಜವಾದ ಶತ್ರುಗಳಾದ ಹಿಂದಿ ವಲಯದ ವ್ಯಾಪಾರಿ ವರ್ಗ, ಜಾಗತೀಕರಣದ ಸೋಗಿನಲ್ಲಿ ಬರುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ನಮ್ಮ ಚಳವಳಿ ನಡೆಯಬೇಕಿದೆ.



ಕನ್ನಡ ಚಳುವಳಿ ನಿರಂತರವಾಗಿ ನಡೆಯುತ್ತಲೇ ಇರಬೇಕು. ಅದು ಪಡೆಯಬೇಕಾದ ಆಯಾಮಗಳೆಂದರೆ : 'ಭಾಷಾ' ಕೇಂದ್ರಿತವಾಗದೆ ನಾಡಿನ ಸಮಸ್ತ ಸಮಸ್ಯೆಗಳಿಗೆ ಸ್ಪಂದಿಸಬೇಕು. 'ರಾಜಧಾನಿ' ಕೇಂದ್ರಿತವಾಗದೆ ಇಡೀ ನಾಡಿನ ಸಮಸ್ತ ಸಮಸ್ಯೆಗಳಿಗೆ ಸ್ಪಂದಿಸಬೇಕು. 'ದ್ವೇಷ' ಕೇಂದ್ರತವಾಗದೆ ಪ್ರೀತಿ, ವಿಶ್ವಾಸ, ಹೃದಯವಂತಿಕೆಗಳ ನೆಲೆಯಲ್ಲಿ ನಡೆಯುವ ಮಾನವೀಯ ಚಳುವಳಿಯಾಗಬೇಕು. ನಾಡಿನ ಸಮಷ್ಟಿ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿದ್ಯಮಾನವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಸಮಸ್ಯೆಗಳ ಪರಿಹಾರಕ್ಕಾಗಿ ಸುಸಂಘಟಿತ

ಪುಟ 11 ಕ್ಕೆ

ಹಿಂದಿನ ಸಮ್ಮೇಳನಗಳಂತೆ 83ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಲವಾರು ವಿಷಯಗಳ ಬಗ್ಗೆ ವಿಚಾರಸಂಕಿರಣಗಳು ಹಲವು ಗೋಷ್ಟಿಗಳಲ್ಲಿ ನಡೆದವು. ಆದರೆ ಸಾಮಾನ್ಯವಾಗಿ ಎಡ ಚಳುವಳಿಗಳ ನಾಯಕರು ಅದರಲ್ಲೂ ಕಾರ್ಮಿಕ ನಾಯಕರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಟಿಗಳಿಗೆ, ವಿಚಾರ ಸಂಕಿರಣಗಳಿಗೆ ಕರೆಯುತ್ತಿದ್ದದ್ದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ನವೆಂಬರ್ 26ರಂದು ನಡೆದ "ಜನಪರ ಚಳುವಳಿಗಳು" ಗೋಷ್ಟಿಗೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾ. ಎಸ್. ವರಲಕ್ಷ್ಮಿ ಅವರನ್ನು ಆಹ್ವಾನಿಸಿದ್ದು ವಿಶೇಷ ಎಂದೇ ಹೇಳಬೇಕು. ಕರ್ನಾಟಕದ ಕಾರ್ಮಿಕ ಚಳುವಳಿ ಜನತೆಯನ್ನೂ ಸಾಹಿತ್ಯ ಬೌದ್ಧಿಕ ವಲಯವನ್ನೂ ತಟ್ಟುತ್ತಿರುವ ಹಾಗೂ ಸಾಹಿತ್ಯ-ಬೌದ್ಧಿಕ ವಲಯವೂ ಸಮಾಜದ ಬದುಕಿನ ಇತರ ಆಯಾಮಗಳಿಗೆ ಕಣ್ಣು ತೆರೆಯುತ್ತಿರುವುದರಿಂದಾಗಿ ಇರಬೇಕು. ಇದೊಂದು ಸಕಾರಾತ್ಮಕ ಬೆಳವಣಿಗೆ. ಇಲ್ಲಿ ಕಾ. ಎಸ್. ವರಲಕ್ಷ್ಮಿ ಅವರು ಆ ಗೋಷ್ಟಿಯಲ್ಲಿ ಮಂಡಿಸಿದ ಪ್ರಬಂಧದ ಪೂರ್ಣ ಪಾಠ.



"ಕಾರ್ಮಿಕ ಚಳುವಳಿಗಳು"

- ಎಸ್. ವರಲಕ್ಷ್ಮಿ

ಮಾನವ ಸಮಾಜ ವಿಕಾಸದ ನಂತರ ನಾಗರೀಕತೆ ಬೆಳವಣಿಗೆ ಆಗಿ ಎಲ್ಲಿಂದ ಉತ್ಪಾದನಾ ಪ್ರಕ್ರಿಯೆ ಪ್ರಾರಂಭವಾಯಿತೋ ಅಲ್ಲಿಂದ ಶ್ರಮಿಕರ/ಕಾರ್ಮಿಕರ ವರ್ಗ ಉಗಮವಾಯಿತು. ಬಂಡವಾಳಷಾಹಿಯ ಕಡುಲೋಭ ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವಂತೆ ಮಾಡಿತು. ಗುಲಾಮಗಿರಿಯು ಸಂಘರ್ಷಕ್ಕೆ, ಸಂಘರ್ಷವು ಸಂಘಟನೆಗೆ, ಸಂಘಟನೆಯು ಚಳವಳಿಗಳಿಗೆ, ಚಳವಳಿಯು ಸಾಹಿತ್ಯ ರಚನೆಗೆ ಪ್ರೇರಣೆಯಾದವು.

ಹೌದು. ಯಾವುದೇ ಚಳವಳಿಯ ಸೃಜನಶೀಲ ಅಭಿವ್ಯಕ್ತಿಗೆ ಸಾಹಿತ್ಯ ರಚನೆ ಮುಖ್ಯವಾಗುತ್ತದೆ. ಪೀಟ್ ಸೀಗರ್ ಹೇಳಿದ ಹಾಗೆ, ಹೋರಾಟದ ಹಾಡುಗಳು ನಮ್ಮ ಉತ್ಸಾಹವನ್ನು ಕಾಯ್ದಿಡುವ ಬಹುಮುಖ್ಯ ಊರುಗೋಲು. ಇದೇ ಸಂದರ್ಭದಲ್ಲಿ ಕಲ್ಯಾಣದ ಶರಣರ ಅನುಭವ ಮಂಟಪವನ್ನು ಉಲ್ಲೇಖಿಸಬೇಕು. ಇಲ್ಲಿ ವಿವಿಧ ಕಾಯಕಗಳ ದುಡಿಯುವ ಜನ ತಮ್ಮ ದುಡಿಮೆಯ ಅನುಭವಗಳನ್ನೇ ಅನುಭಾವವಾಗಿ ಮಾಡಿಕೊಂಡು ಸಾಮಾಜಿಕ ಕ್ರಾಂತಿಗೆ ಕಾರಣರಾದರು. ಇಲ್ಲಿಯೂ ಮುಖ್ಯ ಪಾತ್ರ ವಹಿಸಿದ್ದು ಸಾಹಿತ್ಯವೇ. ವಚನ ಸಾಹಿತ್ಯ.

ಆದರೆ ವಚನ ಸಾಹಿತ್ಯವು ದುಡಿಯುವ ಜನರು ಕಟ್ಟಿದ ಸಾಹಿತ್ಯ ಪ್ರಕಾರವಾಗಿತ್ತೇ ಹೊರತು, ದುಡಿಯುವ ಜನರ ಬದುಕನ್ನು ಬಿಚ್ಚಿಡುವ ಸಾಹಿತ್ಯವಾಗಲಿಲ್ಲ. ಆದರೂ ಅದು ಆ ಸಮುದಾಯದ ವಿಮುಕ್ತಿಗೆ, ಪ್ರಗತಿಗೆ ಬಹುದೊಡ್ಡ ಆಸರೆಯಾಯಿತು. 'ಕಾಯಕವೇ ಕೈಲಾಸ' ಎಂದ ಬಸವಣ್ಣನವರು ದುಡಿಮೆಯ ಮಹತ್ವವನ್ನು ಹೇಳುತ್ತಲೇ ದುಡಿಯುವ ಜನರ ಪ್ರಾಮುಖ್ಯತೆಯನ್ನೂ ಸಾರಿದರು. ಶ್ರಮಸಂಸ್ಕೃತಿಯನ್ನು ಎತ್ತಿ ಹಿಡಿದರು. ಆದರೆ ನಂತರದ ದಿನಗಳಲ್ಲಿ ಶ್ರಮಸಂಸ್ಕೃತಿ ಕನ್ನಡ ಸಾಹಿತ್ಯದಲ್ಲಿ ಪ್ರಾಶಸ್ತ್ಯ ಪಡೆದಿದ್ದು ಬಹಳ ಕಡಿಮೆ. ಹಾಗೆ ರೈತಾಪಿ ಜೀವನದ ಸುತ್ತಮುತ್ತ ಸಾಹಿತ್ಯ ರಚನೆಯಾದರೂ ದುಡಿಯುವ ಜನರ ಕಥನಗಳು ಹಳ್ಳಿಗಳಿಗೇ ಸೀಮಿತವಾಗಿ ಹೋದವು. ಅದು ನಗರದ ಶ್ರಮಿಕ ವರ್ಗವನ್ನು, ಕಾರ್ಮಿಕರನ್ನು ಒಳಗೊಳ್ಳಲೇ ಇಲ್ಲ.

**

ಹಾಗೆ ಕಾರ್ಮಿಕರ ಬದುಕು ಬವಣೆಗಳನ್ನು ತಕ್ಕಮಟ್ಟಿಗೆ ಪರಿಚಯಿಸುವ ಕಾದಂಬರಿ ಎಂದರೆ ನನಗೆ ನೆನಪಾಗುವುದು ಬಲ್ಲಾಳರ 'ಬಂಡಾಯ' ಕಾದಂಬರಿ. ಈ ಕಾದಂಬರಿಯು ನಗರ ಸಮಾಜ, ಕಾರ್ಮಿಕ ಚಳವಳಿ, ಅದರ ಬೇರೆ ಬೇರೆ ಸಮಸ್ಯೆಗಳನ್ನು ಇತ್ಯಾದಿಗಳನ್ನು ಪರಿಚಯಿಸುತ್ತದೆ. ಹಾಗಿದ್ದರೂ ಕೂಡ ಅದು ಕೈಗಾರಿಕೆಯೊಂದರ ಒಳಗಿನ ಮತ್ತು ಅದು ರಾಜಕೀಯ ವ್ಯವಸ್ಥೆಯ ಜೊತೆಗೆ ಹೊಂದಿಕೊಂಡಿರುವ ನಂಟನ್ನು ಹೆಚ್ಚು ವಿವರಿಸುವುದಿಲ್ಲ. ಕೈಗಾರಿಕೆಗಳು ಇಂದು ಬಹಳ ದೊಡ್ಡ ಕಾರ್ಯಕ್ಷೇತ್ರವಾದರೂ ಆ ಬಗೆಗಿನ ಸಾಹಿತ್ಯ ಅಷ್ಟಾಗಿ ಸೃಷ್ಟಿಯಾಗುತ್ತಿಲ್ಲ. ಯಾಕೆ ಸೃಷ್ಟಿಯಾಗುತ್ತಿಲ್ಲ ಎಂಬುದರ ಬಗೆಗೆ ಯೋಚಿಸಬೇಕಾದ ಅಗತ್ಯವಿದೆ. ಕೈಗಾರಿಕೆಗಳು ಇಂದು ವ್ಯಾಪಕವಾಗಿ ಸ್ಥಾಪನೆಗೊಂಡು ಕೋಟ್ಯಂತರ ಜನರು ಅವುಗಳನ್ನು ಆಧರಿಸಿ ಜೀವಿಸುತ್ತಿದ್ದರೂ ಆ ಬಗೆಗಿನ ಮತ್ತು ಅವುಗಳೊಳಗಿನ ಜೀವನ ಸಂಘರ್ಷವನ್ನು ಕಟ್ಟಿಕೊಡುವ ಶಕ್ತವಾದ ಸಾಹಿತ್ಯ ಕನ್ನಡದಲ್ಲಿ ಇನ್ನೂ ರೂಪುಗೊಂಡಿಲ್ಲವೆಂದೇ ಹೇಳಬೇಕು.

**

ಯಾಕೆ ಹೀಗಾಗುತ್ತಿದೆ? ಸಾಹಿತಿಗಳು ಮತ್ತು ಕಾರ್ಮಿಕರ ನಡುವಿನ ಒಡನಾಟದ ಕೊರತೆಯೇ ಇದಕ್ಕೆ ಕಾರಣವೇ? ಅಥವಾ ಬರಹಗಾರರು ಬೇಸಾಯ ಮತ್ತಿತರ ಗ್ರಾಮೀಣ ಬದುಕಿನ ವಿವರಗಳಿಗೆ ಕೊಟ್ಟಷ್ಟು ಮಹತ್ವದಿಂದ ಕೈಗಾರಿಕೆ ಮತ್ತು ಕಾರ್ಮಿಕರನ್ನು ನೋಡಲು ಸಾಧ್ಯವಾಗಿಲ್ಲವೆ?

ಯಾಕೆಂದರೆ, ಕಾರ್ಮಿಕ ಸಂಘಟನೆಯೊಂದರ ಭಾಗವಾಗಿರುವ ನಾನು ಪ್ರತಿಯೊಬ್ಬ ಕಾರ್ಮಿಕರಲ್ಲೂ ಒಂದು ಕಥೆಯನ್ನು ಕಂಡಿದ್ದೇನೆ. ಕಾರ್ಮಿಕರು ಪ್ರತಿಭಟನೆಗೆ ಇಳಿಯುತ್ತಾರೆ, ಚಳವಳಿ ಕಟ್ಟುತ್ತಾರೆ ಅಂದರೇನೇ ಅಲ್ಲೊಂದು ಮಹತ್ವದ ಕಥನ ಇದ್ದೇ ಇರುತ್ತದೆ. ಕೇವಲ ಸಾಹಿತ್ಯಕ ದೃಷ್ಟಿಯಿಂದ ಅಲ್ಲ, ಚಾರಿತ್ರಿಕ ದೃಷ್ಟಿಯಿಂದಲೂ ಅದು ಮಹತ್ವದ್ದಾಗಿರುತ್ತದೆ. ಉದಾಹರಣೆಗೆ, ನಿರಂಜನರು ಕೈಯೂರಿನ ರೈತರು ಭೂಮಿಯ ಹಕ್ಕಿಗಾಗಿ ಆರಂಭಿಸಿದ ಹೋರಾಟದ ಮೂಲಕ ಕ್ರಾಂತಿಯ ಕಿಡಿ ಹೊತ್ತಿಸಿದ ಕಥನವನ್ನು ಕಾದಂಬರಿಯಾಗಿ ಬರೆದರು. ಇಂಥ ಪ್ರಯತ್ನ ಕಾರ್ಮಿಕ ಹೋರಾಟದ ಕುರಿತು ಯಾಕೆ ಮಾಡಬಾರದು? ಮ್ಯಾಕ್ಸಿಂ ಗಾರ್ಕಿ ಕಾರ್ಮಿಕ ಹೋರಾಟದ ಹುಟ್ಟು, ಬೆಳವಣಿಗೆಯನ್ನು 'ತಾಯಿ' ಕಾದಂಬರಿಯಲ್ಲಿ ಅದ್ಭುತವಾಗಿ ತೆರೆದಿಟ್ಟರು. ಇದು ಕನ್ನಡದಲ್ಲಿ ಸಾಧ್ಯವಾಗಲಾರದೇ? ನಮ್ಮ ರಾಜ್ಯವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ 7 ದಶಕಗಳಲ್ಲಿ ಅದೆಷ್ಟು ಕಾರ್ಮಿಕರ ಬೃಹತ್ ಹೋರಾಟಗಳು ನಡೆದಿಲ್ಲ? ಅದೆಷ್ಟು ಸಂಗಾತಿಗಳು ಜೈಲು ಸೇರಿಲ್ಲ? ಪ್ರತಿಭಟನೆಗಳು ಯಶ ಕಂಡಿಲ್ಲ? ಅಂಥ ಪ್ರಕರಣಗಳು, ಚಳವಳಿಗಳು ಬೇಕಾದಷ್ಟಿವೆ.

ಕರ್ನಾಟಕ ರಾಜ್ಯ ಅಧಿಕೃತವಾಗಿ ಘೋಷಣೆಯಾಗದಿರುವ ಸಂದರ್ಭದಲ್ಲಿ, ಅಂದರೆ ಸ್ವಾತಂತ್ರ್ಯಪೂರ್ವದಿಂದಲೂ ದುಡಿಯುವ ವರ್ಗ ಅಸ್ತಿತ್ವದಲ್ಲಿದೆ. ಅಂದಿನ ಕಾರ್ಮಿಕ ವರ್ಗ ತಮ್ಮ ಮೇಲಿನ ಶೋಷಣೆಯ ವಿರುದ್ಧ ಮಾತ್ರವಲ್ಲದೆ ಜವಾಬ್ದಾರಿಯುತ ಸರ್ಕಾರಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ನಡೆಸಿತ್ತು. ಅಂದಿನ ಶ್ರಮಿಕರ ಕಥೆಗಳನ್ನು, ಸಂಕಟಗಳನ್ನು ಸ್ವಾತಂತ್ರ್ಯ ಹೋರಾಟ ಕಾಲಘಟ್ಟದಲ್ಲಿ ರಚನೆಗೊಂಡ ಶಿವರಾಮ ಕಾರಂತರ 'ಚೋಮನ ದುಡಿ' ಕಟ್ಟಿಕೊಡುತ್ತದೆ. ಕೃಷಿಕೂಲಿಗಾರರು ಪ್ಲಾಂಟೇಷನ್ ಕೂಲಿಕಾರರಾಗಿ ಪರಿವರ್ತನೆಯಾಗುವುದನ್ನು ಈ ಕೃತಿ ವಿವರಿಸುತ್ತದೆ.

**

ಇನ್ನು ಸ್ವಾತಂತ್ರ್ಯಾನಂತರದ ಕಾರ್ಮಿಕ ಹೋರಾಟ ಮತ್ತು ಕಾರ್ಮಿಕರು ಹೆಗಲು ನೀಡಿದ ಹೋರಾಟಗಳು ಯಾವುದೆಲ್ಲ ಎಂದು ನೋಡೋಣ.

1952 ರಲ್ಲಿ ನಡೆದ ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಅಂದಿನ ಕಾರ್ಮಿಕ ವರ್ಗ ಮಹತ್ತರ ಪಾತ್ರವನ್ನು ವಹಿಸಿದೆ. ಕರ್ನಾಟಕ ಏಕೀಕರಣ ನಂತರದ ಕಾರ್ಮಿಕ ಚಳುವಳಿಗಳು ಬಹುರಾಷ್ಟ್ರೀಯ ಕಂಪನಿಯಾದ ಮೈಕೋ ಕಾರ್ಮಿಕರು ಕೆಲಸದ ಒತ್ತಡ ಮತ್ತು ಕೆಲಸದ ಭದ್ರತೆಗಾಗಿ 1979-1980 ರ ನಡುವೆ 87 ದಿನಗಳ ಮುಷ್ಕರದಲ್ಲಿ ಗುಂಡುಗಳ ದಾಳಿ ಮತ್ತು ಚೂರಿಯ ಇರಿತಗಳನ್ನು ಎದುರಿಸಿದ್ದಾರೆ.

1979 ಡಿಸೆಂಬರ್‌ನಲ್ಲಿ ಬೆಂಗಳೂರನ್ನು ಬಂದ್ ಮಾಡಲಾಗಿದೆ. ಮತ್ತೊಂದು ಬಹುರಾಷ್ಟ್ರೀಯ ಸಂಸ್ಥೆಯಾದ ಐಟಿಸಿ ಕಾರ್ಮಿಕರ 132 ದಿನಗಳ ಮುಷ್ಕರ, ಬೆಳಗಾಂ ನ ಇಂಡಿಯನ್ ಅಲ್ಯೂಮಿನಿಯಂ ಕಾರ್ಮಿಕರ 54 ದಿನಗಳ ಮುಷ್ಕರ, ಮಿಲ್ ಕಾರ್ಮಿಕರ 111 ದಿನಗಳ ಮುಷ್ಕರ ಬಂದ್ ಮತ್ತು ಸರಿಸಾಟೀ ದಾಂಡೇಲಿ ಬಂದ್, 60 ದಿನಗಳ ಪ್ಲಾಂಟೇಶನ್ ಮುಷ್ಕರ, ಮಂಗಳೂರು ಕುಂದಾಪುರದ ಹೆಂಚಿನ ಕಾರ್ಮಿಕರ ಹೋರಾಟಗಳು, ಗುಲ್ಬರ್ಗಾ ಎಮ್.ಎಸ್.ಕೆ. ಮಿಲ್ ದಾವಣೆಗೆರೆ ಮೈಸೂರು, ಬೆಂಗಳೂರು ಮಿಲ್‌ಗಳ ಕಾರ್ಮಿಕರು ರಜೆ, ತುಟ್ಟಿಭತ್ಯೆ ಮತ್ತು ಮೂಲವೇತನದಲ್ಲಿ ಹೆಚ್ಚಳವಾಗಬೇಕೆಂದು 26,000 ಗಿರಣಿ ಕಾರ್ಮಿಕರ ಮೊದಲ ಮುಷ್ಕರ, ಕಾಫೀ ಕ್ಯೂರಿಂಗ್, ಏಲಕ್ಕಿ, ಅಡಿಕೆ, ಗೇರು ಬೀಜ, ಕಾರ್ಮಿಕರ ಹೋರಾಟಗಳು; ದಿನಕ್ಕೆ 8 ರೂ ವೇತನ ಹೆಚ್ಚಳ, ಪಿಎಫ್ ಗಾಗಿ 1980 ಸೆಪ್ಟೆಂಬರ್ ನಲ್ಲಿ ಮೊದಲ ಬಾರಿಗೆ 40 ಸಾವಿರ ಬೀಡಿ ಮಹಿಳೆಯರ ಪ್ರತಿಭಟನೆ ಹಾಗೂ 1980 ಡಿಸೆಂಬರ್ ನಲ್ಲಿ 3 ಲಕ್ಷ ಬೀಡಿ ಕಾರ್ಮಿಕರ ಮುಷ್ಕರಗಳು - ಇವೆಲ್ಲಾ ದೊಡ್ಡ ಕಾರ್ಮಿಕ ಹೋರಾಟಗಳು.

1979 ಮೇ 1 ರಂದು 8 ಗಂಟೆ ಕೆಲಸಕ್ಕಾಗಿ ಹೋಟೆಲ್ ಕಾರ್ಮಿಕರ 1 ದಿನದ ಮುಷ್ಕರ, 1979 ಮೇ ನಲ್ಲಿ ಮೊದಲ ಪೌರ ಕಾರ್ಮಿಕರ ಉಪವಾಸ ಸತ್ಯಾಗ್ರಹ, 1980 ರ ನವಂಬರ್ ನಲ್ಲಿ ಹಟ್ಟಿ ಮತ್ತು ಕೆಜಿಎಫ್ ಚಿನ್ನದ ಗಣಿಗಳ ಬಂದು ದಿನದ ಮುಷ್ಕರ - ಇವುಗಳನ್ನು ನಡೆಸಿದ್ದಾರೆ. 1980 ರಲ್ಲಿ ಗುಂಡುರಾವ್ ಸರ್ಕಾರದ ಅಗತ್ಯ ಸೇವಾ ನಿರ್ವಹಣೆಯ ಮಸೂದೆ ವಿರುದ್ಧ ಸಾರ್ವತ್ರಿಕ ಮುಷ್ಕರ ಆಗಸ್ಟ್ 18 ರಂದು ನಡೆಯಿತು.

1980 ಡಿಸೆಂಬರ್ ನಿಂದ ರಾಜ್ಯದಲ್ಲಿ ಕೇಂದ್ರೀಯ ಸಾರ್ವಜನಿಕ ಕ್ಷೇತ್ರದ 78,000 ಕಾರ್ಮಿಕರ ಐತಿಹಾಸಿಕ ಮುಷ್ಕರ, ಬಿರ್ಲಾರವರ ಹರಿಹರ ಪಾಲಿಫೈಬರ್, ಗ್ವಾಲಿಯಾರ ರಿಲೆಯನ್ಸ್, ಕಿರ್ಲೋಸ್ಕರ ಸಂಸ್ಥೆ, ಮಹೇಂದ್ರ ಮೆಷನರಿ, ಎಸ್ಕಾರ್ಟ ಕಾರ್ಖಾನೆಗಳ ಕಾರ್ಮಿಕರು ಕನಿಷ್ಠ ವೇತನ, ಕೆಲಸದ ಭದ್ರತೆಗಾಗಿ ಹಾಗೂ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ. ಬೆಲೆಯೇರಿಕೆ, ಬಡತನ, ನಿರುದ್ಯೋಗ ಮುಂತಾದ ಬೇಡಿಕೆಗಳಿಗಾಗಿ ಅಂದಿನಿಂದ, ಇಂದಿನ ಉದಾರೀಕರಣ ನೀತಿಗಳಿಂದಾಗುತ್ತಿರುವ ಪರಿಣಾಮ ವಿರುದ್ಧವೂ ಹಲವು ಸ್ವರೂಪಗಳಲ್ಲಿ ಹೋರಾಟಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

***

ಇನ್ನು, ಕಾರ್ಮಿಕ ಹೋರಾಟಗಳ ಮೂರನೇ ಹಂತ, ಜಾಗತೀಕರಣದ ನಂತರದ್ದು.

ಉದಾರೀಕರಣ, ಜಾಗತೀಕರಣ ಮತ್ತು ಹೊಸ ಆರ್ಥಿಕ ನೀತಿಗಳು ಜಗತ್ತನ್ನು ಒಂದು ವಿಶ್ವಗ್ರಾಮವನ್ನಾಗಿ ಮಾಡಲು ಹೊರಟವು. 2ನೇ ಜಾಗತಿಕ ಯುದ್ಧದ ಪರಿಣಾಮ "ಸೂರ್ಯ ಮುಳಗದ ಸಾಮ್ರಾಜ್ಯ" ದ ಸೂರ್ಯ ಮುಳಗಿದ ಪರೋಕ್ಷವಾಗಿ ದೊಡ್ಡಣ್ಣ ಅಮೆರಿಕಾ ಜಗತ್ತಿನ ಮೇಲೆ ತನ್ನ ಹಿಡಿತವನ್ನು ಸಾಧಿಸಲಿಕ್ಕಾಗಿ ಮಾಡಿಕೊಂಡ ವ್ಯವಸ್ಥೆಯೇ ವಿಶ್ವ ಬ್ಯಾಂಕ್, ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ. ಅಮೆರಿಕಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಇಂಗ್ಲೆಂಡ್ ಕೆನಡಾ ಮತ್ತು ರಷ್ಯಾಗಳು ಸೇರಿ ಕೈಗಾರಿಕಾ ರಾಷ್ಟ್ರಗಳ ಒಂದು ಒಕ್ಕೂಟವನ್ನು ರಚಿಸಿಕೊಂಡವು. ಇದರಿಂದ ಜಗತ್ತಿನ ಶ್ರೀಮಂತ ರಾಷ್ಟ್ರಗಳು ಮತ್ತಷ್ಟು ಶ್ರೀಮಂತವಾದರೆ, ಬಡರಾಷ್ಟ್ರಗಳು ಚೇತರಿಸಿಕೊಳ್ಳಲಾರದೆ ಹೋದವು. ಇದರ ನೇರ ಹೊಡೆತ ಬಿದ್ದಿದ್ದು ಕಾರ್ಮಿಕರ ಮೇಲೆ.

ಜಾಗತೀಕರಣದಿಂದ ಅಂತರರಾಷ್ಟ್ರೀಯ ಶ್ರಮ ಮಾರುಕಟ್ಟೆ ಅಂತರರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸೇರಿ ಹೋಯಿತು. ಬಹುರಾಷ್ಟ್ರೀಯ ಕಂಪನಿಗಳು ಸಣ್ಣ ಸಣ್ಣ ಕಂಪನಿಗಳನ್ನು ಒಂದೊಂದಾಗಿ ನುಂಗುತ್ತಿವೆ. ಇದರ ಭಯಾನಕ ಪರಿಣಾಮವನ್ನು ವಿಶ್ವದ ಕಾರ್ಮಿಕರು ಎದುರಿಸಬೇಕಾಗಿದೆ.

ಉದಾರೀಕರಣದ ನಂತರ ಸಂಧರ್ಭದಲ್ಲಿ ಹೊರ ಹೊಮ್ಮಿದ ಧೃಢವಲ್ಲದ ಉದ್ಯೋಗ ವಿನ್ಯಾಸದ ಬೇರುಗಳು ನವ ಉದಾರೀಕರಣದ ನೀತಿಗಳನ್ನು ನಿಯಂತ್ರಿಸುವ ಮತ್ತು ಪ್ರಭಾವಿಸುವ ಮೂಲಕ ಹಿಡಿತಕ್ಕೆ ತೆಗೆದುಕೊಂಡವು. ಇದರಿಂದ ಭಾರತದಲ್ಲಿನ ಉದ್ಯೋಗ ಸಂಬಂಧಗಳ ಸಾಂಪ್ರದಾಯಿಕ, ಧೃಗೋಚರ, ಸುರಕ್ಷಿತ ಸಂಬಂಧಗಳು ಇವುಗಳ ಬದಲಿಗೆ ಅನಿಶ್ಚಿತ, ಅನೌಪಚಾರಿಕ, ಪರಾಧೀನ ಕಾಣದ ಮತ್ತು ಸ್ಥಿರವಲ್ಲದ ಉದ್ಯೋಗ ಸಂಬಂಧಗಳಿಗೆ ದಾರಿ ಮಾಡಿಕೊಟ್ಟವು.

ಈ ಎಲ್ಲದರ ಪರಿಣಾಮವಾಗಿ ಭಾರತದಲ್ಲಿ 1980 ರಲ್ಲಿ ಕಾರ್ಮಿಕರ ಪಾಲು 30% ಇದ್ದದು 9.5% ಕ್ಕೆ ಇಳಿದಿದೆ. ಮಾಲೀಕರ ಲಾಭ 15% ರಿಂದ 55% ಕ್ಕೆ ಹೆಚ್ಚಾಗಿದೆ.

ರಾಜ್ಯ, ದೇಶ ಮತ್ತು ವಿದೇಶಗಳ ಬಂಡವಾಳಶಾಹಿ ವರ್ಗಗಳು ಕಾರ್ಮಿಕ ಕಾನೂನುಗಳನ್ನು ಪ್ರಜಾಪ್ರಭುತ್ವ ವಿರೋಧಿ ನಿರಂಕುಶ, ಉಪದ್ರವಕಾರಿ ಬದಲಾವಣೆಗಾಗಿ ಬೇಡಿಕೆ ಇಡುತ್ತಿವೆ. ಇದಕ್ಕೆ ತಕ್ಕ ಹಾಗೆ ಪ್ರಭುತ್ವಗಳು ಸುಧಾರಣೆಯ ಹೆಸರಿನಲ್ಲಿ ಕಾರ್ಮಿಕರನ್ನು ಮತ್ತೊಮ್ಮೆ ಗುಲಾಮರಾಗಿಸುವ ತಿದ್ದುಪಡಿಗಳನ್ನು ತರುವ ಉತ್ಸಾಹ ತೋರುತ್ತಿವೆ.

***

ದೇಶದ ಪ್ರಥಮ ಕಾರ್ಮಿಕ ಸಚಿವರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ರವರು ಕಾರ್ಮಿಕರಿಗಾಗಿ ತಂದಿದ್ದ ಕಾನೂನುಗಳನ್ನು ಸಂಪೂರ್ಣವಾಗಿ ವಿಫಲಗೊಳಿಸುವ ವ್ಯವಸ್ಥಿತ ಹುನ್ನಾರದ ಭಾಗವಾಗಿ ಪ್ರಸ್ತುತ ಕಾರ್ಮಿಕ ಕಾನೂನುಗಳನ್ನು ಸುಧಾರಿಸುವ ಹೆಸರಿನಲ್ಲಿ ಕಾರ್ಮಿಕರ ಹಕ್ಕುಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳುವ ಕೆಲಸ ನಡೆಯುತ್ತಿದೆ.

ಈಗಾಗಲೇ ಟ್ರೇಡ್ ಯೂನಿಯನ್ ಹಕ್ಕುಗಳು, ಕಾರ್ಮಿಕರ ಕಾನೂನುಗಳ ಉಲ್ಲಂಘನೆ ಸತತವಾಗಿ ಹೆಚ್ಚಾಗುತ್ತಿದೆ. ಖಾಸಗಿ ವಲಯದ ಉದ್ಯಮಗಳು ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳ ಮೇಲೆ ಭಯಾನಕ ಹಲ್ಲೆಗಳು ಅಂದರೆ ಕೆಲಸದಿಂದ ತೆಗೆಯುವುದು, ಲೇ ಆಫ್, ಕಾರ್ಖಾನೆಗಳ ಸ್ಥಳಾಂತರ, ಗೂಂಡಾಗಳ ಉಪಯೋಗ, ಪೋಲಿಸ್ ಕೇಸ್‌ಗಳೂ, ನಾನ್ ಬೇಲ್ ಕೇಸುಗಳು, ಲಾಠಿಚಾರ್ಜ್, ಗೋಲಿಬಾರ್, ಮುಂತಾದವು ಸಾಮಾನ್ಯವಾಗಿದೆ. 12 ಗಂಟೆಯ ದುಡಿಮೆ, ಕೆಲಸದ ಭದ್ರತೆಯಿಲ್ಲದಿರುವುದು, ನಿರಂತರ ಮತ್ತು ಖಾಯಂ ಕೆಲಸಗಳಿಗೆ ಗುತ್ತಿಗೆ, ಹೊರಗುತ್ತಿಗೆ ಕೊಡುವುದು. ಕೌಶಲ್ಯ ಭರಿತ ಕೆಲಸಗಳನ್ನು ಗುತ್ತಿಗೆಯಲ್ಲಿ ಮಾಡಿಸುವುದು, ಮಹಿಳೆಯರಿಗೆ ಹೆರಿಗೆ ಭತ್ಯೆ ನಿರಾಕರಣೆ, ದುಡಿಮೆಯ ಸ್ಥಳಗಳಲ್ಲಿ



ಎದ್ದೇಳು ಮಂಜುನಾಥಾ

ಮೀನು ತಿಂದು ಬಂದವರೆ ಭಕ್ತರು
ಎದ್ದೇಳು ಮಂಜುನಾಥಾ
ಹಸಿದು ಬಂದಿದ್ದಾರೆ ಮತ್ತೊಬ್ಬರು
ಎದ್ದೇಳ್ತಿಯಾ ಮಂಜುನಾಥಾ?

ಉಪವಾಸ ಮಾಂಸ ಖ್ಯಾತಿ ಅಪಖ್ಯಾತಿ
ತಿಂದು ಕುಡಿದವರ ವ್ಯಾಖ್ಯಾನ ಪ್ರೀತಿ.
ಅವರ ಪಾದ ಧೂಳಿಯಿಂದ
ಪಾವನವಾಯಿತಂತೆ ನಿನ್ನ ದೇಗುಲ
ನಿನಗೊಪ್ಪಿಗೆಯೇ ಮಂಜುನಾಥಾ?

ತಿಂದಿರಬಾರದು ಮೀನು
ತಂದಿರಬಾರದು ಫೋನು
ತೊಟ್ಟಿರಬಾರದು ಪ್ಯಾಂಟು
ಕುಡಿದಾಗಿರಬಾರದು ಟೈಟು
ತೊಳೆತೊಳೆದು ಮಡಿಯಾಗಿಟ್ಟ
ಗರ್ಭಗುಡಿಗೆ ಹೊಕ್ಕ ಬೇಡರಕಣ್ಣಪ್ಪ
ತಿನ್ನಲಾಗದು ಅವಿತು ಬಾಳೆಯಹಣ್ಣು
ನಾನು ಹೋದರೆ ಹೋದೇನು
ಎಂದವನಿಗೆ ಬಿದ್ದ ಲಾಠಿ ಪೆಟ್ಟೇನು
ಗಂಜಳ ಕುಡಿದವರ ನಾಲಿಗೆಯಲ್ಲಿ
ತಪ್ಪುತ್ತದೆಯಂತೆ ಸ್ತೋತ್ರ ತೊದಲಿನಲ್ಲಿ
ಇನ್ನು ನಿನ್ನ ಒಲಿಸಿಕೊಳ್ಳುವ ಆಸೆ
ಯಾರಿಗಿಲ್ಲ ಮಂಜುನಾಥಾ?

ಕಮಲಕ್ಕೂ ಕಮಲಹಾಸನಿಗೂ
ಮಲ ಮಾತ್ರವೇ ಕಾಮನ್ನು
ಗುಂಡಿಗೆಯ ಮಾತಾಡಿದರೆ
ಗುಂಡಿನ ಧ್ವನಿ ಕೇಳಿಸುವವರ
ಜೊತೆ ಪ್ರೇಮಾಲಾಪವೇನು?
ಕಾಮಿತಾರ್ಥ ಪ್ರದಾಯನ
ಸ್ವಚ್ಛ ಭಾರತದಲ್ಲಿ ಮಗ್ನ
ಕಾಷಾಯ ವಸ್ತ್ರಧಾರಿ
ಹೆಜ್ಜೆ ಹೆಜ್ಜೆಗೂ ನಗ್ನ
ಧರ್ಮ ರಕ್ಷಕರಂತೆ ಸ್ಖಲನ ವೀರರು
ಕೂಗು ಮಾರಿಗಳು ಇವರೇ
ದಂಡಪಿಂಡಗಳು

ಆಡುತ್ತಿದ್ದಾರೆ ಮಾತು, ಮಾತಾ ಅದು?
ನುಡಿದರೆ ಮುತ್ತಿನ ಹಾರದಂತಿರಬೇಕು
ಎಂದರೆ ಚಾರ್ಮಿನಾರ್ ಸುತ್ತುವವರು
ಯಾರು ಯಾರಿಗೆ ಯಾರು ಹುಟ್ಟಿದ್ದಕ್ಕೆ
ಯಾರು ಸಾಕ್ಷಿ
ಕಲ್ಲಿಗೆ ಹುಟ್ಟಿದವರು ಹುಲ್ಲಿಗೆ ಬೆಳೆದವರು
ಆಣೆ ಪ್ರಮಾಣಕ್ಕೆ ಅವರವ್ವನ ಅಪ್ಪನ
ಎಳೆತಂದವರು.
ಕಾಯಕದ ಮಾತೇ ಇಲ್ಲ ಬರಿ ಕಾಯದ
ಕಥೆ
ಕಾಮಕ್ಕೂ ಇಲ್ಲಿ ಗುಪ್ತ ಕ್ಯಾಮರಾದ ವ್ಯಥೆ

ಇದು ಚಾಮುಂಡಿಯೇ ಇಲ್ಲವೆನ್ನುವ ಕಾಲ
ಮಹಿಷನೂ ಬೌದ್ಧನೆನ್ನುವ ಅಕಾಲ
ಸಾಬರ ಗಲ್ಲಿಯಲ್ಲಿ ಸನಾತನಿಯರ ಯಾತ್ರೆ
ಪರಿವರ್ತನೆಯೂ ಒಂದು ಜಾತ್ರೆ
ಸನ್ಯಾಸಿಗೇನು ಗೊತ್ತು ತಾಜಮಹಲಿನ
ಮಹತ್ವ
ಕಮಂಡಲೇ ಸಮುದ್ರವೆಂದುಕೊಳ್ಳುವ ಕುಬ್ಜತ್ವ
ರಥಬೀದಿ ಬಿಟ್ಟು ಹೊರಹೋಗಬಾರದಂತೆ
ಧರ್ಮ
ಅಷ್ಟಮಠಗಳ ಕೊಟ್ಟಿಗೆಯಲ್ಲಿ ಕಟ್ಟಿ
ಹಾಕಲಾಗಿದೆ ಕರ್ಮ
ರಾವಣರ ನೇತೃತ್ವದಲ್ಲಿ ರಾಮನ ಸೇನೆ
ಸೀತೆ ಪದ್ಮಾವತಿಯರೂ ಇವರ ಸ್ವತ್ತೇನೇ?

ಇದು ತಿನ್ನಬಾರದ ಮೀನು
ಕಹಿಯಾಯಿತು ಜೇನು
ಮುಟ್ಟಬಾರದ ಮೈ
ತಟ್ಟಲಾಗದ ಕೈ

ಮೀನು ತಿಂದವರನ್ನು ನೋಡಿ
ಮೊಸಳೆ ತಿಂದವರ ಕೇಕೆ
ಬೇಕಿತ್ತಾ ನಿನಗೆ ಇದೆಲ್ಲ ಮಂಜುನಾಥಾ?



*** ಪ್ರತಿಭಾ ನಂದಕುಮಾರ್**
ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಓದಿದ ಒಂದು ಕವನ

ಶಿಶುಪಾಲನಾ ಕೇಂದ್ರಗಳು ಇಲ್ಲದಿರುವುದು, ಸಮಾನ ಕೆಲಸಕ್ಕೆ ಸಮಾನವೇತನ ನೀಡದಿರುವುದು, ಸಾಮಾಜಿಕ ಭದ್ರತೆಯ ಭಾಗವಾಗಿ ನಿವೃತ್ತಿ ವೇತನ ಇಎಸ್‌ಐ ಗಳನ್ನು ಕೊಡದಿರುವುದು, ಪರಿಹಾರಗಳನ್ನು ನೀಡದೇ ಕೆಲಸದ ನಿರಾಕರಣೆ ಹೆಚ್ಚುತ್ತಿದೆ.

ಇಂಥಹ ಸಂದರ್ಭದಲ್ಲಿ ಕಾರ್ಮಿಕರು ಈಗಾಗಲೇ ಇರುವ ಕಾನೂನುಗಳನ್ನು ಬಳಸಿ ಕಾರ್ಮಿಕರ ಸಂಘಗಳ ಮುಖಾಂತರ ಅಲ್ಪ ಸ್ವಲ್ಪ ಪರಿಹಾರಗಳನ್ನು ನಿರಂತರ ಹೋರಾಟಗಳಿಂದ ಪಡೆಯುತ್ತಿದ್ದಾರೆ.

**

ಕರ್ನಾಟಕದಲ್ಲಿ 2 ಕೋಟಿ 78 ಲಕ್ಷಕ್ಕಿಂತಲೂ ಹೆಚ್ಚು ದುಡಿಯುವ ಜನರಿದ್ದಾರೆ. ರಾಜ್ಯದ ಆಂತರಿಕ ಉತ್ಪನ್ನ 2015–16ರಲ್ಲಿ 7. 80 ಲಕ್ಷ ಕೋಟಿಗೇರಿದೆ. ರಾಜ್ಯದಲ್ಲಿ 15,903 ನೋದಾಯಿತ ಕಾರ್ಖಾನೆಗಳು, 28,743 ಅತಿ ಸಣ್ಣ, ಸಣ್ಣ ಮತ್ತು ಮದ್ಯಮ ಕೈಗಾರಿಕೆಗಳಿವೆ. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಡಿ 4ಲಕ್ಷ 80 ಸಾವಿರ ಸಂಸ್ಥೆಗಳು, 1053 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿವೆ. ಲಕ್ಷಾಂತರ ಸ್ಕೀಂ ನೌಕರರು, 43.7% ಸ್ವಯಂ ಉದ್ಯೋಗಸ್ಥರಿದ್ದಾರೆ. ರಾಜ್ಯದಲ್ಲಿಯೂ ಕೂಡಾ ಇದುವರೆಗೂ ವಿವರಿಸಿದ ಪರಿಸ್ಥಿತಿಯೇ ಇದೆ. ಹಾಗೆಂದು ಕಾರ್ಮಿಕರೇನೂ ಕೈಕಟ್ಟಿ ಕುಳಿತಿಲ್ಲ. ಬಹುಶಃ ಜಗತ್ತಿನಲ್ಲೇ ತಮ್ಮ ಹಕ್ಕುಗಳಿಗಾಗಿ ದನಿಯೆತ್ತಿ ಹೋರಾಡುವ ವರ್ಗ ಕಾರ್ಮಿಕ ವರ್ಗ. ಭಾರತ, ನಮ್ಮ ಕರ್ನಾಟಕವೇನೂ ಇದಕ್ಕೆ ಹೊರತಾಗಿಲ್ಲ.

**

ಕರ್ನಾಟಕದ ಗಮನ ಮಾತ್ರವಲ್ಲ ದೇಶದ ಗಮನವನ್ನು ಸೆಳೆದ ಇತ್ತೀಚಿನ ದಿನಗಳಲ್ಲಿ ನಡೆದ ಕಾರ್ಮಿಕರ ಹೋರಾಟ ಅಂದರೆ ಅದು ಅಂಗನವಾಡಿ ತಾಯಂದಿರ ಹೋರಾಟ. ಸಾವಿರಾರು ಜನ ಅಂಗನವಾಡಿ ಕಾರ್ಯಕರ್ತರು 4–5 ದಿನಗಳ ಕಾಲ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಂತಿಮವಾಗಿ ತಮ್ಮ ಬಳಿ ಇರುವ ಅಸ್ತ್ರವಾದ ಪ್ರತಿಭಟನೆಯ ಅಸ್ತ್ರವನ್ನು ಬಳಸಿದರು. ಹಗಲು ಇರುಳೆನ್ನದೆ, ಬಿಸಿಲು ಧೂಳೆನ್ನದೆ, ರಾಜಧಾನಿಯ ರಸ್ತೆಯ ಮೇಲೆ ಕುಳಿತ ಅವರ ಗೋಳು ಕೇಳುವವರಿರಲಿಲ್ಲ. ಅಂದು ಅವರು ಮಾಡಿದ ತೀರ್ಮಾನ ನಾವು ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವವರೆಗು ಇಲ್ಲಿಂದ ಕದಲುವುದಿಲ್ಲ. ಅವರ ಆ ದೃಢ ವಿಶ್ವಾಸವೇ ಅಂತಿಮವಾಗಿ ರಾಜ್ಯದ ಜನಸಾಮಾನ್ಯರ ಗಮನವನ್ನು ಇತ್ತಕಡೆ ತಿರುಗಿಸಿ ಸರ್ಕಾರ ಬೇಡಿಕೆಗಳನ್ನು ಈಡೇರಿಸುವಂತಾಯಿತು. ಈ ಹಿಂದೆ ಇದೇ ಬೆಂಗಳೂರಿನಲ್ಲೇ ಗಾರ್ಮೆಂಟ್ಸ್ ಹೆಣ್ಣು ಮಕ್ಕಳ ಹೋರಾಟ ಭವಿಷ್ಯ ನಿಧಿ ಕಡಿತದ ವಿಚಾರವಾಗಿ ನಡೆದು ಕೇಂದ್ರ ಸರ್ಕಾರದ ತೀರ್ಮಾನವನ್ನೇ ವಾಪಸ್ ಪಡೆಯುವಂತೆ ಮಾಡಿತ್ತು, ಆದರೂ ಈ ಹೋರಾಟಕ್ಕೂ ಅಂಗನವಾಡಿ ನೌಕರರ ಸುಸಂಘಟಿತ ಹೋರಾಟಕ್ಕೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ನಾವು ಗಮನಿಸಬೇಕಿದೆ.

**

ಒಟ್ಟಾರೆಯಾಗಿ ಎಲ್ಲವನ್ನೂ ಸೃಷ್ಠಿ ಮಾಡುವ ಕಾಮಿಕ ವರ್ಗ ಇಂದು ತನ್ನ ಹಕ್ಕುಗಳಿಗಾಗಿ ಬೀದಿಗಿಳಿಯುವ ಸಂದರ್ಭ ಎದುರಾಗಿದೆ. ಎಲ್ಲಿಯವರೆಗೂ ಈ ನಾಗರೀಕ ಸಮಾಜ ಮತ್ತು ಜವಾಬ್ದಾರಿಯುತ ಸರ್ಕಾರಗಳು ದುಡಿಯುವ ವರ್ಗಕ್ಕೆ ಅವರ ಶ್ರಮದ ಪಾಲನ್ನು ನೀಡುವುದಿಲ್ಲವೋ ಅಲ್ಲಿಯವರೆಗೂ ಕಾರ್ಮಿಕ ಚಳುವಳಿಗಳು ತೀವ್ರಗೊಳ್ಳುತ್ತವೆ. ಆಮೂಲಕ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಮತ್ತು ಉಳಿಸಿಕೊಳ್ಳುವ ಕೆಲಸಕ್ಕೆ ಮುಂದಾಗುತ್ತದೆ.

ರಾಷ್ಟ್ರಕವಿ ಕುವೆಂಪುರವರ ಆಶಯದಂತೆ ಸರ್ವರಿಗೂ ಸಮ ಬಾಳು ಸರ್ವರಿಗೂ ಸಮ ಸಮಪಾಲು ಎಂಬ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ಶ್ರಮ ಸಂಸ್ಕೃತಿಯನ್ನು ಗೌರವಿಸುವ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲದಿದ್ದರ ಸಮಾಜದ ಕಟ್ಟ ಕಡೆಯ ಸ್ಥಾನದಲ್ಲಿ ದುಡಿವ ವರ್ಗ ನಿಲ್ಲಬೇಕಾದ ಪರಿಸ್ಥಿತಿ ಇಂದಿನ ಬಂಡವಾಳಶಾಹಿ ವರ್ಗದಲ್ಲಿ ಉದ್ಭವವಾಗಿದೆ. ಇಲ್ಲಿ ಲಾಭವೇ ಮುಖ್ಯ ಉದ್ದೇಶವಾಗಿರುವುದರಿಂದ ಶ್ರಮಜೀವಿಗಳ ರಕ್ತ ಬಸಿದಾದರೂ ಲಾಭ ಮಾಡುವುದೇ ಗುರಿಯಾಗಿದೆ. ಅದಕ್ಕಾಗಿಯೇ ಇಂತಹ ಶೋಷಣಾ ವ್ಯವಸ್ಥೆಯ ವಿರುದ್ಧ ಕಾರ್ಮಿಕ ವರ್ಗದಲ್ಲಿ ಎಲ್ಲ ಶ್ರಮಜೀವಿಗಳು ಸಂಘಟಿತರಾಗುತ್ತಾರೆ ಆ ಮೂಲಕ ಒಂದು ಹೊಸ ಬದಲಾವಣೆಗೆ ನಾಂದಿ ಹಾಡುತ್ತಾರೆ. ಇದನ್ನು ಇಲ್ಲಿಗೆ ಸರಿಯಾಗಿ ನೂರು ವರ್ಷಗಳ ಹಿಂದೆ ರಷ್ಯಾದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿ ನಡೆದು ಕಷ್ಟಪಟ್ಟು ಬೆವರು ಸುರಿಸಿ ದುಡಿಯುವ ಜನರೂ ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ಜಗತ್ತಿಗೆ ಮಾದರಿಯಾದಂತೆ ಮಾನವ ಪರವಾದ ಸತತ 74 ವರ್ಷಗಳ ಸಮಾಜವಾದಿ ವ್ಯವಸ್ಥೆಯನ್ನು ನಡೆಸಿದ್ದಾರೆ. ಇದರಿಂದ ಕಾರ್ಮಿಕ ವರ್ಗದ ಎಲ್ಲವನ್ನೂ ಸಾಧಿಸುವ ಸಾಮರ್ಥ್ಯ ಹೊಂದಿದೆ ಎನ್ನುವುದು ಅರ್ಥವಾಗುತ್ತದೆ.

**

ಈ ಎಲ್ಲ ಪರಂಪರೆ ಜನಸಾಮಾನ್ಯರನ್ನು ತಲುಪುವಂತಾಗಬೇಕು. ಸಮಾಜದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿರುವುದು ಕಾರ್ಮಿಕ ವರ್ಗ. ಈ ವರ್ಗದ ಹೋರಾಟ ಕಥನಗಳನ್ನು ಅರಿಯುವುದು ಎಂದರೆ ಸಮಾಜವನ್ನು ಅರಿಯುವುದು, ಬದುಕನ್ನು ಅರಿಯುವುದು ಎಂದೇ ಅರ್ಥ. ಈವರೆಗೆ ಅಲ್ಲಲ್ಲಿ ಚದುರಿದ ಚಿತ್ರಗಳಂತೆ ಹೇಳಲಾಗಿರುವ ಕಾರ್ಮಿಕ ಹೋರಾಟದ ಕಥನಗಳು ಸಶಕ್ತ ಸಾಹಿತ್ಯವಾಗಿ ಹೊರಹೊಮ್ಮಿದರೆ ಕಾರ್ಮಿಕರಿಗೂ ಮತ್ತಷ್ಟು ಸ್ಫೂರ್ತಿ ದೊರೆಯುತ್ತದೆ; ಮಾತ್ರವಲ್ಲ, ಜನಸಾಮಾನ್ಯರನ್ನೂ ಅದರೊಡನೆ ಬೆಸೆಯುವುದು ಸಾಧ್ಯವಾಗುತ್ತದೆ. ●

ಕನ್ನಡ ಸಾಹಿತ್ಯ ಸಮ್ಮೇಳನ–83..... ಪುಟ 9 ರಿಂದ

ಪ್ರಯತ್ನವಾಗಿ, ಎಲ್ಲಾ ಸಮುದಾಯಗಳ ಪಾಲುಗಾರಿಕೆಯನ್ನು ಪಡೆದುಕೊಳ್ಳುವ ಸಮಗ್ರ ಆಂದೋಲನವಾಗಬೇಕು.

ಬಂಡಾಯದ ಮರುಹುಟ್ಟು

ಬಂಡಾಯದ ಸಂಘಟನೆ ಈಗ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಅದರ ಆಶಯಗಳು ತರುಣಪೀಳಿಗೆಯಲ್ಲಿ ಮುಂದುವರಿದಿವೆ. ಬಂಡಾಯ ಸಂಘಟನೆ ಕ್ರಿಯಾಶೀಲವಾಗಿದ್ದ ದಿನಗಳಲ್ಲಿ ನಮ್ಮೆದುರಿಗಿದ್ದ ರಾಜ್ಯ–ದೇಶದ ಚೌಕಟ್ಟಿಗೆ ಒಳಪಟ್ಟಿದ್ದ ಸಮಸ್ಯೆಗಳು ಈಗ ಜಾಗತಿಕ ವ್ಯಾಪ್ತಿಗೆ ಒಳಪಟ್ಟಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಜೊತೆಗೆ ಕೇಸರೀಕರಣ (ಕೋಮುವಾದ) ಸೇರಿಕೊಂಡು ಪರಿಸ್ಥಿತಿ ಉಲ್ಬಣಗೊಂಡಿದೆ. ಇವುಗಳ ವಿರುದ್ಧ ಹೋರಾಡಲು ಹಾಗೂ ಹೋರಾಟಕ್ಕೆ ನಿರ್ದಿಷ್ಟ ದಿಕ್ಕು–ದೆಸೆ ನೀಡಲು ಬಂಡಾಯ ಸಂಘಟನೆ ಮರುಹುಟ್ಟು ಪಡೆಯುವುದು ಇಂದಿನ ಅನಿವಾರ್ಯ.

ಒಕ್ಕೂಟ ತತ್ವ

ಕನ್ನಡಮಾತೆಯನ್ನು ಭಾರತ ಜನನಿಯ 'ತನುಜಾತೆ' ಎಂದು ಕುವೆಂಪು ಕರೆದರು. ಅಂದರೆ'ಭಾರತ' ಎಂಬ ಅಮ್ಮನ ಮಕ್ಕಳು ನಮ್ಮ ರಾಜ್ಯಗಳು. ಆದರೆ ಈ ಅಮ್ಮ ತಾನು ಪಡೆದ ಮಕ್ಕಳಲ್ಲಿ ಕೆಲವರಿಗೆ ಮೊಲೆ ಹಾಲನ್ನು, ಉಳಿದವರಿಗೆ ಬಾಟಲಿ ಹಾಲನ್ನು ಕುಡಿಸುತ್ತಿದ್ದಾಳೆ. ಬಹುಪಾಲು ಹಾಲನ್ನು ಬಹುಶಃ ತಾನೇ ಕುಡಿಯುತ್ತಿರಬೇಕು.

ಕನ್ನಡ ಸಾಹಿತ್ಯ ಪರಿಷತ್ತು

ಅನೇಕ ವಿಷಯಗಳನ್ನು ಕವುಚಿಕೊಂಡು ಕನ್ನಡ ಜನಸ್ತೋಮದ ಸಮಕ್ಷಮದಲ್ಲಿ ಮುಕ್ತ ಸಂವಾದ ಏರ್ಪಡಿಸಬಲ್ಲ ಪರಿಷತ್ತಿನಂಥ ಸಂಸ್ಥೆ ಇಡೀ ಪ್ರಪಂಚದಲ್ಲಿ ಎಲ್ಲೂ ಇಲ್ಲ

*****

ಮುಖ್ಯಮಂತ್ರಿಯವರ ಭಾಷಣದ ತುಣುಕುಗಳು

ಕುವೆಂಪು ಅವರು ಹೇಳುತ್ತಾರೆ : "ಭರತಖಂಡವು ಒಂದು ಜನಾಂಗವೂ ಅಲ್ಲ, ಅನೇಕ ಜನಾಂಗಗಳೂ ಅಲ್ಲ; ಅದು ಅನೇಕ ಜನಾಂಗಗಳ ಒಂದು ಜನಾಂಗ. ಆದ್ದರಿಂದಲೇ ಭರತ ಮಾತೆಯನ್ನು ಎಷ್ಟರಮಟ್ಟಿಗೆ ಆರಾಧಿಸುತ್ತೇವೆಯೋ ಅಷ್ಟರ ಮಟ್ಟಿಗೆ ಕರ್ನಾಟಕ ಮಾತೆಯನ್ನು ಪೂಜಿಸಲು ನಮಗೆ ಸಾಧ್ಯವಾಗಿದೆ.

ತನ್ನ ಸಂಸಾರವನ್ನು ಪ್ರೀತಿಸಿದ ಮಾತ್ರದಿಂದಲೇ ಯಾರೂ ಸಮಾಜಕ್ಕೆ ವೈರಿಯಾಗಲಾರನು, ಸವಾಜವೆಂದರೇನು? ಅಂತಹ ಅಸಂಖ್ಯ ಸಮಾಜದ ಸುಖ, ಎಲ್ಲಾಪ್ರಾಂತಗಳ ಅಂಗ ಸೌಂದರ್ಯದಿಂದ ತಾನೇ ಭರತ ಮಾತೆ ಸರ್ವಾಂಗ ಸುಂದರಿಯಾಗುತ್ತಾಳೆ. ಆದುದರಿಂದ ಪ್ರಾಂತ–ಪ್ರಾಂತಗಳ ಹಿತಾಸಕ್ತಿ ರಕ್ಷಣೆಯ ಸ್ವಾತಂತ್ರ್ಯವು ಭರತ ಖಂಡದ ಪೂರ್ಣ ಸ್ವಾತಂತ್ರ್ಯದಷ್ಟೇ ಅವಶ್ಯವಾದುದು.


ಪ್ರತಿಯೊಂದು ಪ್ರಾಂತ್ಯಕ್ಕೂ ಅದರ ಬೆಳೆ, ಕೈಗಾರಿಕೆ, ಹಣಕಾಸಿನ ವ್ಯವಸ್ಥೆ, ಸಾಹಿತ್ಯ–ಸಂಸ್ಕೃತಿ ಮೊದಲಾದವುಗಳನ್ನು ಕಾಪಾಡಿಕೊಳ್ಳುವ ಹಕ್ಕು ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಆ ಹಕ್ಕಿಗೆ ಭಂಗ ಬಂದರೆ ಭರತಖಂಡವು ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸಿದರೂ ಆ ಸ್ವಾತಂತ್ರ್ಯವು ಭಗ್ನ ದರ್ಪಣವಾಗುತ್ತದೆ. ಹಾಗಾಗಬೇಕೆಂದು ಯಾವ ದೇಶಭಕ್ತರೂ ಹಾರೈಸುವುದಿಲ್ಲ. ಹಾಗಾಗದಂತೆ ನೋಡಿಕೊಳ್ಳುವುದು ನಮ್ಮ ಪರಮಪ್ರಾಣ ಕರ್ತವ್ಯ, ಇವು ಕುವೆಂಪು ಅವರು ಹೇಳಿರುವ ಮಾತುಗಳು.

ಇದು ಕರ್ನಾಟಕಕ್ಕೆ ಮಾತ್ರ ಹೇಳಿರುವ ಮಾತುಗಳೆಂದು ಭಾವಿಸಬೇಕಿಲ್ಲ. ಒಕ್ಕೂಟ ವ್ಯವಸ್ಥೆಯೊಳಗೆ ಎಲ್ಲಾ ರಾಜ್ಯಗಳ ಸ್ವತಂತ್ರ ಅಸ್ಮಿತೆಯ ಬಗ್ಗೆ ಹೇಳಿರುವ ಮಾತುಗಳು. ಈ ಬಗೆಯ ನಡೆ–ನುಡಿಗಳು ಕರ್ತವ್ಯದ ಪ್ರಮುಖ ಭಾಗಗಳು. ನಮ್ಮ ಸರ್ಕಾರ ಈ ಕರ್ತವ್ಯಭಾಗವನ್ನು ಸದಾ ಎಚ್ಚರಗತಿಯಲ್ಲಿ ಪರಿಪಾಲಿಸಿಕೊಂಡು ಬರುತ್ತಿದೆ. ●

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಬಿಜಾಪುರ	: ಡಿಸೆಂಬರ್ 2–3 ಬಿಜಾಪುರ.
ಬೆಂಗಳೂರು ಗ್ರಾಮಾಂತರ	: ಡಿಸೆಂಬರ್ 3, ನೆಲಮಂಗಲ.
ಬೆಳಗಾವಿ	: ಡಿಸೆಂಬರ್ 2–3
ಗುಲ್ಬರ್ಗಾ	: ಡಿಸೆಂಬರ್ 3–5, ಕಮಲಾಪುರ.
ಬಳ್ಳಾರಿ	: ಡಿಸೆಂಬರ್ 9–10, ಕಂಪ್ಲಿ.
ತುಮಕೂರು	: ಡಿಸೆಂಬರ್ 9–10 ತುಮಕೂರು.
ಯಾದಗಿರಿ	: ಡಿಸೆಂಬರ್ 8–9
ಮಂಡ್ಯ	: ಡಿಸೆಂಬರ್ 12–13, ಮಳವಳ್ಳಿ.
ಚಿಕ್ಕಬಳ್ಳಾಪುರ	: ಡಿಸೆಂಬರ್ 13–14, ಗುಡಿಬಂಡೆ.
ಬೆಂಗಳೂರು ದಕ್ಷಿಣ	: ಡಿಸೆಂಬರ್ 15–17, ಬೆಂಗಳೂರು.
ಮೈಸೂರು	: ಡಿಸೆಂಬರ್ 16–17, ಹುಣಸೂರು
ಹಾಸನ	: ಡಿಸೆಂಬರ್ 16–17, ಸಕಲೇಶಪುರ.
ದಕ್ಷಿಣ ಕನ್ನಡ	: ಡಿಸೆಂಬರ್ 17–18, ಮಂಗಳೂರು.
ಉತ್ತರ ಕನ್ನಡ	: ಡಿಸೆಂಬರ್ 17–18, ದಾಂಡೇಲಿ.
ಕೋಲಾರ	: ಡಿಸೆಂಬರ್ 22–23, ಕೋಲಾರ.
ರಾಯಚೂರು	: ಡಿಸೆಂಬರ್ 23–24, ರಾಯಚೂರು.
ದಾವಣಗೆರೆ	: ಡಿಸೆಂಬರ್ 24–25, ದಾವಣಗೆರೆ.
ಉಡುಪಿ	: ಡಿಸೆಂಬರ್ 24–26, ಬೈಂದೂರು.
ಧಾರವಾಡ	: ಡಿಸೆಂಬರ್ 25–26, ಗಜೇಂದ್ರಗಡ

ಸರಕಾರವೇ ಕ್ವತ್ರೋಚಿಯಾದಾಗ 2ಜಿ ಕಳಂಕಿತರಿಗೇ 'ಡೀಲ್'!!



ಅಚ್ಛೇ ದಿನ್ ಸರಕಾರ ಮಾಡಿಕೊಂಡಿರುವ ರಫೆಲ್ ಯುದ್ಧವಿಮಾನ ವ್ಯವಹಾರದ ಬಗ್ಗೆ ಈಗ ಎದ್ದಿರುವ ವಿವಾದಕ್ಕೆ ಹಣಕಾಸು ಮಂತ್ರಿಗಳು 'ತಕ್ಕ ಪ್ರತ್ಯುತ್ತರ' ನೀಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. "ಅದೊಂದು ಎರಡು ಸರಕಾರಗಳ ನಡುವಿನ ವ್ಯವಹಾರ. ಅದು ಕಾಂಗ್ರೆಸ್ ಸರಕಾರಗಳಲ್ಲಿ ನಡೆಯುತ್ತಿದ್ದ ವ್ಯವಹಾರಗಳಂತಲ್ಲ, ಆಗ ಪ್ರತಿಯೊಂದು ವ್ಯವಹಾರದಲ್ಲಿ ಮಧ್ಯವರ್ತಿಗಳಿದ್ದರು. ಈ ವ್ಯವಹಾರದಲ್ಲಿ ಯಾವುದೇ ಕ್ವತ್ರೋಚಿ ಇರಲಿಲ್ಲ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಬೊಫೋರ್ಸ್ ವ್ಯವಹಾರದಲ್ಲಿ ಇಟಾಲಿಯನ್ ವ್ಯಾಪಾರಿ ಕ್ವತ್ರೋಚಿ ಮಧ್ಯವರ್ತಿಯಾಗಿದ್ದ ಎನ್ನಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಸರಕಾರವೇ ಒಬ್ಬ ಖಾಸಗಿ ಉದ್ಯಮಿಗೆ ಮಧ್ಯವತಿಯಾಗಿ ವರ್ತಿಸುತ್ತಿರುವಾಗ ಬೇರೆ ಮಧ್ಯವರ್ತಿಗಳ ಅಗತ್ಯವಾದರೂ ಎಲ್ಲಿದೆ ಎಂದು ಹಣಕಾಸು ಮಂತ್ರಿಗಳ 'ಪ್ರತ್ಯುತ್ತರ'ದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪ್ರಶ್ನಿಸಿದ್ದಾರೆ. ಸರಕಾರ ಏನನ್ನೂ ಅಡಗಿಸಿಡುತ್ತಿಲ್ಲವಾದರೆ ರಫೆಲ್ಸ್ ಯುದ್ಧವಿಮಾನಕ್ಕೆ ಯುಪಿಎ ಸರಕಾರ ಒಪ್ಪಿಕೊಂಡಿದ್ದ ಬೆಲೆ ಏನು, ಮತ್ತು ಈಗ ಮೋದಿ ಸರಕಾರ ಒಪ್ಪಿಕೊಂಡಿರುವ ಬೆಲೆ ಏನು ಎಂಬ ಪ್ರಶ್ನೆಗೆ ಮತ್ತು ಪ್ಯಾರಿಸ್‌ನಲ್ಲಿ ಈ ಬಗ್ಗೆ ಪ್ರಧಾನಿಗಳು ಪ್ರಕಟಿಸುವ ಮೊದಲು ಭದ್ರತೆ ಕುರಿತ ಸಂಪುಟ ಸಮಿತಿ(ಸಿಸಿಎಸ್) ಮಂಜೂರಾತಿ ಪಡೆಯಲಾಗಿತ್ತೇ ಎಂಬ ಪ್ರಶ್ನೆಗೆ ಉತ್ತರ ನೀಡುತ್ತಿಲ್ಲ ಏಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಏಕಿಷ್ಟು ಗುಪ್ತತೆ? ಮಹಾ ಶಸ್ತ್ರಾಸ್ತ್ರ 'ಡೀಲ್'ಗಳಲ್ಲಿ ಹಗರಣ ನಡೆಯುವುದು ಇಂತಹ ಗುಪ್ತತೆ ಮತ್ತು ನಿಯಮವನ್ನು ಬದಿಗಿಟ್ಟ ನಿರ್ಧಾರಗಳಿಂದಾಗಿ ಎಂಬುದೀಗ ಸಾಮಾನ್ಯ ಅನುಭವ. ಈ ಹಿನ್ನೆಲೆಯಲ್ಲಿ ರಫೇಲ್ ವ್ಯವಹಾರ ಕುರಿತು ಎದ್ದಿರುವ ಪ್ರಶ್ನೆಗಳು ಬಹಳ ಮಹತ್ವ ಪಡೆಯುತ್ತವೆ.

ಯುಪಿಎ–2 ಸರಕಾರ ಫ್ರಾನ್ಸ್‌ನ ಡಸಾಲ್ಟ್ ಕಂಪನಿಯೊಂದಿಗೆ 126 ರಫೆಲ್ ಯುದ್ಧ ವಿಮಾನಗಳನ್ನು ಖರೀದಿಸುವ ಒಪ್ಪಂದವನ್ನು ಬೆಲೆಗಳ ಬಗ್ಗೆ ಸಾಕಷ್ಟು ಜಗ್ಗಾಟದ ನಂತರ 2012ರಲ್ಲಿ ಮಾಡಿಕೊಂಡಿತ್ತು . ಆದರೆ ಬಿಜೆಪಿ ಸರಕಾರ ಬಂದ ಮೇಲೆ ಅದನ್ನು ರದ್ದು ಮಾಡಿ 36 ಸಿದ್ಧ ವಿಮಾನಗಳನ್ನು ಖರೀದಿಸುವ ಎರಡೂ ದೇಶಗಳ ಸರಕಾರಗಳ ನಡುವಿನ ಒಪ್ಪಂದವಾಗಿ ತಮ್ಮ ಫ್ರಾನ್ಸ್ ಭೇಟಿಯ ವೇಳೆಗೆ ಬದಲಿಸಿದರು. ಇದು ಅವರ 'ದಿಟ್ಟ' ಕ್ರಮಗಳಿಗೆ ಇನ್ನೊಂದು ಉದಾಹರಣೆ ಎನ್ನಲಾಗಿತ್ತು. ಆಗ ಅವರೊಂದಿಗೆ ಆಗಿನ ರಕ್ಷಣಾ ಮಂತ್ರಿಗಳಿರಲಿಲ್ಲ, ಆದರೆ ರಿಲಯನ್ಸ್ ಏರೋಸ್ಟ್ರಕ್ಚರ್ ಎಂಬ ರಕ್ಷಣಾ ವಲಯದ ಖಾಸಗಿ ಉದ್ದಿಮೆಯ ಮಾಲಕ ಅನಿಲ್ ಅಂಬಾನಿ ಇದ್ದರು ಎಂದು ಹೇಳಲಾಗಿದೆ. ಯುಪಿಎ–2 ಒಪ್ಪಂದದಲ್ಲಿ ತಕ್ಷಣಕ್ಕೆ ಕೆಲವು ಸಿದ್ಧವಿಮಾನಗಳನ್ನು ಖರೀದಿಸಿದ ನಂತರ ಅವನ್ನು ಇಲ್ಲಿಯೇ ತಯಾರಿಸುವ ಅಂಶವಿತ್ತು. ಇದರಲ್ಲಿ ಸಾರ್ವಜನಿಕ ವಲಯದ ಹೆಚ್‌ಎಎಲ್ ಪಾತ್ರ ಇತ್ತು. ಈಗ ಹೆಚ್‌ಎಎಲ್ ಪಾತ್ರದ ಪ್ರಸ್ತಾಪವೇ ಇಲ್ಲ, ಏಕೆಂದರೆ ಈ 'ದಿಟ್ಟ' ಒಪ್ಪಂದದಲ್ಲಿ ತಂತ್ರಜ್ಞಾನ ವರ್ಗಾವಣೆಯ ಪ್ರಶ್ನೆ ಇಲ್ಲ ಎಂದು ಈಗಷ್ಟೆ ರಕ್ಷಣಾ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆಗಿನ ರಕ್ಷಣಾ ಮಂತ್ರಿಗಳು ಅದನ್ನು ಹೇಳಿರಲಿಲ್ಲ. ಇಲ್ಲಿ 'ಮೇಕ್ ಇನ್ ಇಂಡಿಯಾ ಎಲ್ಲಿ ಹೋಯಿತು ಎಂಬುದು ಬೇರೆ ಪ್ರಶ್ನೆ.

ಈ 'ದಿಟ್ಟ' ನಿರ್ಧಾರದಿಂದಾಗಿ ಈ ವಿಮಾನ ನಮಗೆ ಅಗ್ಗದಲ್ಲಿ ಲಭ್ಯವಾಗುತ್ತಿದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಇದಕ್ಕೆ ಬೆಲೆಗಳ ಹೋಲಿಕೆಯನ್ನು ತಿಳಿಸಿಲ್ಲ. ವಾಸ್ತವವಾಗಿ ದೇಶ ಈಗ ಈ ಯುದ್ಧವಿಮಾನಗಳಿಗೆ ಹೆಚ್ಚಿನ ಬೆಲೆ ತೆರುತ್ತಿದೆ ಎಂದು ಹೇಳಲಾಗುತ್ತಿದೆ. 2012ರ ಒಪ್ಪಂದದಲ್ಲಿ ತಲಾ ವಿಮಾನಕ್ಕೆ 81 ಮಿಲಿಯ ಡಾಲರ್‌ಗಳು ಎನ್ನಲಾಗಿತ್ತು, 2015 ರ ದಿಟ್ಟ ಡೀಲ್‌ನಲ್ಲಿ ಅದು 243 ಮಿಲಿಯ ಡಾಲರ್ ಆಗಿದೆಯಂತೆ. ಹಣದುಬ್ಬರವನ್ನು ಪರಿಗಣಿಸಿದರೂ ಇದು ಇಳಿಕೆಯೇನಲ್ಲ. (ನ್ಯೂಸ್‌ಕ್ಲಿಕ್, ನವಂಬರ್ 30)

ರಕ್ಷಣಾ ಖರೀದಿಯ ನಿಯಮಗಳ ಪ್ರಕಾರ ಇಂತಹ ಖರೀದಿಗಳಿಗೆ ಭದ್ರತೆ ಕುರಿತ ಸಂಪುಟ ಸಮಿತಿ(ಸಿಸಿಎಸ್) ಮಂಜೂರಾತಿ ಬೇಕು. ಎಪ್ರಿಲ್ 2015 ರಲ್ಲಿ ಪ್ಯಾರಿಸ್‌ನಲ್ಲಿ ಇಂತಹ ನಿರ್ಧಾರ ಪ್ರಕಟಿಸುವ ಮೊದಲು ಸಿಸಿಎಸ್ ಸಭೆ ನಡೆದಿತ್ತೆ ಎಂದು ಈಗಿನ ರಕ್ಷಣಾ ಮಂತ್ರಿಗಳು ಸ್ಪಷ್ಟಪಡಿಸಿಲ್ಲ. ಅವರು ಕೊಟ್ಟಿರುವ ಉತ್ತರಗಳ ಪ್ರಕಾರ ಸಿಸಿಎಸ್ ಮಂಜೂರಾತಿಯ ನಂತರವೇ ಸಪ್ಟಂಬರ್ 2016ರಲ್ಲಿ ಈ ಖರೀದಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಅಂದರೆ ಎಪ್ರಿಲ್ 2015ರಲ್ಲಿ ಪ್ರಧಾನಿಗಳ ಪ್ರಕಟಣೆಯ ವೇಳೆಗೆ ಆಗಿರಲಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕೇ? ಆಗಿನ ರಕ್ಷಣಾ ಮಂತ್ರಿಗಳೂ ಆಗ ಇದಕ್ಕೆ ನೇರ ಉತ್ತರ ನೀಡಿರಲಿಲ್ಲ ಎಂಬುದನ್ನು ಕೂಡ ನೆನಪಿಸಿಕೊಳ್ಳಬಹುದು.

ಅದೇನೇ ಇರಲಿ, ಇಲ್ಲೀಗ ಅನಿಲ್ ಅಂಬಾನಿ ಹೆಸರು ಬಂದಿರುವುದು ಹೇಗೆ? ಅದು ಹೀಗೆ(ವಿವರಗಳಿಗೆ ನ್ಯೂಸ್‌ಕ್ಲಿಕ್, ನವಂಬರ್30 ನೋಡಿ)– ಯಾವುದೇ ರಕ್ಷಣಾ ವ್ಯವಹಾರದಲ್ಲಿ ಅಂತಿಮ ಬೆಲೆಯ 50%ವನ್ನು ಭಾರತದಲ್ಲೇ ಖರ್ಚು ಮಾಡಬೇಕೆಂದು ನಿಯಮವಿದೆ– ಇದನ್ನು ಆಫ್‌ಸೆಟ್ ಕ್ಲಾಸ್ ಎನ್ನುತ್ತಾರೆ. ಇದು 30,000 ಕೋಟಿ ರೂ. ಆಗುತ್ತದೆ, ಇದರಲ್ಲಿ 70% ದಷ್ಟು, ಅಂದರೆ 21,000 ಕೋಟಿ ರೂ. ರಿಲಯಂಸ್ ಏರೋಸ್ಟ್ರಕ್ಚರ್ ಪಾಲಾಗುತ್ತದೆ. ಹೇಗೆಂದರೆ ಡಸಾಲ್ಟ್ ಕಂಪನಿ ಹಿಂದೆ ಯುಪಿಎ ಒಪ್ಪಂದದಂತೆ ತಂತ್ರಜ್ಞಾನ ವರ್ಗಾವಣೆಯಂತೂ ಮಾಡುತ್ತಿಲ್ಲ, ಈ ಆಫ್‌ಸೆಟ್ ಕ್ಲಾಸ್‌ಗೂ ಹೆಚ್‌ಎಎಲ್ ನೊಂದಿಗೆ ವ್ಯವಹರಿಸುವುದಿಲ್ಲ. ಅದು ಅನಿಲ್ ಅಂಬಾನಿಯವರ ರಿಲಯಂಸ್ ನೊಂದಿಗೆ ಸೇರಿ ಮಾಡಿಕೊಂಡಿರುವ ರಿಲಯಂಸ್ ಏರೋಸ್ಟ್ರಕ್ಚರ್ ನೊಂದಿಗಷ್ಟೇ ವ್ಯವಹರಿಸುತ್ತದೆ.

ಇದು ಅವರೆಡು ಕಂಪನಿಗಳ ವ್ಯವಹಾರ ಇದರಲ್ಲಿ ಸರಕಾರದ ಪಾತ್ರ ಇಲ್ಲ ಎನ್ನುತ್ತದೆ ಮೋದಿ ಸರಕಾರ. ಆದರೆ ಈ ಆಫ್‌ಸೆಟ್ ಅನ್ನುವುದು ಅವರೇ ಹೇಳುವಂತೆ ಎರಡು ಸರಕಾರಗಳ ನಡುವಿನ ಒಪ್ಪಂದದ ಭಾಗ– ಅದು ಸರಕಾರದ ಪಾತ್ರವಿಲ್ಲದೆ ಯಾರೋ ಒಬ್ಬರ ಪಾಲಾಗುವುದು ಹೇಗೆ? ಅದೂ ವೈಮಾನಿಕ ಕ್ಷೇತ್ರದಲ್ಲಿ ಹೆಚ್‌ಎಎಲ್ ಗೆ ಹೋಲಿಸಿದರೆ ಏನೇನೂ ಅನುಭವವಿಲ್ಲದ ಒಂದು ಕಂಪನಿಯ ಪಾಲಾಗುವುದು ಹೇಗೆ ಎಂಬುದೇ ಇಲ್ಲಿರುವ ಮುಖ್ಯಪ್ರಶ್ನೆ.

ಈ ಕ್ಷೇತ್ರದಲ್ಲಿ ಏನೇನೂ ಅನುಭವವಿಲ್ಲ ಮಾತ್ರವಲ್ಲ, ಈ ಉದ್ದಿಮೆಗುಂಪಿನ ಇದುವರೆಗಿನ ದಾಖಲೆ ಏನು? ಈ ವ್ಯಕ್ತಿಯ ಉದ್ದಿಮೆ ಗುಂಪಿನ(ಎಡಿಎಜಿ) ಮೂವರು ಉನ್ನತ ಅಧಿಕಾರಿಗಳು ಮತ್ತು ಸ್ವತಃ ಈತನ ಒಡೆತನದ ಟೆಲಿಕಾಂ ಕಂಪನಿ 2ಜಿ ಹಗರಣದಲ್ಲಿ ದೇಶಕ್ಕೆ ವಂಚನೆ ಮಾಡಿದ್ದು ದಾಖಲಾಗಿರುವ ಸತ್ಯ. ಈತನ ಟೆಲಿಕಾಂ ಕಂಪನಿ ಈಗ ಮುಚ್ಚಿ ಹೋಗುತ್ತಿದೆ, ದಿವಾಳಿಯ ಕಾನೂನು ಪ್ರಕ್ರಿಯೆ ನಡೆಯುತ್ತಿದೆ, ಈತನ ಬ್ಯಾಂಕ್ ಸಾಲಗಳ ಮೇಲೆ ಮರುಪಾವತಿ ಮಾಡಲಾಗದ ಸುಸ್ತಿದಾರನೆಂದು ಆಗಲೇ ಕೆಂಪುಗೆರೆ ಬಿದ್ದಿದೆಯಂತೆ.

2ಜಿ ಮತ್ತು 3ಜಿ ಹಗರಣಗಳನ್ನೇ ಆಸ್ತಿಯಾಗಿ ಮಾಡಿಕೊಂಡು 2014ರಲ್ಲಿ ಅಧಿಕಾರ ಪಡೆದವರು ಈಗ ಅದರ ಕಳಂಕಿತರಿಗೇ ಮಣೆ ಹಾಕುತ್ತಿರುವುದೇಕೆ? ಬಾಯಿತೆರೆದರೆ ತಾವು ಮಾತ್ರ ಅಪ್ಪಟ ರಾಷ್ಟ್ರವಾದಿಗಳು, ಉಳಿದವರೆಲ್ಲ ರಾಷ್ಟ್ರ–ವಿರೋಧಿಗಳು ಎನ್ನುವವರು ಕ್ವತ್ರೋಚಿಗಳಿಲ್ಲದೇ ರಾಷ್ಟ್ರದ ಹೆಮ್ಮೆಗಳಲ್ಲಿ ಒಂದಾದ ಎಚ್‌ಎಎಲ್‌ನ್ನು ಬುಡಮೇಲು ಮಾಡುವ 'ಡೀಲ್' ಮಾಡಿರುವುದೇಕೆ–ಇದೊಂದು ಮುಖ್ಯ ಪ್ರಶ್ನೆ ಎನ್ನುವುದು ತಪ್ಪೇ?

ನ್ಯಾಯಮೂರ್ತಿ ಲೊಯ ಸಾವು–ತನಿಖೆಗೆ ಇನ್ನಷ್ಟು ಸಂದೇಹಗಳು

ಗುಜರಾತಿನಲ್ಲಿ 2005ರಲ್ಲಿ ಸೋಹ್ರಬುದ್ದಿನ್ ಶೇಖ್ ಎನ್‌ಕೌಂಟರ್ ಹತ್ಯೆ ಕುರಿತ ವಿಚಾರಣೆ ಮಾಡುತ್ತಿದ್ದ ಸಿಬಿಐ ನ್ಯಾಯಾಲಯದ ನ್ಯಾಯಮೂರ್ತಿ ಲೊಯ ಸಾವು ಕುರಿತು ಉಂಟಾಗಿರುವ ಸಂದೇಹಕ್ಕೆ ವಿವಾದದ ರೂ ಪ ಕೊಡುವ ಪ್ರಯತ್ನ ನಡೆಯುತ್ತಿರುವಂತೆ ಕಾಣುತ್ತದೆ. ಕೊಲೆ, ಲಂಚ, ಕಾನೂನಿನ ಬುಡಮೇಲು, ಮತ್ತು ನಮ್ಮ ಸಂಸದೀಯ ಪ್ರಜಾಪ್ರಭುತ್ವ ಸಂಸ್ಥೆಗಳ ದುರುಪಯೋಗ ಅತ್ಯುನ್ನತ ಸ್ಥಾನಗಳಲ್ಲಿ ನಡೆಯುತ್ತಿದೆಯೇ ಎಂಬ ಕಳವಳಕಾರಿ ಪ್ರಶ್ನೆಗಳನ್ನು ಎತ್ತಿವೆ. ಇದನ್ನು ಗಂಭೀರವಾಗಿ ತನಿಖೆಮಾಡಬೇಕಾಗಿದೆ .ಆದ್ದರಿಂದ ಇಡೀ ವ್ಯವಹಾರದ ಉನ್ನತ ಮಟ್ಟದ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿತ್ತು ಎಂಬುದನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ನಂತರ ತನಿಖೆ ಅಗತ್ಯವಾಗಿದೆ ಎಂಬ ಅಭಿಪ್ರಾಯಗಳು ನ್ಯಾಯಾಧೀಶರುಗಳಿಂದಲೂ ಬರುತ್ತಿವೆ.

ದಿಲ್ಲಿ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಎ.ಪಿ.ಷಹಾ ಅವರು ಈ ಕುರಿತು ಮಾತಾಡುತ್ತ

"ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅಥವ ಭಾರತದ ಮುಖ್ಯ ನ್ಯಾಯಾಧೀಶರೇ ಈ ಕುರಿತ ಮಾಹಿತಿಗಳನ್ನು ನೋಡಬೇಕು ಮತ್ತು ಒಂದು ತನಿಖೆ ನಡೆಸುವುದು ಅಗತ್ಯವೇ ಎಂದು ನಿರ್ಧರಿಸಬೇಕು. ಏಕೆಂದರೆ ಈ ಆಪಾದನೆಗಳ ತನಿಖೆಯಾಗದಿದ್ದರೆ ಅದು ನ್ಯಾಯಾಂದ ಮೇಲೆ ಒಂದು ಗಂಭೀರ ಕಳಂಕ ತರುತ್ತದೆ" ಎಂದು ಹೇಳಿದ ಅವರು, ನ್ಯಾಯಮೂರ್ತಿ ಲೊಯ ಒಬ್ಬ ಪ್ರಾಮಾಣಿಕ ಮತ್ತು ನೇರನಡೆಯ ನ್ಯಾಯಾಧೀಶರಾಗಿದ್ದರು, ಅವರ ಕುಟುಂಬದವರು ಮಾಡಿರುವ ಆಪಾದನೆಗಳ ತನಿಖೆ ಮಾಡದಿದ್ದರೆ ಅದು ನ್ಯಾಯಾಂಗಕ್ಕೆ, ವಿಶೇಷವಾಗಿ ಕೆಳಗಣ ಹಂತಗಳಲ್ಲಿ ಇರುವವರಿಗೆ ಒಂದು ಅತ್ಯಂತ ತಪ್ಪು ಸಂದೇಶವನ್ನು ಕಳಿಸುತ್ತದೆ, ಜನಗಳಲ್ಲಿ ನ್ಯಾಯಾಂಗದ ಸಮಗ್ರತೆಯ ಬಗ್ಗೆ ವಿಶ್ವಾಸವನ್ನು ಕಾಯ್ದುಕೊಳ್ಳುವುದು ಅಗತ್ಯವಾಗಿದೆ ಎಂದಿದ್ದಾರೆ.

ಇನ್ನೊಬ್ಬ ನ್ಯಾಯಾಧೀಶರು, ಮುಂಬೈ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ, ನ್ಯಾಯಮೂರ್ತಿ ಬಿ.ಹೆಚ್. ಮರ್ಲಪಲ್ಲೆ ಅವರು ಕೂಡ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಈಗ ಮುಂಬೈ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿರುವ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ರವರಿಗೆ ಈ ಕುರಿತು ಬರೆದ ಪತ್ರದಲ್ಲಿ, ಭಾರತದ ಸಂವಿಧಾನದ 235ನೇ ವಿಧಿಯ ವ್ಯಾಖ್ಯಾನ ಮಾಡುತ್ತ ಸರ್ವೋಚ್ಚ ನ್ಯಾಯಾಲಯ ಹೈಕೋರ್ಟ್ ಅದರ ಕೈಕೆಳಗೆ ಇರುವ ನ್ಯಾಯಾಂಗದ ರಕ್ಷಕ ಎಂದು ಮತ್ತೆ–ಮತ್ತೆ ಹೇಳಿದೆ, ಮುಖ್ಯ ನ್ಯಾಯಾಧೀಶರು ಈ ವಿಷಯದ ಬಗ್ಗೆ ಒಂದು ವಿಶೇಷ ತನಿಖಾ ತಂಡದಿಂದ ತನಿಖೆಗೆ ಆದೇಶ ನೀಡಿ ಖಂಡಿತವಾಗಿಯೂ ಕೆಳಗಣ ಹಂತದ ನ್ಯಾಯಾಧೀಶರುಗಳು ತಾವು ಅನಾಥರಲ್ಲ ಎಂದು ನಂಬುವಂತೆ ಮಾಡಬಹುದು ಎಂದು ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ.

ಅಖಿಲ ಭಾರತ ವಕೀಲರ ಸಂಘವೂ ಈ ಕುರಿತು ನ್ಯಾಯಾಂಗ ತನಿಖೆ ಅಗತ್ಯ ಎಂದಿದೆ.


ಈ ನಡುವೆ ಇಂಡಿಯನ್ ಎಕ್ಸ್‌ಪ್ರೆಸ್ ಪ್ರಕಟಿಸಿದ ಒಂದು ಸುದ್ದಿ ನ್ಯಾಯಮೂರ್ತಿ ಲೊಯ ಅವರ ಸಾವಿನ ಬಗ್ಗೆ ಸಂದೇಹ ಪಡುವಂತದ್ದೇನಿಲ್ಲ ಎಂದು ಅವರ ಇಬ್ಬರು ನ್ಯಾಯಾಧೀಶ ಸಹಯೋಗಿಗಳು ಹೇಳಿರುವುದಾಗಿ ತಿಳಿಸಿದೆ. ಅವರ ಇಸಿಜಿ ಕೂಡ ಮಾಡಲಾಗಿತ್ತು ಎಂದು ಅದರ ಚಿತ್ರವನ್ನೂ ಅದು ಪ್ರಕಟಿಸಿತ್ತು. ಆದರೆ ನ್ಯಾ. ಲೊಯ ಅವರ ಸಾವು ಡಿಸೆಂಬರ್ 1ರ ಮುಂಜಾನೆ ಸಂಭವಿಸಿದ್ದರೆ, ಇಸಿಜಿ ತೆಗೆದ ದಿನಾಂಕ ನವಂಬರ್30ರ ಮುಂಜಾನೆ ಎಂದಿದೆ. ಆ ವೇಳೆಗೆ ಅವರು ಚೆನ್ನಾಗಿಯೇ ಇದ್ದರು. ಇಸಿಜಿಯ ದಿನಾಂಕ ತಾಂತ್ರಿಕ ತೊಂದರೆಯಿಂದಾದ ತಪ್ಪು ಎಂದು ಆಸ್ಪತ್ರೆಯವರು ಹೇಳಿದ್ದಾರಂತೆ. ಆದರೆ ಈ ಇಬ್ಬರು ನ್ಯಾಯಾಧೀಶ ಸಹಯೋಗಿಗಳೆನ್ನುವವರನ್ನು ಪತ್ರಿಕೆಯವರಿಗೆ ಎಲ್ಲಿಂದ ಪತ್ತೆಯಾದರು, ಪತ್ರಿಕೆಯವರು ಹುಡುಕಿಕೊಂಡು ಹೋಗಿ ಭೇಟಿಯಾದರೇ, ಅಥವ ಅವರೇ ಬಂದು ಪತ್ರಿಕೆಗೆ ತಿಳಿಸಿದರೇ ಗೊತ್ತಾಗಿಲ್ಲ. ಅಂದರೆ ಸಂದೇಹಗಳೇನೂ ಇಲ್ಲ ಎಂದಿರುವುದೂ ಸಂದೇಹವನ್ನು ಉಂಟು ಮಾಡಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಅಮೆರಿಕಾದ ಅಧ್ಯಕ್ಷರ ಸುಪುತ್ರಿ, ಈ ವಾರ ವ್ಯಾಪಾರೋದ್ದಿಮೆಗಳಲ್ಲಿರುವ ಮಹಿಳೆಯರನ್ನು ಕುರಿತ ಜಾಗತಿಕ ಉದ್ದಿಮೆಶೀಲತೆಯ ಶೃಂಗ ಸಭೆಯಲ್ಲಿ ಭಾಗವಹಿಸಲು ಹೈದರಾಬಾದಿಗೆ ಬಂದಿದ್ದರು. ಅವರು ಅಧ್ಯಕ್ಷರ ಸಂಬಳವಿಲ್ಲದ ರಾಜಕೀಯ ಸಲಹೆಗಾರರಷ್ಟೇ ಆಗಿದ್ದರೂ ಅವರ ಸ್ವಾಗತಕ್ಕೆ ಹೈದರಾಬಾದ್‌ನ್ನು ಶೃಂಗರಿಸಲು 12 ಕೋಟಿ ರೂ. ಖರ್ಚು ಮಾಡಲಾಯಿತಂತೆ . ಅದಕ್ಕಿಂತಲೂ ಹೆಚ್ಚಾಗಿ, ಗುಜರಾತಿನಲ್ಲಿ ಬಿಡುವಿಲ್ಲದ ಚುನಾವಣಾ ಪ್ರಚಾರದಲ್ಲಿ ವಂಶಾಡಳಿತದ ವಿರುದ್ಧ ಕೆಂಡ ಕಾರುತ್ತಿರುವ, ನಾನು ಚಹಾ ಮಾರಿದ್ದೇನೆ, ದೇಶವನ್ನಲ್ಲ ಎನ್ನುತ್ತ ಚಪ್ಪಾಳೆ ಗಿಟ್ಟಿಸುವಲ್ಲಿ ಮಗ್ನರಾಗಿದ್ದ ಈ ದೊಡ್ಡ ದೇಶದ ಪ್ರಧಾನಿಗಳೂ ನಡುವೆ ಹೇಗೋ ಬಿಡುವು ಮಾಡಿಕೊಂಡು ಬಂದಿದ್ದರು. ಅಧ್ಯಕ್ಷರ ಸುಪುತ್ರಿ, ಚಹ ಮಾರುವವನಿಂದ ಪ್ರಧಾನಿಯಾದ ನೀವು ಬದಲಾವಣೆ ಸಾಧ್ಯ ಎಂದು ಸಾಬೀತು ಮಾಡಿದ್ದೀರಿ ಎಂದು ಹೊಗಳಿದರಂತೆ. ಇದೊಂದು 'ವಂಡರ್‌ಫುಲ್' ಸಭೆ ಎಂದು ಪ್ರಧಾನಿಗಳು ಟ್ವೀಟ್ ಮಾಡಿದ್ದಾರಂತೆ. ಆದರೆ ಇವರು ಪ್ರಧಾನಿಗಳಾಗಿ ಮೂರು ವರ್ಷಗಳಾದರೂ ಇನ್ನೂ ಏನೂ ಸಾಧಿಸಿಯೇ ಇಲ್ವೇ, ಇನ್ನೂ ಚಹಾ ಮಾರಿದ್ದೇ ಇವರ ಐಡೆಂಟಿಟಿಯಾಗಿರಬೇಕೇ ಎಂದೊಬ್ಬರು ಟ್ವೀಟ್ ಮಾಡಿದ್ದಾರಂತೆ.

ಮನದ ಮಾತು(ಗಳು) ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು



ಅಸಮಾನತೆಯ ಬೆಳವಣಿಗೆಯೇ 'ಗುಜರಾತ್ ಮಾದರಿ'



ಗುಜರಾತಿನಲ್ಲಿ ಈಗ ಚುನಾವಣೆಗಳ ಸಂದರ್ಭದಲ್ಲಿ ನಡೆಯುತ್ತಿರುವ ರಾಜಕೀಯ ಚರ್ಚೆಗಳಲ್ಲಿ ಅರ್ಥವ್ಯವಸ್ಥೆಯ ಮೇಲಿನ ಟೀಕೆ ಟಿಪ್ಪಣಿಗಳೇ ಪ್ರಧಾನವಾಗಿವೆ. ಹಾಗಾಗಿ, ಗುಜರಾತನ್ನು ಕಾಡುತ್ತಿದ್ದ ಆರ್ಥಿಕ ಹುಳುಕುಗಳು ಈಗ ಬಯಲಾಗುತ್ತಿವೆ. ಪಾಟಿದಾರರು, ದಲಿತರು ಮತ್ತು ಸಣ್ಣ ಪುಟ್ಟ ವ್ಯಾಪಾರಿಗಳು ತಮ್ಮ ಜೀವನಾಧಾರವೇ ಕುಸಿಯುತ್ತಿದೆ ಎಂದು ಪ್ರತಿಭಟಿಸುತ್ತಿದ್ದಾರೆ. 'ಗುಜರಾತ್ ಮಾದರಿ' ವಿಫಲವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ

ಎನ್ನುತ್ತಾರೆ ಅರ್ಥಶಾಸ್ತ್ರಜ್ಞೆ **ಪ್ರೊ. ಜಯತಿ ಘೋಷ್**

ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ತಂಡವು ಸಾರ್ವಜನಿಕ ಸಂಪರ್ಕಗಳು ಮತ್ತು ಮಾಧ್ಯಮಗಳ ನಿರ್ವಹಣೆಯ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ ಎಂಬುದು ಈಗ ಬಹಳ ಮಂದಿಗೆ ಸ್ಪಷ್ಟವಾಗಿದೆ. ಹಾಗಾಗಿಯೇ, 2014 ರ ಸಾರ್ವತ್ರಿಕ ಚುನಾವಣೆಯಲ್ಲಿ 'ಗುಜರಾತ್ ಮಾದರಿ' ಜನರ ನಡುವೆ ಮಾತುಕತೆಯ ಒಂದು ಪ್ರಮುಖ ವಿಷಯವಾಗಿತ್ತು. ಬೆಳವಣಿಗೆ ಮತ್ತು ಅಭಿವೃದ್ಧಿಯ ವಿಷಯದಲ್ಲಿ ಈ ಮಾದರಿಯು ಭಾರಿ ಯಶಸ್ಸನ್ನು ಗಳಿಸಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಬ್ಬಲಾಗಿತ್ತು. ಆದರೆ, ವಾಸ್ತವವಾಗಿ, ಗುಜರಾತ್ ಹೆಚ್ಚೆಂದರೆ ಶ್ರೇಯಾಂಕ ಪಟ್ಟಿಯ ಮಧ್ಯದಲ್ಲಿದೆ. ಮಾನವ ಅಭಿವೃದ್ಧಿಯ ಸೂಚ್ಯಂಕದಲ್ಲಿ, ಅದು ಅನೇಕ ರಾಜ್ಯಗಳಿಗಿಂತ ತುಂಬಾ ಹಿಂದಿದೆ.

'ಗುಜರಾತ್ ಮಾದರಿಯ' ಮಿಥ್ಯೆಯನ್ನು ಇಂದಿರಾ ಹಿರ್ವೇ, ಅಮಿತಾ ಷಾ ಮತ್ತು ಘನಶ್ಯಾಮ್ ಷಾ ಅವರುಗಳು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ 2014 ರಲ್ಲಿ ಪ್ರಕಟಿಸಿದ ಒಂದು ಪ್ರಬಂಧ ಲೇಖನದಲ್ಲಿ ಬಯಲು ಮಾಡಿದ್ದರು. ಬಹಳಷ್ಟು ಪ್ರಚಾರ ಮಾಡುತ್ತಿರುವ ಗುಜರಾತಿನ ಉನ್ನತ ಬೆಳವಣಿಗೆ ಈ ಹಿಂದೆಯೇ ಆಗಿದ್ದ ಬೆಳವಣಿಗೆಯ ಮುಂದುವರಿಕೆಯೇ ಆಗಿದೆ ಎಂಬುದನ್ನು ಅವರು ತೋರಿಸಿದ್ದರು. ಭೂಮಿ, ವಿದ್ಯುತ್ ಮತ್ತು ಇತರ ಮೂಲಸೌಕರ್ಯಗಳು ನರೇಂದ್ರ ಮೋದಿ ಮುಖ್ಯಮಂತ್ರಿ ಆಗುವ ಮುನ್ನವೇ ಸುಲಭವಾಗಿ ದೊರೆಯುತ್ತಿದ್ದುದೇ ಅದಕ್ಕೆ ಮುಖ್ಯ ಕಾರಣವಾಗಿತ್ತು. ಮೋದಿ ಅವರ ಅಧಿಕಾರಾವಧಿಯಲ್ಲಿ ಆಗಿದ್ದ ಉನ್ನತ ಆರ್ಥಿಕ ಬೆಳವಣಿಗೆಯಲ್ಲಿ ದೊಡ್ಡ ಕಾರ್ಪೊರೇಟ್‌ಗಳ ಪಾಲು ಬಹಳವಿತ್ತು. ಮೋದಿ ಸರಕಾರವು ನೀಡಿದ ಬೃಹತ್ ಸಬ್ಸಿಡಿಗಳು ಮತ್ತು ವಿವಿಧ ರೀತಿಯ ಪ್ರೋತ್ಸಾಹಕಗಳಿಂದಾಗಿಯೇ ಈ ದೊಡ್ಡ ಕಂಪೆನಿಗಳು ಗುಜರಾತಿನಲ್ಲಿ ಹೂಡಿಕೆ ಮಾಡಿದವು. ಆದಾಗ್ಯೂ, ಈ ರೀತಿಯ ಬೆಳವಣಿಗೆಯಿಂದ ಜನರಿಗೆ ಪ್ರಯೋಜನವಾಗಲಿಲ್ಲ. ಅಲ್ಲದೆ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವು ವಿಸ್ತಾರವಾಯಿತು.

ಪ್ರಧಾನ ಮಂತ್ರಿ ಮೋದಿ 'ಚಮಚಾ ಬಂಡವಾಳಶಾಹಿ' ಬಗ್ಗೆ ದೊಡ್ಡ ದೊಡ್ಡ ಮಾತಾಡುತ್ತಾರೆ. ಆದರೆ ಗುಜರಾತಿನಲ್ಲಿ ಅದು ಅವರ ಮೂಗಿನ ಅಡಿಯಲ್ಲಿಯೇ ಬೆಳೆಯಿತು ಎಂಬುದು ಒಂದು ಅಣಕವೇ. ಕೈಗಾರಿಕೀಕರಣವನ್ನು ಉತ್ತೇಜಿಸುವ ಹೆಸರಿನಲ್ಲಿ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ನೀಡಿದ ಹಲವಾರು ಉತ್ತೇಜನಗಳಿಂದಾಗಿ ಗುಜರಾತಿನಲ್ಲಿ 'ಚಮಚಾ ಬಂಡವಾಳಶಾಹಿ' ಪ್ರವರ್ಧಮಾನಕ್ಕೆ ಬಂದಿತು. ಕೆಲವು ಕೈಗಾರಿಕಾ ಸಮೂಹಗಳು ಮೋದಿ ಸರಕಾರದ ಆರ್ಥಿಕ ನೀತಿಗಳ ದೊಡ್ಡ ಫಲಾನುಭವಿಗಳಾದರು.

ನಿರ್ದಿಷ್ಟವಾಗಿ ಹೇಳುವುದಾದರೆ, ಅದಾನಿ ಗುಂಪಿನ ಬೆಳವಣಿಗೆ ಅಸಾಧಾರಣವಾಗಿದೆ. ಭೂಮಿ, ನೀರು, ವಿದ್ಯುತ್ ಮತ್ತು ಇತರ ರಿಯಾಯಿತಿಗಳನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹಕಗಳಾಗಿ ನೀಡಲಾಯಿತು ಮತ್ತು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ನಿರ್ಲಕ್ಷಿಸಲಾಯಿತು. ಅದರಿಂದಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಮಾರುಕಟ್ಟೆಯು ಪ್ರತಿಕೂಲವಾಯಿತು. ಅದರ ಜೊತೆಯಲ್ಲಿ ಸರ್ಕಾರದ ಆರ್ಥಿಕ ಪರಿಸ್ಥಿತಿಯೂ ಬಿಗಡಾಯಿಸಿತು. ಸರ್ಕಾರದ ಬಳಿ ಇದ್ದ ಹಣದಲ್ಲಿ ಹೆಚ್ಚಿನ ಭಾಗವನ್ನು ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹ-ಧನ ಮತ್ತು ರಿಯಾಯಿತಿಗಳಿಗೆ ಖರ್ಚುಮಾಡಿದ್ದರಿಂದಾಗಿ, ಸಾಮಾಜಿಕ ವಲಯಗಳಿಗೆ ಖರ್ಚು ಮಾಡಲು ಸರ್ಕಾರದ ಬಳಿ ಉಳಿದ ಹಣ ತೀರಾ ಕಡಿಮೆ ಇತ್ತು. ಇದರ ಪರಿಣಾಮವಾಗಿ ಗುಜರಾತಿನಲ್ಲಿ ಸಾಮಾಜಿಕ ವಲಯದ ಬಾಬ್ತು ಮಾಡಿದ ತಲಾವಾರು ಖರ್ಚಿನ ಪ್ರಮಾಣವು, ಗುಜರಾತಿನಲ್ಲಿದ್ದಷ್ಟೇ ತಲಾ ವರಮಾನ ಇದ್ದ ಇತರ ರಾಜ್ಯಗಳಿಗೆ ಹೋಲಿಸಿದರೆ, ಬಹಳ ಕಡಿಮೆ ಇತ್ತು. ವಾಸ್ತವವಾಗಿ, ಈ ವಿಷಯದಲ್ಲಿ ಗುಜರಾತ್ ಸರಕಾರದ ಸಾಧನೆ, ಇತರ ರಾಜ್ಯಗಳಿಗೆ ಹೋಲಿಸಿದರೆ, ಬಹಳ ಕಳಪೆಯಾಗಿ ಕಾಣುತ್ತದೆ.

ಇಂತಹ ಸಂಗತಿಗಳು ಮತದಾರರ ಅರಿವಿಗೆ ಬಾರದಂತೆ ಅವುಗಳನ್ನು ಪರಿಣಾಮಕಾರಿಯಾಗಿ ಮಾಧ್ಯಮ ನಿರ್ವಹಣೆಯ ಮೂಲಕ ಮುಚ್ಚಿಡಲಾಯಿತು. ಹಾಗಾಗಿ, ಗುಜರಾತ್ ಹೊರಗಿನ ಮತದಾರರು ಆರ್ಥಿಕತೆಯನ್ನು ಬಲಪಡಿಸುವ ಮತ್ತು ಉದ್ಯೋಗಾವಕಾಶವನ್ನು ಸೃಷ್ಟಿಸುವ ಮತ್ತು ಭಾರತದಾದ್ಯಂತ ಗುಜರಾತ್ ಮ್ಯಾಜಿಕ್ ಅನ್ನು ಇಡೀ ದೇಶದಲ್ಲಿ ಪುನರಾವರ್ತಿಸುವರೆಂದು ಭಾವಿಸಿದ ಒಬ್ಬರಿಗೆ ಮತ ಚಲಾಯಿಸಿದರು. ಆದರೆ, ಅಭಿವೃದ್ಧಿಯಲ್ಲಿ ಆಗುತ್ತಿದ್ದ ಕೊರತೆಯ ವಾಸ್ತವವನ್ನು ಗುಜರಾತ್ ಜನರಿಂದ ಮರೆಮಾಚಲು ಆಗಲಿಲ್ಲ. ಅಷ್ಟಾಗಿಯೂ, ಅವರು ಬಿಜೆಪಿಯನ್ನು ಬೆಂಬಲಿಸಿದರು ಮತ್ತು ಬಿಜೆಪಿಯ ಮತ ಗಳಿಕೆಯೂ ಹೆಚ್ಚುತ್ತಾ ಹೋಯಿತು.

ಚುನಾವಣಾ ರಾಜಕಾರಣದಲ್ಲಿ ಬಿಜೆಪಿಯ ಪ್ರಾಬಲ್ಯವನ್ನು ಅರ್ಥಮಾಡಿಕೊಳ್ಳಲು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಂಶಗಳ ಬಗ್ಗೆ ವಿವರವಾಗಿ ಪರಿಗಣಿಸಬೇಕಾಗುತ್ತದೆ. ಅದೇನೇ ಇರಲಿ, ಗುಜರಾತಿನಲ್ಲಿ ಈಗ ನಡೆಯುತ್ತಿರುವ ರಾಜಕೀಯ ಚರ್ಚೆಗಳಲ್ಲಿ ಅರ್ಥವ್ಯವಸ್ಥೆಯ ಮೇಲಿನ ಟೀಕೆ ಟಿಪ್ಪಣಿಗಳೇ ಪ್ರಧಾನವಾಗಿವೆ. ಹಾಗಾಗಿ, ಗುಜರಾತನ್ನು ಕಾಡುತ್ತಿದ್ದ ಆರ್ಥಿಕ ಹುಳುಕುಗಳು ಈಗ ಬಯಲಾಗುತ್ತಿವೆ. ಪಾಟಿದಾರರು, ದಲಿತರು ಮತ್ತು ಸಣ್ಣ ಪುಟ್ಟ ವ್ಯಾಪಾರಿಗಳು ತಮ್ಮ ಜೀವನಾಧಾರವೇ ಕುಸಿಯುತ್ತಿದೆ ಎಂದು ಬೊಬ್ಬಿರಿಯುತ್ತಿದ್ದಾರೆ. 'ಗುಜರಾತ್ ಮಾದರಿ' ವಿಫಲವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.

ಆದರೆ, ಆರ್ಥಿಕ ಸಮಸ್ಯೆಗಳೇ ಮೂಲವಾಗಿರುವ ಈ ಅಸಮಾಧಾನವು ಗುಜರಾತಿನಲ್ಲಿ ಸ್ಫೋಟಗೊಳ್ಳುತ್ತಿರುವುದರ ಬಗ್ಗೆ ನಿಖರವಾದ ವಿವರಣೆ ಏನು? ಜನರ ಏರುತ್ತಿರುವ ಆಕಾಂಕ್ಷೆಗಳನ್ನು ಈಡೇರಿಸದ ರಾಜ್ಯ ಸರ್ಕಾರದ ವೈಫಲ್ಯವೋ ಅಥವಾ ಅಸಮಾನತೆಯ ಹೆಚ್ಚಳದಿಂದಾಗಿ ಜನಸಂಖ್ಯೆಯ ಒಂದು ಬೃಹತ್ ವಿಭಾಗದ ಪರಿಸ್ಥಿತಿ ಬಹಳವಾಗಿ ಹದಗೆಟ್ಟಿರುವುದೋ ಉತ್ತರವಾಗಿರಬಹುದು.

ಗುಜರಾತಿನಲ್ಲಿ ಉನ್ನತ ಬೆಳವಣಿಗೆಯ ಜೊತೆಯಲ್ಲಿ ಅಸಮಾನತೆಯೂ ಹೆಚ್ಚಾಗಿದೆ ಎಂಬುದು ರಹಸ್ಯವಲ್ಲ. ಈ ಅಸಮಾನತೆಯಿಂದಾಗಿಯೇ ಜನಸಂಖ್ಯೆಯ ಅತ್ಯಂತ ದೊಡ್ಡ ಭಾಗದ ಜೀವನ ಮಟ್ಟ ವಾಸ್ತವವಾಗಿ ಕುಸಿದಿದೆ ಎಂಬುದು ಕೆಲವೇ ಮಂದಿಗೆ ಗೊತ್ತಿರುವುದು. ರಾಜ್ಯದಲ್ಲಿ ಉದ್ಯೋಗಗಳ ಬೆಳವಣಿಗೆ ಬಹಳ ಕಡಿಮೆ ಇತ್ತು ಮತ್ತು ಸಾಮಾನ್ಯವಾಗಿ ಹೇಳುವುದಾದರೆ 'ಉದ್ಯೋಗ ರಹಿತ ಬೆಳವಣಿಗೆ'ಗೆ ಗುಜರಾತ್ ರಾಜ್ಯವು ಒಂದು ಶಾಸ್ತ್ರೀಯ ಉದಾಹರಣೆಯಾಗಿದೆ. ಈಗ ಉದ್ಯೋಗ ರಹಿತ ಬೆಳವಣಿಗೆಯು ಭಾರತೀಯ ಅರ್ಥವ್ಯವಸ್ಥೆಯ ದಿಕ್ಪಥದ ಒಂದು ಲಕ್ಷಣವೇ ಆಗಿದೆ.

29 ರಾಜ್ಯಗಳ ಪೈಕಿ ಗುಜರಾತ್ ಹಸುಳೆಗಳ ಮರಣ ದರದಲ್ಲಿ 19ನೇ ಸ್ಥಾನದಲ್ಲಿದೆ ಮತ್ತು 5ವರ್ಷಗಳ ಕೆಳಗಿನ ಮಕ್ಕಳ ಅಪೌಷ್ಠಿಕತೆಯಲ್ಲಿ 25ನೇ ಸ್ಥಾನದಲ್ಲಿದೆ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಈಗ ಉದ್ಯೋಗ ರಹಿತ ಬೆಳವಣಿಗೆಯು ಭಾರತೀಯ ಅರ್ಥವ್ಯವಸ್ಥೆಯ ದಿಕ್ಪಥದ ಒಂದು ಲಕ್ಷಣವೇ ಆಗಿದೆ. ಇದಕ್ಕೆ 'ಮಾದರಿ' ಹಾಕಿಕೊಟ್ಟದ್ದು ಗುಜರಾತ್. 'ಉದ್ಯೋಗ ರಹಿತ ಬೆಳವಣಿಗೆ'ಗೆ ಗುಜರಾತ್ ರಾಜ್ಯವು ಒಂದು ಪಕ್ಕಾ ಉದಾಹರಣೆಯಾಗಿದೆ.

ಇಲ್ಲಿ ತಲಾ ಆದಾಯ ದೇಶದ ತಲಾ ಆದಾಯಕ್ಕಿಂತ 20% ಅಧಿಕವಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಕೂಲಿಯು 20% ಕಡಿಮೆ ಮತ್ತು ನಗರದಲ್ಲಿ 15% ಕಡಿಮೆ ಇದೆ.

ಪ್ರಧಾನ ಮಂತ್ರಿ ಮೋದಿ 'ಚಮಚಾ ಬಂಡವಾಳಶಾಹಿ' ಬಗ್ಗೆ ದೊಡ್ಡ ದೊಡ್ಡ ಮಾತಾಡುತ್ತಾರೆ. ಆದರೆ ಗುಜರಾತಿನಲ್ಲಿ ಅದು ಅವರ ಮೂಗಿನ ಅಡಿಯಲ್ಲಿಯೇ ಬೆಳೆಯಿತು ಎಂಬುದು ಒಂದು ಅಣಕವೇ.

ಕೂಲಿಯ ಮಟ್ಟವು ಜನ ಸಾಮಾನ್ಯರ ವಸ್ತು ಪರಿಸ್ಥಿತಿಯನ್ನು ಸೂಚಿಸುತ್ತದೆ. ಗುಜರಾತಿನಲ್ಲಿ ಸರಾಸರಿ ಕೂಲಿಯು ಅಖಿಲ ಭಾರತದ ಸರಾಸರಿಗಿಂತ ಕಡಿಮೆಯಿದೆ. ಅದು ಬಡ ರಾಜ್ಯಗಳಿಗಿಂತಲೂ ಹೆಚ್ಚು ಕಳಪೆಯಾಗಿದೆ. ಗುಜರಾತ್ ರಾಜ್ಯದ ತಲಾವಾರು ಆದಾಯವು ದೇಶದ ತಲಾವಾರು ಆದಾಯಕ್ಕಿಂತಲೂ 20% ಅಧಿಕವಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಕೂಲಿಯು 20% ಕಡಿಮೆ ಮತ್ತು ನಗರದಲ್ಲಿ 15% ಕಡಿಮೆ ಇದೆ. ಭಾರತದ ಉಳಿದ ಭಾಗಗಳಿಗೆ ಹೋಲಿಸಿದರೆ ಗುಜರಾತಿನಲ್ಲಿ ಕಾರ್ಮಿಕರ ಚೌಕಾಶಿ ಸಾಮರ್ಥ್ಯವು ತುಂಬಾ ದುರ್ಬಲವಾಗಿದೆ.

ಕೂಲಿಯು ಕಡಿಮೆಯೇ ಇರಬಹುದು ಮತ್ತು ಅದೇ ರೀತಿಯಲ್ಲಿ ಜೀವನ ನಿರ್ವಹಣೆಯ ವೆಚ್ಚವೂ ಕಡಿಮೆಯೇ ಇದೆ ಎಂದು ವಾದಿಸಬಹುದು. ಕೂಲಿಯ ಮಟ್ಟ ಕಡಿಮೆಯೇ ಇದ್ದರೂ ಬೆಲೆಗಳೂ ಕಡಿಮೆ ಇದ್ದಾಗ ಉತ್ತಮವಾಗಿ ಬದುಕುಳಿಯಲು ಸಾಧ್ಯವಿದೆ. ಈ ಪ್ರಶ್ನೆಯನ್ನು ಪರಿಶೀಲಿಸುವ ಒಂದು ಮಾರ್ಗವೆಂದರೆ ಕೂಲಿಯನ್ನು ರಾಜ್ಯ ಮಟ್ಟದ ಅಧಿಕೃತ ಬಡತನ ರೇಖೆಯೊಂದಿಗೆ ಹೋಲಿಸುವುದು . ಆದ್ದರಿಂದ, ಗ್ರಾಮೀಣ ಪ್ರದೇಶದ ಒಬ್ಬ ಪುರುಷ ಸಾಂದರ್ಭಿಕ ಕೆಲಸಗಾರನ ವೇತನವನ್ನು ಮತ್ತು ಈ ಕೆಲಸಗಾರನು ತಿಂಗಳಲ್ಲಿ 25 ದಿನಗಳ ಕೆಲಸ ಮಾಡಲು ಸಿದ್ಧರಿದ್ದಾನೆ ಮತ್ತು ಆತನಿಗೆ 25 ದಿನಗಳ ಕೆಲಸ ಸಿಗುತ್ತದೆ ಎಂದು ಊಹಿಸಿಕೊಂಡು ನಾವು ಈ ವಿಷಯವನ್ನು ಪರಿಗಣಿಸೋಣ. ಅಂತಹ ಒಬ್ಬ ಕೆಲಸಗಾರನು ಕುಟುಂಬದ ಏಕೈಕ ದುಡಿಮೆಗಾರನಾಗಿದ್ದಲ್ಲಿ, ಆತನು ಬಡತನ ರೇಖೆಗಿಂತ ತುಸು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವ ಎಷ್ಟು ಜನರಿಗೆ ಬೆಂಬಲ ನೀಡಬಹುದು?

ಭಾರತದ ರಾಜ್ಯಗಳಲ್ಲಿ 2011–12ನೇ ಸಾಲಿನಲ್ಲಿ ನಡೆದ ಅಂತಹ ಒಂದು ಕಸರತ್ತಿನ ಫಲಿತಾಂಶಗಳು, ಒಬ್ಬ ಕೆಲಸಗಾರನು 4.6 ಜನರಿಗೆ ಬೆಂಬಲ ನೀಡಬಹುದು ಎಂದು ಸೂಚಿಸುತ್ತದೆ. ಅತಿ ಹೆಚ್ಚಿನ ಅನುಪಾತವಿರುವ ಕೇರಳವು 8.5 ವ್ಯಕ್ತಿಗಳನ್ನು ಬೆಂಬಲಿಸುತ್ತದೆ .(ಇದು ವಲಸೆ ಮತ್ತು ಹೊರಗಿನಿಂದ ಬಂದ ಹಣದ ಧನಾತ್ಮಕ ಪರಿಣಾಮವನ್ನು ಸಹ ಪ್ರತಿಬಿಂಬಿಸುತ್ತದೆ). ಗುಜರಾತಿನ ಅನುಪಾತವು ಕೇವಲ 3.1 ಆಗಿದ್ದು, ಇದು ದೇಶದಲ್ಲೇ ಎರಡನೇ ಅತಿ ಕಡಿಮೆ ಅನುಪಾತ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಗುಜರಾತಿನಲ್ಲಿ ಪುರುಷ ಕಾರ್ಮಿಕರ ಕೂಲಿಯು ಭಾರತದಲ್ಲಿ ತಳ ಮಟ್ಟದಲ್ಲಿದೆ. ಹೀಗಾಗಿ, ಗುಜರಾತಿನಲ್ಲಿರುವ ಕೂಲಿಕಾರರ ಪರಿಸ್ಥಿತಿ ಹೀನಾಯವಾಗಿದೆ. ಅಭಿವೃದ್ಧಿಯ ಮಾದರಿಯ ಯಶಸ್ಸಿನ ಕಥೆಯೆಂದು ಡಂಗುರ ಹೊಡೆದ ರಾಜ್ಯದ ಈ ಫಲಿತಾಂಶವು ನಿರೀಕ್ಷಿತವೇ. ಈ ಮಾದರಿಯು ದೊಡ್ಡ ವ್ಯಾಪಾರಕ್ಕೆ ಪ್ರೋತ್ಸಾಹ ನೀಡುತ್ತದೆ ಮತ್ತು ಅದೇ ಸಮಯದಲ್ಲಿ ಅದು ಕಾರ್ಮಿಕರ ವೇತನವನ್ನು ನಿಗ್ರಹಿಸುತ್ತದೆ ಎಂಬು ಸ್ಪಷ್ಟವಾಗಿ ಕಂಡುಬರುತ್ತದೆ.

2011–12ರ ನಂತರ, ಗುಜರಾತಿನ ಕಾರ್ಮಿಕರ ಪರಿಸ್ಥಿತಿಗಳು ಇನ್ನಷ್ಟು ಕ್ಷೀಣಿಸಿರಬಹುದು. ಹಿಂದಿನ ಅವಧಿಯಲ್ಲಿದ್ದ ಕೃಷಿ ಆದಾಯದ ತೀವ್ರ ಹೆಚ್ಚಳ ಈಗ ಸ್ಥಗಿತಗೊಂಡಿದೆ. ರಿಸರ್ವ್ ಬ್ಯಾಂಕಿನ ಇತ್ತೀಚಿನ ಮಾಹಿತಿಯ ಪ್ರಕಾರ, 2013–14 ಮತ್ತು 2015–16ರ ನಡುವೆ ಕೃಷಿ ಕ್ಷೇತ್ರದಲ್ಲಿನ ನೈಜ ಆದಾಯವು 7% ನಷ್ಟು ಇಳಿದಿದೆ.

ಇದಲ್ಲದೆ, ಗುಜರಾತಿನಲ್ಲಿ ಉದ್ಯೋಗ ಸೃಷ್ಟಿ ಕುಸಿದಿದೆ. ಸರ್ಕಾರದಿಂದ ಪ್ರೋತ್ಸಾಹಿಸಲ್ಪಟ್ಟ ಹೆಚ್ಚು ಬಂಡವಾಳ ತೊಡಗಿಸಿದ ಯೋಜನೆಗಳು ನೀಡಿರುವ ಹೊಸ ಉದ್ಯೋಗಗಳು ಬಹಳ ಕಡಿಮೆ ಇವೆ. ಏತನ್ಮಧ್ಯೆ, ಹೆಚ್ಚಿನ ಪ್ರಮಾಣದ ಉದ್ಯೋಗವನ್ನು ಒದಗಿಸುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನೋಟು ರದ್ದತಿಯಂತಹ ದುರ್ಘಟನೆ ಮತ್ತು ಜಿಎಸ್‌ಟಿ ಯ ಸಂಪೂರ್ಣವಾಗಿ ಗಬ್ಬೆದ್ದ ಅನುಷ್ಠಾನದ ಕಾರಣದಿಂದಾಗಿ ಭಾರೀ ಪ್ರಮಾಣದ ಹಾನಿಕಾರಕ ಪರಿಣಾಮ ಅನುಭವಿಸಿವೆ. ಬಿಜೆಪಿಯಿಂದ ಪ್ರೋತ್ಸಾಹ ಪಡೆದಿರುವ ಗೋರಕ್ಷ ದಳವು, ಗೋಸಂರಕ್ಷಣೆಯ ಹೆಸರಿನಲ್ಲಿ ಆರ್ಥಿಕ ಪ್ರಕ್ಷುಬ್ಧತೆಯನ್ನು ಸೃಷ್ಟಿಸಿದೆ. ಜಾನುವಾರುಗಳ ಮಾರಾಟದಲ್ಲಿ ಅವರ ಹಸ್ತಕ್ಷೇಪವು ಕೃಷಿಯನ್ನು ಹೆಚ್ಚು ಕಷ್ಟಕರವಾಗಿ ಮಾಡಿದೆ. ಅದು, ಡೈರಿ ಮತ್ತು ಚರ್ಮದ ಉದ್ಯಮಗಳಲ್ಲಿ ಉದ್ಯೋಗಗಳನ್ನು ನಾಶಪಡಿಸಿದೆ. ಹಾಗಾಗಿ, ಸ್ವಯಂ ಉದ್ಯೋಗಿ ಜೀವನೋಪಾಯವೂ ಸಹ ತೀವ್ರ ಬೆದರಿಕೆಗೆ ಒಳಗಾಗಿದೆ.

ಈ ಸಮಸ್ಯೆಗಳು ಗುಜರಾತಿಗೆ ಮಾತ್ರ ಸೀಮಿತವಾಗಿಲ್ಲ. ನಿಖರವಾಗಿ ಹೇಳುವುದಾದರೆ, ರಾಜ್ಯ ಸರ್ಕಾರವು ಅಳವಡಿಸಿಕೊಂಡ ಆರ್ಥಿಕ ತಂತ್ರಗಾರಿಕೆಯು ಬೃಹತ್ ಪ್ರಮಾಣದ ತಾರತಮ್ಯವನ್ನು ಸೃಷ್ಟಿಸಿ ರುವುದರಿಂದಾಗಿಯೇ ಈ ಸಮಸ್ಯೆಗಳು ಗುಜರಾತಿನಲ್ಲಿ ಉಲ್ಬಣಗೊಂಡಿವೆ. ಆದ್ದರಿಂದ, ಕಾಂಗ್ರೆಸ್ ಪಕ್ಷದ ಅಭಿಯಾನದಲ್ಲಿ ಆರ್ಥಿಕ ಸಮಸ್ಯೆಗಳ ಬಗ್ಗೆ ಗಮನ ಹರಿಸಿರುವುದು ಸರಿಯಾಗಿಯೇ ಇದೆ. ಆದರೆ, ಇದು ಪರ್ಯಾಯ ಆರ್ಥಿಕ ತಂತ್ರಗಾರಿಕೆಯನ್ನು ಸಹ ಪ್ರಸ್ತಾಪಿಸಬೇಕು. ಆ ಕಾರ್ಯನೀತಿಯು, ಬೆಳವಣಿಗೆಯನ್ನು ಸೃಷ್ಟಿಸಲು ದೊಡ್ಡ ಬಂಡವಾಳದ ಮೇಲೆ ಅವಲಂಬನೆ ಇಟ್ಟುಕೊಳ್ಳುವುದರಿಂದ ದೂರವಿರಬೇಕು, ಏಕೆಂದರೆ ಅದುಆರ್ಥಿಕ ಚಟುವಟಿಕೆಗಳ ಫಲ ಕ್ರಮೇಣ ಕೆಳಕ್ಕೆ ಜಿನುಗುತ್ತದೆ ಎಂಬ ಕಲ್ಪನೆಯಿಂದ ಕೂಡಿದೆ. ಅದು, ಉದ್ಯೋಗಗಳು ಮತ್ತು ವೇತನ ಆದಾಯವನ್ನು ಹೆಚ್ಚಿಸುವುದರ ಮೇಲೆ ನೇರವಾಗಿ ಕೇಂದ್ರೀಕರಿಸುವ ಒಂದು ಕಾರ್ಯತಂತ್ರವಾಗಿರಬೇಕು ಮತ್ತು ಅದು ಸಣ್ಣ ಉತ್ಪಾದಕರ ಹಿತ ಕಾಯುವಂತಿರಬೇಕು. ●

ಸಂಗ್ರಹಾನುವಾದ: ಕೆ.ಎಂ.ನಾಗರಾಜ್

ಬಿಜೆಪಿಯ ಚುನಾವಣಾ ತಂತ್ರಗಳು ಈ ಬಾರಿ ಗುಜರಾತಿನಲ್ಲಿ ಕೈಕೊಡುತ್ತಿವೆಯೇ?

ಇದು ಈಗ ಹಲವು ರಾಜಕೀಯ ವಿಶ್ಲೇಷಕರು ಕೇಳುತ್ತಿರುವ ಪ್ರಶ್ನೆ.

ಕಳೆದ ವಿಧಾನಸಭಾ ಚುನಾವಣೆಗಳ ನಂತರ ಮುಖ್ಯಮಂತ್ರಿಯಾಗಿ ರಾಷ್ಟ್ರಮಟ್ಟದ ರಾಜಕಾರಣಕ್ಕೆ ಲಗ್ಗೆ ಹಾಕಿದ ಪ್ರಧಾನ ಮಂತ್ರಿಗಳು ಮತ್ತು ಇದೇ ರಾಜ್ಯದಿಂದ ರಾಜಕೀಯ ಆರಂಭಿಸಿದ ಬಿಜೆಪಿಯ ರಾಷ್ಟ್ರಾಧ್ಯಕ್ಷರು ಈ ಬಗ್ಗೆ ಆತಂಕಿತರಾಗಿದ್ದಾರೆ ಎಂಬುದನ್ನು ಅವರ ನಡೆ-ನುಡಿಗಳೇ ಹೇಳುತ್ತಿವೆ ಎನ್ನುತ್ತಾರೆ ರಾಜಕೀಯ ವೀಕ್ಷಕರು.

ನಾವು ಗೆಲ್ಲುತ್ತೇವೆ ಎನ್ನುತ್ತಿದ್ದಾರೆ ಬಿಜೆಪಿಯ ಮುಖಂಡರುಗಳು. ಆದರೆ ಮತಗಳಿಕೆಯನ್ನು ಉಳಿಸಿಕೊಳ್ಳುತ್ತಾರೆಯೇ, ಸೀಟುಗಳನ್ನು ಉಳಿಸಿ ಕೊಳ್ಳುತ್ತಾರೆಯೇ ಎಂಬ ಬಗ್ಗೆ ಅವರಿಗೂ ಬಹಳಷ್ಟು ಸಂದೇಹಗಳಿದ್ದಂತಿದೆ.

ಮೂವರು ಯುವ ನಾಯಕರುಗಳು ಬಿಜೆಪಿಗೆ ಸವಾಲು ಹಾಕಿರುವುದು ಮತ್ತು ಕಾಂಗ್ರೆಸ್ ಕೂಡ ಆರ್ಥಿಕ ಪ್ರಶ್ನೆಗಳನ್ನು ಎತ್ತುತ್ತಿರುವುದು, ಬಿಜೆಪಿಯ ಸಾಮಾಜಿಕ ಮಾಧ್ಯಮ ತಂತ್ರಗಳನ್ನು ಇವರೆಲ್ಲರೂ ಬಳಸುತ್ತಿರುವುದು ಬಿಜೆಪಿ ಮುಖಂಡರಲ್ಲಿ ಆತಂಕ ಮೂಡಿಸಿರುವದಂತೂ ಖಚಿತ. ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ಗುಜರಾತಿನಲ್ಲಿ ಮತದಾನದ ನಂತರವೇ ಆರಂಭಿಸುತ್ತಿರುವುದು ಮಾತ್ರವೇ ಇದನ್ನು ಸೂಚಿಸುತ್ತಿಲ್ಲ.

ನೋಟುರದ್ದತಿ ಮತ್ತು ಜಿಎಸ್‌ಟಿ ನಂತರ ಗುಜರಾತಿನ ಅಭಿವೃದ್ಧಿ ಮಾದರಿ ಬಗ್ಗೆ ಇದ್ದಬದ್ದ ನಂಬಿಕೆಯೂ ಮಾಯವಾಗುತ್ತಿದೆ ಎನ್ನಲಾಗಿದೆ. ಜಿಗ್ನೇಶ್ ಮೆವಾಣಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ ಕೂಡಲೇ ಅವರ ವಿರುದ್ಧ ಜಾಮೀನುರಹಿತ ವಾರಂಟ್ ಹೊರಡಿಸಲಾಗಿದೆ. ಈ ಮೊದಲು ಕಾಂಗ್ರೆಸ್ ಮುಖಂಡ ಅಹ್ಮದ್ ಪಟೇಲ್ ಐಎಸ್ ಸಂಪರ್ಕ ಹೊಂದಿದ್ದಾರೆ ಎಂದು ಅದು ಹರಿಯಬಿಟ್ಟ ಸುದ್ದಿ ಜೋಕುಗಳಿಗೆ ತುತ್ತಾಯಿತು. ಹಾರ್ದಿಕ ಪಟೇಲ್ ಮೇಲಿನ ಸೆಕ್ಸ್ ವಿಡಿಯೋದಿಂದಲೂ ಏನೂ ಗಿಟ್ಟಲಿಲ್ಲ.

ರಾಹುಲ್ ಗಾಂಧಿಯ ಸೋಮನಾಥ ದೇವಸ್ಥಾನ ಭೇಟಿಯ ನಂತರ ಆತ ಹಿಂದು ಹೌದೋ ಅಲ್ಲವೋ ಎಂದು ಎಬ್ಬಿಸಿದ ಗುಲ್ಲು ಮತದಾರರನ್ನು ಅಷ್ಟೇನೂ ಆಕರ್ಷಿಸಿದಂತಿಲ್ಲ.

22 ವರ್ಷಗಳ ಆಳ್ವಿಕೆಯ ನಂತರ ಗುಜರಾತಿನ ಜನತೆ ಅನುಭವಿಸುತ್ತಿರುವ ಆರ್ಥಿಕ ಸಂಕಟಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಕೋಮುವಿಭಜನೆಯ ತಂತ್ರವೂ ಬಹುಶಃ 2002ರ ನಂತರ ಮೊದಲ ಬಾರಿಗೆ ಕೆಲಸ ಮಾಡುತ್ತಿಲ್ಲ ಎಂದು ಹಲವರಿಗೆ ಅನಿಸುತ್ತಿದೆಯಂತೆ.

ಯಾವುದಾದರೊಂದು ಸಭೆಯಲ್ಲಿ ಮೂರ್ಛೆ ಬಿದ್ದು ಜನಗಳ ಸಹಾನುಭೂತಿ ಗಳಿಸಬಹುದು ಎಂದು ಹಾರ್ದಿಕ್ ಪಟೇಲ್ ತಮ್ಮ ಸಮುದಾಯದವರನ್ನು ಎಚ್ಚರಿಸಿದ್ದಾರಂತೆ. ತಮ್ಮ ಸಾರ್ವಜನಿಕ ಪ್ರದರ್ಶನ ಕಲೆ ತಮ್ಮದೇ ರಾಜ್ಯದಲ್ಲಿ ಅಪಹಾಸ್ಯಕ್ಕೆ ತುತ್ತಾಗಬಹುದು ಎಂದು ಮೋದಿಯವರು ನಿರೀಕ್ಷಿಸಿರಲಿಕ್ಕಿಲ್ಲ.

ತಾನು ಮಣ್ಣಿನ ಮಗ' ಎಂದು ನೆನಪಿಸುತ್ತಿರುವುದು, ಸುಧಾರಣೆಗಳಿಗಾಗಿ ಯಾವ 'ತ್ಯಾಗ'ಕ್ಕೂ ಸಿದ್ಧ ಎನ್ನುತ್ತಿರುವುದು ಇನ್ನೇನನ್ನು ಸೂಚಿಸುತ್ತಿರಬಹುದು?

ಕೇಂದ್ರ ಸರಕಾರ ಮುಚ್ಚುತ್ತಿರುವ ಸಾರ್ವಜನಿಕ ವಲಯದ ಘಟಕವನ್ನು ಕೇರಳ ರಾಜ್ಯಸರಕಾರ ವಹಿಸಿಕೊಳ್ಳದಂತೆ ಸಂಘ ಪರಿವಾರದ ಅಡ್ಡಗಾಲು

ಕೇರಳದ ಪಾಲಕ್ಕಾಡ್‌ನಲ್ಲಿರುವ ಇನ್ಸ್ಟ್ರುಮೆಂಟೇಶನ್ ಲಿಮಿಟೆಡ್ ಸಾರ್ವಜನಿಕ ವಲಯದ ಒಂದು ಘಟಕ. ಅದರ ಮುಖ್ಯ ಕಚೇರಿ ಇರುವುದು ರಾಜಸ್ತಾನದ ಕೋಟಾದಲ್ಲಿ. ಅಲ್ಲಿನ ಘಟಕ ನಷ್ಟ ಮಾಡುತ್ತಿದೆ ಎಂದು ಅದನ್ನು ಮುಚ್ಚಲು ಕೇಂದ್ರ ಸರಕಾರ ಮುಂದಾಯಿತು. ಆದರೆ ಪಾಲಕ್ಕಾಡ್ ಕಳೆದ 20ವರ್ಷಗಳಲ್ಲಿ 163 ಕೋಟಿ ರೂ. ಲಾಭ ಗಳಿಸಿದೆ. ಆದ್ದರಿಂದ ಇದನ್ನು ವಹಿಸಿಕೊಳ್ಳುವ ಬಗ್ಗೆ ಕೇರಳದ ಎಲ್‌ಡಿಎಫ್ ಸರಕಾರ ಉನ್ನತ ಮಟ್ಟದ ಸಮಿತಿಯನ್ನು ನೇಮಿಸಿ ಮಾರುಕಟ್ಟೆ ಬೆಲೆಗಳಲ್ಲೇ ಅದನ್ನು ಕೊಳ್ಳಲು ನಿರ್ಧರಿಸಲಾಯಿತು.

ಆದರೆ ಇಲ್ಲಿ ಹಿಡಿಯಷ್ಟು ಸದಸ್ಯತ್ವ ಹೊಂದಿರುವ ಸಂಘ ಪರಿವಾರದ ಬಿಎಂಎಸ್ ಇದಕ್ಕೆ ಅಡ್ಡಗಾಲು ಹಾಕಿದೆ. ಕಾರ್ಮಿಕರಿಗೆ ಸಲ್ಲಬೇಕಾದ ಎಲ್ಲ ಬಾಕಿ ಹಣವನ್ನು ತೀರಿಸಿದ ಮೇಲೆಯೇ ಅದನ್ನು ರಾಜ್ಯಸರಕಾರಕ್ಕೆ ವಹಿಸಬೇಕು ಎಂದು ಕೋರ್ಟಿನಿಂದ ತಡೆಯಾಜ್ಞೆ ತಂದಿದೆ.

ಈ ಬಾಕಿಯನ್ನು ತೆರಬೇಕಾದ್ದು ಅದರದ್ದೇ ಪರಿವಾರ ನಡೆಸುವ ಕೇಂದ್ರ ಸರಕಾರ. ಕೋಟಾದಲ್ಲಿನ ಘಟಕವನ್ನು ಮುಚ್ಚಿದಾಗ 742 ಕೋಟಿ ರೂ.ಗಳನ್ನು ಕಾರ್ಮಿಕರನ್ನು ನಿರುದ್ಯೋಗಿಗಳಾಗಿಸಲು ತೆತ್ತ ಕೇಂದ್ರ ಸರಕಾರ ಇಲ್ಲಿ 40 ಕೋಟಿ ರೂ.ಗಳನ್ನು ತೆರಲು ನಿರಾಕರಿಸುತ್ತಿದೆ. ಮತ್ತು ಈ ಬಗ್ಗೆ ಕಾರ್ಮಿಕ ಸಂಘಗಳೊಡನೆ ಮಾತಾಡಲೂ ಅದು ನಿರಾಕರಿಸುತ್ತಿದೆ ಎಂದು ಪಾಲಕ್ಕಾಡ್‌ನ ಲೋಕಸಭಾ ಸದಸ್ಯ ಎಂ ಬಿ ರಾಜೇಶ್ ಹೇಳುತ್ತಾರೆ.

ಕೇಂದ್ರ ಸರಕಾರ ಇದನ್ನು ಖಾಸಗೀಕರಿಸ ಬಯಸುತ್ತಿದೆ, ಆದ್ದರಿಂದ ರಾಜ್ಯ ಸರಕಾರ ಇದನ್ನು ವಹಿಸಿಕೊಳ್ಳದಂತೆ ಮಾಡಲು ಬಿಎಂಎಸ್ ಮೂಲಕ ಅಡ್ಡಗಾಲು ಹಾಕುತ್ತಿದೆ ಎಂಬುದು ಸ್ಪಷ್ಟ. ಇದರ ವಿರುದ್ಧ ಚಳುವಳಿ ನಡೆಸಲು ಇಲ್ಲಿನ ಕಾರ್ಮಿಕ ಸಂಘಗಳು ನಿರ್ಧರಿಸಿವೆ. ಸಿಐಟಿಯು ಮತ್ತು ಐಎನ್‌ಟಿಯುಸಿ ಬಿಎಂಎಸ್ ತಂದ ತಡೆಯಾಜ್ಞೆ ತೆರವು ಮಾಡಿಸಲು ಕೋರ್ಟ್‌ಗೆ ಅರ್ಜಿ ಸಲ್ಲಿಸಲಿವೆ ಎಂದು ವರದಿಯಾಗಿದೆ.

ಬಿಇಎಂಎಲ್ ಖಾಸಗೀಕರಣದ ಪ್ರಯತ್ನ

ಇದೇ ಸ್ಥಳದಲ್ಲಿರುವ ಇನ್ನೊಂದು ಸಾರ್ವಜನಿಕ ವಲಯದ ಘಟಕ ಬಿಇಎಂಎಸ್‌ನ್ನು ಕೂಡ ಖಾಸಗೀಕರಿಸುವ ಪ್ರಯತ್ನ ನಡೆಯುತ್ತಿತ್ತು. 26% ಪಾಲನ್ನು ಖಾಸಗಿಯವರಿಗೆ ಮಾರಿ ಅವರೇ ಆಡಳಿತ ವಹಿಸಿಕೊಳ್ಳುವಂತೆ ಮಾಡುವ ಯೋಚನೆ ಕೇಂದ್ರ ಸರಕಾರಕ್ಕಿತ್ತು. ಆದರೆ ಕಾರ್ಮಿಕರಿಂದ ಇದಕ್ಕೆ ಬಲವಾದ ಪ್ರತಿರೋಧ ಬಂದಿತು.

ಇದೊಂದು ರಕ್ಷಣಾ ಉದ್ದಿಮೆಯಾಗಿದ್ದು ಸಾಮರಿಕ ಮಹತ್ವ ಪಡೆದಿರುವಂತದ್ದು. ಕ್ಷಿಪಣಿ ಹಾರಿಸುವ ವ್ಯವಸ್ಥೆ, ಸಶಸ್ತ್ರ ವಾಹನಗಳು, ತತ್ರ ಟ್ರಕ್ಕುಗಳು ಮತ್ತಿತರ ರಕ್ಷಣಾ ಸಾಧನಗಳಲ್ಲದೆ, ಮೆಟ್ರೊ ಮತ್ತು ರೈಲ್ ಕೋಚ್‌ಗಳನ್ನೂ ತಯಾರಿಸುವ ಈ ಘಟಕವನ್ನು ಖಾಸಗೀಕರಿಸುವುದರ ವಿರುದ್ಧ ದಿಲ್ಲಿಯಲ್ಲಿ ಆಗಸ್ಟ 9 ಮತ್ತು 10ರಂದು ಎರಡು ದಿನಗಳ ಪ್ರತಿಭಟನೆಯೂ ಸೇರಿದಂತೆ ಕಾರ್ಮಿಕರು ನಡೆಸಿದ ದೀರ್ಘ ಹೋರಾಟ, ಇದನ್ನು ಖಾಸಗೀಕರಿಸದಂತೆ ರಾಜ್ಯ ಮುಖ್ಯಮಂತ್ರಿಗಳಿಂದ ಪತ್ರ ಹಾಗೂ ಈಗ ಇದನ್ನು ಖಾಸಗೀಕರಿಸುವುದು ದೇಶದ ಭದ್ರತೆಗೆ ಹಾನಿಕಾರಕ ಎಂದು ರಕ್ಷಣಾ ಇಲಾಖೆಯೂ ಎಚ್ಚರಿಸಿರುವುದರ ಹಿನ್ನೆಲೆಯಲ್ಲಿ ಖಾಸಗೀಕರಣದ ಪ್ರಯತ್ನವನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ ಎಂದು ವರದಿಯಾಗಿದೆ.

ತ್ರಿಪುರಾದಲ್ಲಿ ಕಾರ್ಮಿಕರ ಬೃಹತ್ ರ್‍ಯಾಲಿ: ಪಿತೂರಿಗಳನ್ನೆಲ್ಲ ವಿಫಲಗೊಳಿಸುವ ದೃಢನಿರ್ಧಾರ

ನವೆಂಬರ್ 26ರಂದು ತ್ರಿಪುರಾದ ರಾಜಧಾನಿ ಅಗರ್ತಲಾ ಕೆಂಬಾವುಟಮಯವಾಗಿತ್ತು. ಸಿಐಟಿಯುನ ರಾಜ್ಯ ಘಟಕ ಏರ್ಪಡಿಸಿದ್ದ ಈ ಸಾರ್ವಜನಿಕ ಸಭೆಯಲ್ಲಿ ರಾಜ್ಯದ ಕಾರ್ಮಿಕರು ಸಾಗರೋಪಾದಿಯಲ್ಲಿ ನೆರೆದಿದ್ದರು. ಕೇಂದ್ರ ಸರಕಾರ ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಮೊಟಕು ಮಾಡುತ್ತಿರುವುದು, ದುಡಿಯುವ ಜನಗಳ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಹಿಂತೆಗೆದುಕೊಳ್ಳುವುದು ಮುಂತಾದ 'ಕ್ರಮಗಳ ವಿರುದ್ಧ ಮತ್ತು ದುಡಿಯುವ ಜನಗಳ ಹಕ್ಕುಗಳ ಮತ್ತು ಘನತೆಯ ರಕ್ಷಣೆಗಾಗಿ ರಾಜ್ಯದಲ್ಲಿ 8ನೇ ಎಡರಂಗ ಸರಕಾರ ತರಬೇಕೆಂದು ಈ ಬೃಹತ್ ರ್‍ಯಾಲಿ ನಡೆಯಿತು. ಬಿಜೆಪಿಯ ಎಲ್ಲ ಪಿತೂರಿಗಳನ್ನು ವಿಫಲಗೊಳಿಸಿ ಎಡರಂಗಕ್ಕೆ ವಿಜಯ ದೊರಕಿಸಿ ಕೊಡುವ ರಾಜ್ಯದ ಕಾರ್ಮಿಕರ ದೃಢನಿರ್ಧಾರವನ್ನು ಇದು ಬಿಂಬಿಸಿತು.

ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ಭಾಷಣವನ್ನು ಕಾರ್ಮಿಕರು ಹರ್ಷೋದ್ಗಾರಗಳ ನಡುವೆ ಸ್ವಾಗತಿಸಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಮಾಣಿಕ ಡೇ ಅಧ್ಯಕ್ಷತೆ ವಹಿಸಿದ ಈ ಬೃಹತ್ ಕಾರ್ಮಿಕರ ಸಭೆಯನ್ನುದ್ದೇಶಿಸಿ ರಾಜ್ಯ ಸಿಐಟಿಯು ಕಾರ್ಯದರ್ಶಿ ಶಂಕರ್‌ಪ್ರಸಾದ್ ದತ್ತ ಮತ್ತು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಡಾ.ಕೆ.ಹೇಮಲತಾ ಮಾತಾಡಿದರು.

ಕಾರ್ಮಿಕರು ದಿಲ್ಲಿ ಮಹಾಧರಣಿಯಿಂದ ಕಾರ್ಪೊರೇಟ್-ಪರ ಮೋದಿ ಸರಕಾರವನ್ನು ಅಧಿಕಾರದಿಂದ ಕೆಳಗಿಳಿದು ಹಾಕುವ ಪ್ರತಿಜ್ಞೆಗೈದು ಬಂದಿದ್ದಾರೆ. ತ್ರಿಪುರದ ಜನತೆ ಅವರ ಪ್ರಯತ್ನಕ್ಕೆ ಇನ್ನಷ್ಟು ಹುಮ್ಮಸ್ಸು ತುಂಬಲು ಎಡರಂಗ ಸರಕಾರವನ್ನು ಹೆಚ್ಚಿನ ಸಂಖ್ಯಾಬಲ ಮತ್ತು ಮತಗಳಿಂದ 8ನೇ ಅವಧಿಗೆ ಆರಿಸಿ ತರಬೇಕು, ಇದು ಮೋದಿ ಸರಕಾರಕ್ಕೆ ವಿದಾಯದ ಎಚ್ಚರಿಕೆ ಗಂಟೆಯಾಗುತ್ತದೆ ಎಂದು ಡಾ. ಹೆಮಲತಾ ಹೇಳಿದರು.





ಎನ್‌ಡಿಎ ಎಂಪಿ ಮೇಲೆ ಭೂಕಬಳಿಕೆ ಆರೋಪ

ಬಿಜೆಪಿ ನೇತೃತ್ವದ ಎನ್‌ಡಿಎ ರಾಜ್ಯಸಭಾ ಸದಸ್ಯ ಮತ್ತು ಈಗ ಕೇರಳ ಎನ್‌ಡಿಎ ಉಪಾಧ್ಯಕ್ಷರೂ ಆಗಿರುವ ರಾಜೀವ್ ಚಂದ್ರಶೇಖರ್ ಕೇರಳದ ಕೊಟ್ಟಯಾಂ ಜಿಲ್ಲೆಯಲ್ಲಿ ಕಟ್ಟಿಸುತ್ತಿರುವ ನಿರಾಮಯ ರೆಸಾರ್ಟ್ ಸಾರ್ವಜನಿಕ ಜಮೀನಿನ ಕಬಳಿಕೆ ಮಾಡಿದೆ ಎಂಬ ಆರೋಪವನ್ನು ಎದುರಿಸುತ್ತಿದೆ.

ವೆಂಬನಾಡ್ ಸರೋವರದ ತಟದಲ್ಲಿ ಕಟ್ಟುತ್ತಿರುವ ಈ ರೆಸಾರ್ಟ್ ತರಿಭೂಮಿ ಸಂರಕ್ಷಣಾ ಕಾಯ್ದೆಯನ್ನು ಉಲ್ಲಂಘಿಸಿದೆ ಎನ್ನಲಾಗಿದೆ. ಸುತ್ತಲಿನ ಪ್ರದೇಶದ ನಾಗರಿಕರು ಹೈಕೋರ್ಟಿಗೆ ಈ ಬಗ್ಗೆ ಅರ್ಜಿ ಸಲ್ಲಿಸಿದ್ದು ಹೈಕೋರ್ಟ್ ಕಬಳಿಕೆ ಆಗಿದೆಯೆಂದು ಮನಗಂಡು ಕಬಳಿಕೆ ತೆರವು ಮಾಡಿ ಜಮೀನನ್ನು ಪಂಚಾಯತಿಗೆ ಕೊಡಬೇಕೆಂದು ಕೊಟ್ಟಯಾಂ ತಹಸೀಲ್ದಾರರಿಗೆ ನಿರ್ದೇಶನವಿತ್ತಿದೆ.

ಅಲ್ಲದೆ ಲೇಬರ್ ಆಫೀಸರ್ ಸಮ್ಮುಖ ಒಪ್ಪಿಕೊಂಡ ಕೂಲಿಗಳನ್ನು ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೊಡುತ್ತಿಲ್ಲ ಎಂಬ ಆಪಾದನೆಯನ್ನೂ ಈ ರೆಸಾರ್ಟ್ ಎದುರಿಸುತ್ತಿದೆ. ಕಾರ್ಮಿಕರ ಪ್ರಕಾರ ಅದು ಸುಮಾರು 5ಲಕ್ಷ ರೂ. ಕೂಲಿ ಬಾಕಿ ಮಾಡಿಕೊಂಡಿದೆ.

ಒಪ್ಪಂದದ ಉಲ್ಲಂಘನೆಯ ವಿರುದ್ಧ ಕಾರ್ಮಿಕರು ಎಚ್ಚರಿಕೆ ಮುಷ್ಕರ ಮಾಡಿದರೆ, ಕೊಟ್ಟಾಯಂ ತಹಸೀಲ್ದಾರ್ ಕಚೇರಿ ಕಬಳಿಕೆಯನ್ನು ತೆರವು ಮಾಡಲು ಕ್ರಮ ಕೈಗೊಳ್ಳುವಲ್ಲಿ ವಿಳಂಬ ಮಾಡುತ್ತಿದೆ ಎಂದು ಡಿವೈಎಫ್‌ಐ ಕಾರ್ಯಕರ್ತರು ಮತಪ್ರದರ್ಶನ ನಡೆಸಿದ್ದಾರೆ.

ವೆಂಬನಾಡ್ ಸರೋವರ ದೇಶದ ಅತಿ ಉದ್ದದ ಸರೋವರ ಮತ್ತು ಕೇರಳದ ಅತಿ ದೊಡ್ಡ ತರಿ ಭೂಮಿ ಎನ್ನಲಾಗಿದೆ.ಇದನ್ನು ಅಂತರಾಷ್ಟ್ರೀಯ ಮಹತ್ವದ ತರಿ ಭೂಮಿ ಎಂದು ಪರಿಗಣಿಸಲಾಗಿದೆ. ಬಹುಶಃ ಇದು ರೆಸಾರ್ಟ್‌ದಾರರಿಗೆ ಇದರ ವಾಣಿಜ್ಯ ಮೌಲ್ಯವನ್ನು ಹೆಚ್ಚಿಸಿದೆ.

ರಾಜೀವ್ ಚಂದ್ರಶೇಖರ್ ಕೇಂದ್ರದ ಆಳುವ ಕೂಟದ ರಾಜ್ಯಸಭಾ ಸದಸ್ಯರಷ್ಟೇ ಅಲ್ಲ ಏಶ್ಯಾನೆಟ್ ಟಿವಿ ವಾಹಿನಿ ಕಂಪನಿಯ ಅಧ್ಯಕ್ಷರು ಮತ್ತು 'ದೇಶ ಉತ್ತರ ಕೇಳುತ್ತಿದೆ' ಎಂದು ಸದಾ ಬೊಬ್ಬಿಡುವ 'ರಿಪಬ್ಲಿಕ್ ಟಿವಿ'ಯ ಪ್ರಮುಖ ಪಾಲುದಾರರು ಕೂಡ ಎಂಬುದು ಗಮನಾರ್ಹ.

ದರ ಏರಿಸಿ 3 ಲಕ್ಷ ಪ್ರಯಾಣಿಕರನ್ನು ಕಳಕೊಂಡರೂ ಚಿಂತೆಯಿಲ್ಲ ಎನ್ನುವ ದಿಲ್ಲಿ ಮೆಟ್ರೊ

ವ್ಯಾಪಕವಾದ ವಿರೋಧಗಳನ್ನೂ ಲೆಕ್ಕಿಸದೆ ದೇಶದ ರಾಜಧಾನಿಯಲ್ಲಿನ ಜನಪ್ರಿಯ ಮೆಟ್ರೋದರಗಳಲ್ಲಿ ಕೇಂದ್ರ ಸರಕಾರ ಅಕ್ಟೋಬರ್‌ನಿಂದ ಭಾರೀ ಏರಿಕೆ ಮಾಡಿತ್ತು. ಆರು ತಿಂಗಳ ಅಂತರದಲ್ಲೇ ದರಗಳು ದುಪ್ಪಟ್ಟು, ಕೆಲವು ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಏರಿದವು. ಇದರಿಂದಾಗಿ ಇದ್ದಕ್ಕಿದ್ದಂತೆ ಇದರ ಜನ ಪ್ರಿಯತೆ ಕುಗ್ಗಿದೆ ಎಂದು ತಿಳಿದು ಬಂದಿದೆಯಂತೆ.

ಮಾಹಿತಿ ಹಕ್ಕಿನ ಅಡಿಯಲ್ಲಿ ಸಿಕ್ಕ ಉತ್ತರದ ಪ್ರಕಾರ ಅಕ್ಟೋಬರ್‌ನಲ್ಲಿ ಮೆಟ್ರೋ ಬಳಸುವವರ ಸಂಖ್ಯೆ ಹಿಂದಿನ ತಿಂಗಳ 27.4 ಲಕ್ಷದಿಂದ 24.2 ಲಕ್ಷಕ್ಕೆ, ಅಂದರೆ ಸುಮಾರು 11% ಇಳಿಯಿತು.

ದಿಲ್ಲಿ ಮೆಟ್ರೊ ರೈಲ್ ಕಾರ್ಪೊರೇಷನ್ ದರ ಏರಿಕೆಯನ್ನು ಸಮರ್ಥಿಸಿಕೊಂಡಿದೆ. ಹೆಚ್ಚಿನ ಖರ್ಚುಗಳನ್ನು ಸರಿ ದೂಗಿಸಲು ಇದು ಅಗತ್ಯ ಎಂದಿದೆ. ಆದರೆ ಸಾರ್ವಜನಿಕರು ಮೆಟ್ರೊ ಪ್ರಯಾಣ ಮಾಡದಷ್ಟು ದರ ಏರಿಸುವುದರಲ್ಲಿ ಏನು ಜಾಣತನವಿದೆ ಎಂದು ಹಲವರು ಪ್ರಶ್ನಿಸಿದ್ದಾರೆ.

ವಾಸ್ತವವಾಗಿ ಖರ್ಚುಗಳು ಹೆಚ್ಚಿರುವುದು ಮೆಟ್ರೊ ಓಡಿಸುವ ವೆಚ್ಚದಿಂದಾಗಿ ಅಲ್ಲ, ಬದಲಾಗಿ ಸರಕಾರವೇ ಹೇರಿರುವ, ಅನಗತ್ಯ ಖರ್ಚುಗಳಿಂದಾಗಿ ಎಂದೂ ಹೇಳಲಾಗುತ್ತಿದೆ.

ದರ ಏರಿಸಿದ್ದರಿಂದ ಪ್ರಯಾಣಿಕರ ಸಂಖ್ಯೆ ಕಡಿಮೆಯಾದ್ದಕ್ಕೆ ಮೆಟ್ರೋ ಕಾರ್ಪೊರೇಷನ್‌ಗೇನೂ ಚಿಂತೆಯಾಗಿಲ್ಲೆಂದು ಕಾರ್ಪೊರೇಷನ್‌ನ ಎಂ.ಡಿ. ಹೇಳಿರುವದಾಗಿ ವರದಿಯಾಗಿದೆ.

ಕಾ. ಐ.ಎಂ. ಕರಿಯಪ್ಪರವರಿಗೆ ಶ್ರದ್ಧಾಂಜಲಿ



ಕಳೆದ 20 ವರ್ಷಗಳಿಂದ ಸಿ.ಐ.ಟಿ.ಯು ಸಂಘಟನೆಯಲ್ಲಿ ಮುಖಂಡರಾಗಿ ಕಾರ್ಯನಿರ್ವಹಿಸುತ್ತಿದ್ದ ಕಾ. ಐ.ಎಂ.ಕರಿಯಪ್ಪರವರು ದಿನಾಂಕ 03 ನವೆಂಬರ್ 2017ರಂದು ಅನಾರೋಗ್ಯದಿಂದ ನಮ್ಮನ್ನಗಲಿದ್ದಾರೆ. ಬಾಟಾ ಕಂಪನಿಯಲ್ಲಿ ಕಾರ್ಮಿಕರಾಗಿ ಅಲ್ಲಿ ಕಾರ್ಮಿಕರ ಸಂಘ ಕಟ್ಟಿದ ಕಾರಣಕ್ಕಾಗಿ ಕೆಲಸ ಕಳೆದುಕೊಂಡಿದ್ದ ಅವರು ಬಾಟಾ ಕಂಪನಿಯ ಆಡಳಿತ ಮಂಡಳಿಯ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಸುಪ್ರೀಂ ಕೋರ್ಟ್‌ವರೆಗೂ ಕಾನೂನಾತ್ಮಕ ಹೋರಾಟ ನಡೆಸಿ ಮತ್ತೆ ಕೆಲಸ ಪಡೆದಿದ್ದರು. ಕೆಲಸ ಇಲ್ಲದ ಸಂಕಷ್ಟಮಯ ಪರಿಸ್ಥಿತಿಯಲ್ಲಿ ರಾಜಿ–ರಹಿತ ಹೋರಾಟ ನಡೆಸಿ ಮೌಲ್ಯಯುಕ್ತ ಜೀವನ ನಡೆಸಿದ ಧೀರೋದ್ಧಾತ ಹೋರಾಟಗಾರರಾಗಿದ್ದರು.

ರಾಜಗೋಪಾಲ ನಗರದ ವಾಸಿಯಾಗಿದ್ದ ಅವರು ಕರ್ನಾಟಕ ರಾಜ್ಯ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘಟನೆಯ ಬೆಂಗಳೂರು ಉತ್ತರ ವಲಯ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಬೆಂಗಳೂರು ಜಿಲ್ಲಾ ಖಜಾಂಚಿಯಾಗಿದ್ದರು. ಅಲ್ಲದೆ ಸಿಪಿಐ(ಎಂ) ಪಕ್ಷದ ಬೆಂಗಳೂರು ಉತ್ತರ ವಲಯ ಸಮಿತಿ ಸದಸ್ಯರಾಗಿ ಮತ್ತು ಪಕ್ಷದ ಪೀಣ್ಯ 2ನೇ ಹಂತದ ಶಾಖೆಯ ಕಾರ್ಯದರ್ಶಿಯಾಗಿ ಪಕ್ಷದ ಬೆಳವಣಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದರು. ಸಂಘಟನೆಯ, ಕಾರ್ಮಿಕರ ಬೆವರಿನ ಹಣವನ್ನು ಅತ್ಯಂತ ಜೋಪಾನವಾಗಿ ಕಾಪಾಡಿದ ಕೀರ್ತಿ ಅವರದು. ಇತ್ತೀಚೆಗೆ ತೀವ್ರ ಅನಾರೋಗ್ಯದಿಂದಾಗಿ ಅವರು ಪತ್ನಿ ಮತ್ತು ಇಬ್ಬರು ಮಕ್ಕಳು, ಅಪಾರ ಸಂಖ್ಯೆಯ ಸಂಗಾತಿಗಳು ಹಾಗೂ ಬಂಧುಗಳನ್ನು ಅಗಲಿರುತ್ತಾರೆ. ಅವರ ಈ ಸಾವು ನಮ್ಮ ಪಕ್ಷಕ್ಕೆ ಹಾಗೂ ಕಾರ್ಮಿಕ ಚಳುವಳಿಗೆ ಅಪಾರ ನಷ್ಟವನ್ನುಂಟು ಮಾಡಿದೆ.

ಕಾ. ಕರಿಯಪ್ಪರವರು ಸಮತಾವಾದದ ಸಿದ್ಧಾಂತಗಳಿಗೆ ಬದ್ಧರಾಗಿ ಸಿಪಿಐ(ಎಂ) ಪಕ್ಷಕ್ಕೆ ಹಾಗೂ ಕಾರ್ಮಿಕ ವರ್ಗಕ್ಕಾಗಿ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಅವರು ನಂಬಿದ ವಿಚಾರಗಳನ್ನು ಜನರ ಮಧ್ಯೆ ಕೊಂಡೊಯ್ಯಬೇಕಿದೆ. ಅವರು ನಡೆಸಿದ ಹೋರಾಟವನ್ನು ಇನ್ನಷ್ಟು ಬಲಿಷ್ಟವಾಗಿ ಕಟ್ಟಬೇಕಿದೆ. ಆದ್ದರಿಂದ ಅಗಲಿದ ಸಂಗಾತಿ ಕಾ. ಕರಿಯಪ್ಪರವರಿಗೆ ಶ್ರದ್ಧಾಂಜಲಿ ಸಭೆಯನ್ನು ದಿನಾಂಕ 18 ನವೆಂಬರ್ 2017 ರಂದು ಹೆಗ್ಗನಹಳ್ಳಿ ಕ್ರಾಸ್ ನಲ್ಲಿರುವ ಎ.ಆರ್.ಡಿ.ಯು ಕಛೇರಿಯಲ್ಲಿ ಏರ್ಪಡಿಸಲಾಗಿತ್ತು.

– ಹುಳ್ಳಿ ಉಮೇಶ್

ಲಾಲ್ ಸಲಾಂ ! ಕಾಮ್ರೇಡ್ ಮಶಾಲ್ದಿ !!



ಪರಶುರಾಮ ಮಶಾಲ್ದಿಯವರು ಉತ್ತರ ಕನ್ನಡದಲ್ಲಿ ಕಮ್ಯುನಿಸ್ಟ್ ಪಕ್ಷ ಕಟ್ಟಿದವರಲ್ಲಿ ಒಬ್ಬರು. ಜಾತ್ರೆಯಲ್ಲಿ ಫೋಟೋಕ್ಕೆ ಫ್ರೇಮ್ ಹಾಕುತ್ತಾ, ಉಳಿದ ದಿನದಲ್ಲಿ ಬಿಡ್ಕಿಬೈಲ್ ಪಕ್ಕ ಒಂದು ಸೈಕಲ್ ರಿಪೇರಿ ಅಂಗಡಿ ಇಟ್ಟುಕೊಂಡು ಬದುಕು ನಡೆಸುತ್ತಿದ್ದರು. ರೈತ ಹೋರಾಟ, ಕಾರ್ಮಿಕ ಹೋರಾಟ, ಕಮ್ಯುನಿಸ್ಟ್ ಪಕ್ಷದ ಹೋರಾಟಕ್ಕೆ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ತನ್ನ ಬೆನ್ನಿಗೆ ಅಂಟಿಕೊಂಡ ಬಡತನದ ಬಗ್ಗೆ ಎಂದೂ ಗೊಣಗದ ಮಶಾಲ್ದಿಯವರು ಶಿರಸಿಯ ಬಡವರ, ಕಾರ್ಮಿಕರ ಬಡತನ ಹೋಗಲಾಡಿಸಿ ಅವರ ಬದುಕನ್ನು ಎತ್ತರಿಸಲು ಪ್ರತಿಭಟನೆಯ ದನಿ ಮೊಳಗಿಸಿದವರು. ಎಂ ಎಸ್. ಧಾರೇಶ್ವರ, ಮಂಜುನಾಥ ಪುಲ್ಕರ್, ಬಂಗಾರೇಶ್ವರ ಗೌಡ ಅವರೊಂದಿಗೆ ನಿರಂತರವಾಗಿ 60–70 ವರ್ಷಗಳ ಕಾಲ ಹೋರಾಟ ನಿರತರಾಗಿದ್ದರು.

16–3–1927 ರಲ್ಲಿ ಜನಿಸಿದ ಮಶಾಲ್ದಿಯವರು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಭಾರತದ ಕೊಂಡಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯ ತ್ಯಾಗ ಬಲಿದಾನದಿಂದ ಸ್ಫೂರ್ತಿ ಪಡೆದ ಅವರು ಅದರ ನಿಜ ಆಶಯಗಳು ಭಾರತದಲ್ಲಿ ಜಾರಿ ಆಗಬೇಕಾದರೆ ಕಮ್ಯುನಿಸ್ಟ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ನಂಬಿ ಬದುಕಿನ ಕೊನೆಯವರೆಗೂ ಅದೇ ಪಕ್ಷದಲ್ಲಿ ಸದಸ್ಯರಾಗಿ, ಶಿರಸಿ ಶಾಖೆಯ ಕಾರ್ಯದರ್ಶಿಯಾಗಿ, ಸಿಪಿಐ(ಎಂ) ಜಿಲ್ಲಾ ಸಮಿತಿಯ ಸದಸ್ಯರಾಗಿ, ಕರ್ನಾಟಕ ಪ್ರಾಂತ ರೈತ ಸಂಘದ ವಿವಿಧ ಸಮಿತಿಗಳ ಪದಾಧಿಕಾರಿಗಳಾಗಿ ಹೋರಾಟವನ್ನು ಮುನ್ನಡೆಸಿದ್ದಾರೆ. ಕೈಯಲ್ಲಿ ನೂರು ರೂಪಾಯಿ ಇದ್ದರೆ ಮನೆಗೆ ಮೀನು ಒಯ್ಯುವ ಬದಲು ಎಂ ಎಸ್. ಧಾರೇಶ್ವರ ಅವರೊಂದಿಗೆ ಸೇರಿ ಒಂದು ಕರಪತ್ರ ಹಾಕಿ ಹೋರಾಟ ಮಾಡುವವರೆ. ಚಹಾಕ್ಕೆ ಒಂದು ಪೈಸೆ ಹೆಚ್ಚಾದಾಗ ಶಿರಸಿಯಲ್ಲಿ ನಡೆದ ಚಾರಿತ್ರಿಕ ಹೋರಾಟದಲ್ಲಿ ಮುಂದಾಳುಗಳಾಗಿ ಇವರು ಪಾಲ್ಗೊಂಡಿದ್ದರು. ಕಾಡಿನಿಂದ ಕಟ್ಟಿಗೆ ತರಲು ಅರಣ್ಯ ಇಲಾಖೆಯವರು ತಡೆ ಹಾಕಿದಾಗ ನಡೆದ ಚಕ್ಕಡಿ ಗಾಡಿ ಚಳುವಳಿಯಲ್ಲಿ, ಅರಣ್ಯ ಭೂಮಿ ಸಕ್ರಮ ಹೋರಾಟದಲ್ಲಿ, ಉಳುವವನೆ ಒಡೆಯನಾಗಬೇಕೆಂಬ ಭೂಸುಧಾರಣಾ ಕಾಯ್ದೆ ಜಾರಿಗಾಗಿ ನಡೆದ ಹೋರಾಟದಲ್ಲಿ ಇವರು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು.

ಕಾ. ಮಶಾಲ್ದಿ ಯಾವುದೇ ಆರ್ಥಿಕ ಫಲಾಪೇಕ್ಷೆ ಇಲ್ಲದೇ ಆ ಕಷ್ಟದ ದಿನಗಳಲ್ಲಿ ದುಡಿದು ಬಂಡವಾಳ ಶಾಹಿ ರಾಜಕಾರಣಕ್ಕೆ ಸೆಡ್ಡು ಹೊಡೆದವರು. "ನಾನು ಗೋವಾ ವಿಮೋಚನಾ ತಂಡದ ಈ ಭಾಗದ ನಾಯಕತ್ವ ವಹಿಸಿದೆ. ಅಂದು ಪೋರ್ಚುಗೀಸ್ ಅಧೀನದಿಂದ ಗೋವಾ ವಿಮೋಚನೆಗೆ ಹೊರಡಲು ಅನೇಕರು ಹೆದರುತ್ತಿದ್ದರು. ಆದರೆ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾದ ನಾವು ತಂಡೋಪತಂಡವಾಗಿ ಗೋವಾ ಚಲೋ ನಡೆಸಿದೆವು. ಅದಾಗಲೇ ಕಾರವಾರದಿಂದ ನಮ್ಮ ಹಿರಿಯ ಕಮ್ಯುನಿಸ್ಟ್ ಸೈಯದ್ ಹೈದರ್ ಮತ್ತು ಹಮೀದ್ ಮಾಸ್ತರ್ ಅನೇಕರು ಈ ಚಳುವಳಿಯ ಭಾಗವಾಗಿದ್ದರು. ಉಳಗಾದ ಜೋಗು ಪುರ್ಸು ನಾಯ್ಕರು ಮತ್ತು ಸಂಗಾತಿಗಳು ಗೋವಾದಲ್ಲಿ ಪೋರ್ಚುಗೀಸರ ಗುಂಡಿನ ಮತ್ತು ಲಾಠಿಯ ದಾಳಿಗೆ ಅಂಗಾಂಗ ಕಳಕೊಂಡಿದ್ದರು. ಆದರೂ ನಾವು ಕಮ್ಯುನಿಸ್ಟ್ ಹೋರಾಟಗಾರರು ಮಾತ್ರ ಅಂಜದೆ ಅಳುಕದೆ ದೇಶದ ನಾನಾ ಭಾಗದಿಂದ ಹೊರಟೆವು. ಮೊದಲ ಬಾರಿ ನಮಗೆ ಯಲ್ಲಾಪುರ ದಾಟಿದ ನಂತರ ಇಲ್ಲಿಯ ಪೋಲಿಸರು ಹೋಗಗೊಡಲಿಲ್ಲ. ಕಣ್ತಪ್ಪಿಸಿ ತೆರಳಿದೆವು. ಆದರೆ ನಮ್ಮ ಅನೇಕ ಸಂಗಾತಿಗಳಿಗೆ ತಲೆಗೆ ಮೈಗೆ ಡಾಂಬರು ಮೆತ್ತಿದರು. ಕರಾವಳಿಯ ಬಿಸಿಲಿಗೆ ಆ ಉರಿ ತಡಕೊಳ್ಳಲಾಗಿಲ್ಲ." ಎಂದು ಅವರು ತಮ್ಮ ಹೋರಾಟದ ಅಂದಿನ ಕಥೆ ಹಂಚಿಕೊಳ್ಳುತ್ತಿದ್ದರು.

ಹಲವು ಬಾರಿ ಪೋಲೀಸರ ಅತಿಥಿಗಳಾಗಿದ್ದರು. ಧಾರೇಶ್ವರ ಅವರೊಂದಿಗೆ ಇಲ್ಲಿ ಕಟ್ಟಿದ ಕೆಂಬಾವುಟದ ಚಳುವಳಿ ಎಷ್ಟೊಂದು ಪ್ರಬಲವಾಗಿತ್ತೆಂದರೆ ಹಿರಿಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯಂತವರೂ ಜಿಲ್ಲೆಗೆ ಬರುವಾಗ ಇವರನ್ನು ಬಂಧಿಸಿ ಬರುವ ಕಾಲವೊಂದಿತ್ತು. ಇವರ ಹೋರಾಟ ಜಿಲ್ಲೆಗೆ ಮಾತ್ರ ಸೀಮಿತವಾಗಿರಲಿಲ್ಲ. ಎಲ್ಲಾ ಧರ್ಮ, ಜಾತಿಯ, ಸಮುದಾಯದೊಂದಿಗೆ ಕೌಟುಂಬಿಕ ಸಂಬಂಧ ಇಟ್ಟುಕೊಂಡಿದ್ದ ಇವರು ಬಾಬ್ರಿ ಮಸೀದಿ ಧ್ವಂಸವಾದಾಗ ಭುಗಿಲೆದ್ದ ಕೋಮು ಸಂಘರ್ಷದ ಸಂದರ್ಭದಲ್ಲಿ ಕೋಮು ಸೌಹಾರ್ದತೆಗಾಗಿ ಹಗಲಿರುಳೂ ಶ್ರಮಿಸಿದರು. ಹೊಸ ಆರ್ಥಿಕ ನೀತಿ ಜಾರಿಗೊಂಡಾಗಲೂ ಅದರ ವಿರುದ್ಧದ ಚಳುವಳಿಯಲ್ಲಿ ಅವರ ಕೊಡುಗೆ ಇತ್ತು.

ಸ್ವತಃ ಹೆಚ್ಚಿನ ಓದು ಇಲ್ಲದಿದ್ದರೂ ಎಡಪಂಥೀಯ ಸಾಹಿತ್ಯದ ಓದಿಗೆ ಅವರು ವಿದ್ಯಾರ್ಥಿ ಯುವಜನರನ್ನು ಪ್ರೇರೇಪಿಸುತ್ತಿದ್ದರು. ಚಿಂತನ ಉತ್ತರ ಕನ್ನಡದ ಸ್ನೇಹಿತರು ಕಿರುಪುಸ್ತಕ ಯೋಜನೆ ಪ್ರಾರಂಭಿಸಿದಾಗ ಬಸ್ ಹತ್ತಿ ಪುಸ್ತಕ ಮಾರಾಟ ಮಾಡುವಲ್ಲಿಯೂ ಸ್ವತಃ ಪಾಲ್ಗೊಂಡಿದ್ದರು. ಮತ್ತು ಕೊನೆಯವರೆಗೂ ಅದಕ್ಕೆ ಒತ್ತಾಸೆಯಾಗಿ ನಿಂತಿದ್ದರು.

ವಿದ್ಯಾರ್ಥಿ ಚಳುವಳಿ, ರೈತ ಕೂಲಿಕಾರ ಚಳುವಳಿ, ಕಾರ್ಮಿಕ ಚಳುವಳಿ...ಹೀಗೆ ಹಲವು ಚಳುವಳಿ ಬೆಳೆಸಲು ಜೀವವನ್ನೇ ಮುಡಿಪಾಗಿಟ್ಟ ಮಶಾಲ್ದಿಯವರ 25–11–2017 ರಂದು ಮಧ್ಯಾಹ್ನ ನಮ್ಮನ್ನಗಲಿದ್ದಾರೆ. ಅವರಿಗೆ ಚಳುವಳಿಯ ಎಲ್ಲಾ ಸಂಗಾತಿಗಳ ಪರವಾಗಿ ನಮನ. ಅವರ ಕನಸನ್ನು ನನಸುಮಾಡುವ ಹೊಣೆ ನಮ್ಮ ಮೇಲಿದೆ.

– ಯಮುನಾ ಗಾಂವ್ಕರ್

ಬಲಿಷ್ಟ ಜನಪರ ಹೋರಾಟ ಕಟ್ಟಲು ಹೊಸ ಉತ್ಸಾಹ ತುಂಬಿದ....... ಪುಟ 16 ರಿಂದ

ಕಾರ್ಯ ವಿಧಾನಗಳನ್ನು ಎತ್ತಿ ಹಿಡಿಯುತ್ತದೆ ಎಂದರು. ಕೇಂದ್ರದಲ್ಲಿನ ಸರ್ಕಾರ ಅಂಬಾನಿ, ಅದಾನಿ ಪರ ನೀತಿಗಳನ್ನು ಅನುಸರಿಸುತ್ತಿದೆ. ಕಳೆದ 2015–16 ರಲ್ಲಿಯೇ ಅಂಬಾನಿ ಆಸ್ತಿಯು 9000 ಕೋಟಿ ರೂ. ಗಳಷ್ಟು ಹೆಚ್ಚು ಲಾಭ ಮಾಡಿರುವುದೆ ಇದಕ್ಕೆ ಉದಾಹರಣೆ ಎಂದರು. ಈ ಹಿಂದೆ 90 ರ ದಶಕಕ್ಕೆ ಮುನ್ನಾ, ರೂ. 100 ಬಂಡವಾಳದಿಂದ ಬರುವ ಲಾಭದಲ್ಲಿ ರೂ. 33 ಕಾರ್ಮಿಕರಿಗೆ ಕೂಲಿ ಸಿಗುತ್ತಿತ್ತು. ಅದು ಈಗ ರೂ 11 ಕ್ಕೆ ಇಳಿದಿದೆ. ಮಾಲಿಕರಿಗೆ ರೂ. 12 ಲಾಭ ಸಿಗುತ್ತಿದದ್ದು, 45 ಕ್ಕೆ ಏರಿದೆ. ಸರ್ಕಾರಕ್ಕೆ ಹೋಗುತ್ತಿದ್ದರೂ. 55 ಇದೀಗ ರೂ. 45 ಕ್ಕೆ ಇಳಿದಿದೆ. ಈ ವೇತನ ಹಂಚಿಕೆಯ ತಾರತಮ್ಯವನ್ನು ತೊಡೆದು ಹಾಕಲು ‘ಕೆಂಪು ಬಾವುಟದ ಹೋರಾಟಕ್ಕೆ ಮಾತ್ರ ಸಾಧ್ಯವೆಂದರು. ಕಾಂ. ಮೀನಾಕ್ಷಿ ಸುಂದರಂ, ಕಾಂ. ಕೆ.ಎನ್. ಉಮೇಶ್, ಕಾಂ ಆರ್. ಶ್ರೀನಿವಾಸ್, ಕಾ. ಕೆ.ಆರ್. ವೆಂಕಟೇಶಗೌಡ, ಕಾಂ. ಗೌರಮ್ಮ ಮತ್ತು ಕಾಂ. ಹೆಚ್.ಎನ್. ಗೋಪಾಲಗೌಡ ಅವರುಗಳೂ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕಾಂ. ಎಂ. ನಂಜೇಗೌಡರು ವಂದಾನಾರ್ಪನೆ ಮಾಡುವ ಮೂಲಕ ಬಹಿರಂಗ ಸಭೆರಾತ್ರಿ 8 ಕ್ಕೆ ಮುಗಿಯಿತು. ಈ ಮಧ್ಯೆ ಸಾಸ್ ಮಾಸ್ ಕಂಪನಿಯ ಕಾರ್ಮಿಕರು ಕ್ರಾಂತಿಗೀತೆ ಹಾಡಿದರು. ಒಟ್ಟಾರೆಯಾಗಿ ಬಹಿರಂಗ ಸಭೆ ಸಮ್ಮೇಳನಕ್ಕೆ ಸ್ಫೂರ್ತಿ ತಂದಿತ್ತು. ಎರಡನೇ ಬೆಳಿಗ್ಗೆ 10 ಗಂಟೆಗೆ ಕಾ. ಹೆಚ್.ಎನ್. ಗೋಪಾಲಗೌಡರಿಂದ ಧ್ವಜಾರೋಹಣ ನೆರವೇರಿತು. ನೂರಾರು ಕಾರ್ಮಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಂತರ ಹುತಾತ್ಮರ ಸ್ತಂಭಕ್ಕೆ ಗೌರವ ಪೂರ್ಣ ನಮನ ಸಲ್ಲಿಸಿ ಪ್ರತಿನಿಧಿಗಳ ಅಧಿವೇಶನಕ್ಕೆ ನಡೆಯುವ ಕಾಂ. ಓ.ವಿ. ಕೃಷ್ಣಮೂರ್ತಿ ವೇದಿಕೆಯ ಸಭಾಂಗಣಕ್ಕೆ ಮುನ್ನಡೆದರು.

ಪ್ರತಿನಿಧಿ ಸಭೆ

ಕಾಂ. ವಿಜೆಕೆ ನಾಯರ್‌ರವರು ಪ್ರತಿನಿಧಿಗಳ ಅಧಿವೇಶನವನ್ನೂ ಉದ್ಘಾಟಿಸಿದರು. ನಂತರ ಸುಮಾರು 24 ಹಿರಿಯ ಸಂಗಾತಿಗಳಿಗೆ ಗೌರವ ಪೂರ್ಣವಾಗಿ ಸನ್ಮಾನಿಸಲಾಯಿತು.

ಕಾಂ. ಆರ್. ಶ್ರೀನಿವಾಸ್‌ರವರು 136 ಪುಟಗಳ ಕರಡು ವರದಿಯನ್ನು ಮಂಡಿಸಿದರು. ವರದಿಯು ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದ ವಿದ್ಯಮಾನಗಳನ್ನು ವಿಮರ್ಶಿಸಿತ್ತು. ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಚರ್ಚಿಸಿತ್ತು. ಹಾಗೆಯೇ, ಸಾಮೂಹಿಕ ಸಂಘಟನೆಗಳ ಚಟುವಟಿಕೆಗಳು, ಪಕ್ಷದ ಸಂಘಟನೆ ಹೀಗೆ ಏಳು ಬಾಗಗಲಾಗಿ ವಿಂಗಡಿಸಿ ಕಳೆದ ಮೂರು ವರ್ಷಗಳಲ್ಲಿನ ನಮ್ಮ ಪಕ್ಷದ ಪ್ರಭಾವ ವಿಸ್ತರಣೆ, ಕುಸಿತಗಳ ಕುರಿತಂತೆ, ಹಾಗೆಯೇ ನಮ್ಮ ಶಾಖೆಗಳ ಮತ್ತು ವಲಯ ಸಮಿತಿಗಳ ಕಾರ್ಯ ವೈಖರಿ ಕುರಿತಂತೆ ಸ್ವಯಂ ಟೀಕೆಗಳನ್ನು ಒಳಗೊಂಡಂತೆ ಸುದೀರ್ಘವಾಗಿ ಚರ್ಚಿಸಲಾಗಿತು.

ಆ ನಂತರ ಇದರ ಮೇಲೆ 26 ಪ್ರತಿನಿಧಿಗಳು ಚರ್ಚಿಸಿದರು. ಅದರಲ್ಲಿ ಮೂರು ಮಂದಿ ಮಹಿಳೆಯರು ಭಾಗವಹಿಸಿದ್ದರು. ಚರ್ಚೆಯ ಗುಣಮಟ್ಟ ಸುಧಾರಿಸಿತ್ತು. ಸೈದ್ಧಾಂತಿಕವಾಗಿ ಉತ್ತಮವಾಗಿತ್ತು.

ಆ ನಂತರ ಕಾರ್ಯದರ್ಶಿಯವರು ಉತ್ತರ ನೀಡಿದ ನಂತರ ವರದಿಯು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಸಮ್ಮೇಳನದಲ್ಲಿ ಸುಮಾರು 20 ನಿರ್ಣಯಗಳನ್ನು ಮಂಡಿಸಿ, ಹಲವು ತಿದ್ದುಪಡಿಗಳ ಮೂಲಕ ಅಂಗೀಕಾರ ಮಾಡಲಾಯಿತು.

ಸಮ್ಮೇಳನವು 16 ಸದಸ್ಯರ ಹೊಸ ಜಿಲ್ಲಾ ಸಮಿತಿಯನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಯಿತು.

ಕಾಂ. ಆರ್. ಶ್ರೀನಿವಾಸ್‌ರವರು ಕಾರ್ಯದರ್ಶಿಯಾಗಿ ಒಮ್ಮತದಿಂದ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕಾಂ. ಹೆಚ್. ಎನ್. ಗೋಪಾಲಗೌಡ, ಕಾಂ. ಗೋಪಾಲಕೃಷ್ಣ ಅರಳಹಳ್ಳಿ, ಕಾಂ. ಗೌರಮ್ಮ, ಕಾಂ. ಲೀಲಾವತಿ, ಪ್ರತಾಪ್‌ಸಿಂಹ ಹಾಗೂ ಕಾಂ. ಎನ್. ನಾಗರಾಜುರವರು, ಕಾಂ. ರತ್ನಾಕರ್ ಶೆಣೈ, ಕಾಂ. ಹವಲ್ದಾರ್, ಕಾಂ. ರುದ್ರಮೂರ್ತಿ, ಕಾಂ. ಕೆ. ಗೋಪಾಲ್, ಕಾಂ. ವೀರಮಣಿ, ಕಾಂ. ನಾರಾಯಣಸ್ವಾಮಿ, ಕಾಂ. ನಿತಿನ್, ಕಾಂ. ಪಿ. ಮುನಿರಾಜು, ಕಾಂ. ಹುಳ್ಳಿ ಉಮೇಶ್ ಜಿಲ್ಲಾ ಸಮಿತಿಯ ಸದಸ್ಯರುಗಳು.

ಮೂಡಬಿದರೆಯಲ್ಲಿ ಜನವರಿ 2 ರಿಂದ 5 ರ ವರೆವಿಗೂ ನಡೆಯುವ ರಾಜ್ಯ ಸಮ್ಮೇಳನಕ್ಕೆ 5 ಸಂಗಾತಿಗಳು ಪ್ರತಿನಿಧಿಗಳಾಗಿ ಆಯ್ಕೆಗೊಂಡರು. ಕಾಂ. ಹೆಚ್.ಎನ್. ಗೋಪಾಲಗೌಡ, ಕಾಂ. ಗೌರಮ್ಮ, ಕಾಂ. ಎನ್. ನಾಗರಾಜ, ಕಾಂ. ಪ್ರತಾಪ್‌ಸಿಂಹ ಹಾಗೂ ಕಾಂ. ರುದ್ರಮೂರ್ತಿ.

ಪೂರ್ವವಲಯದ ಆಶ್ರಯದಲ್ಲಿ ಜರುಗಿದ 22ನೇ ಜಿಲ್ಲಾ ಸಮ್ಮೇಳನವು, ಭಾಗವಹಿಸಿದ್ದ ಪ್ರತಿ ನಿಧಿಗಳಲ್ಲಿ, ಹೊಸ ಉತ್ಸಾಹ ಹುರುಪನ್ನು ತುಂಬುವಲ್ಲಿ ಯಶಸ್ವಿಯಾಗಿತ್ತು. ಒಟ್ಟಾರೆಯಾಗಿ ಈ ಸಮ್ಮೇಳನ ಎಲ್ಲರ ನೆನಪಿನಲ್ಲಿ ಹಚ್ಚ–ಹಸಿರಾಗಿ ಉಳಿಯುವುದೆಂಬ ಭಾವನೆಗಳೊಂದಿಗೆ ಮುಕ್ತಾಯವಾಯಿತು. ●

JANASHAKTHI KANNADA VARA PATRIKE December 04-10, 2017 Price: Rs. 10/- Date of Publication: 01 December 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ವರದಿ – ನಾಗರಾಜ ನಂಜುಂಡಯ್ಯ





ಬಲಿಷ್ಟ ಜನಪರ ಹೋರಾಟ ಕಟ್ಟಲು ಹೊಸ ಉತ್ಸಾಹ ತುಂಬಿದ

22ನೇ ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ



ಆರ್.ಎಸ್.ಎಸ್. ನ ಅಂಗ ಪಕ್ಷವಾದ, ಎನ್‌ಕೌಂಟರಿಸ್ಟ್ ಅಮಿತ್ ಶಾ ಅಧ್ಯಕ್ಷತೆಯ, ಬಿಜೆಪಿ ನೇತೃತ್ವದ ಪ್ರಧಾನಿ ನರೇಂದ್ರ ಮೋದಿ ಆಡಳಿತದ ಕೇಂದ್ರ ಸರ್ಕಾರದ ಜನ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ, ಕಾರ್ಮಿಕ ವರ್ಗದ ವಿರೋಧಿ, ನೀತಿಗಳ ವಿರುದ್ಧ, ಹಾಗೆಯೇ, ರಾಜ್ಯದ ಕಾಂಗ್ರೆಸ್ ಸರ್ಕಾರದ ಕಾರ್ಮಿಕ ಹಾಗೂ ಜನ ವಿರೋಧಿ ನೀತಿಗಳ ವಿರುದ್ಧ ಬಲಿಷ್ಟ ಜನಪರ ಹೋರಾಟ ಕಟ್ಟಲು ಬೆಂಗಳೂರು ಉತ್ತರ ಜಿಲ್ಲೆಯ 22ನೇ ಸಮ್ಮೇಳನ, ಭಾಗವಹಿಸಿದ್ದ ಪ್ರತಿನಿಧಿಗಳಿಗೆ ಹೊಸ ಉತ್ಸಾಹ ಮತ್ತು ಹುರುಪನ್ನು ತುಂಬುವಲ್ಲಿ ಯಶಸ್ವಿಯಾಗಿತ್ತು.

ನಿಗದಿ ಪಡಿಸಿದ್ದ ಮೂರು ದಿನಗಳ ಕಾಲ ಅಂದರೆ, ನವೆಂಬರ್ 24 ರಿಂದ 26 ರ ವರೆವಿಗೂ 'ಪೂರ್ವ ವಲಯ ಸಮಿತಿಯ' ಆಶ್ರಯದಲ್ಲಿ ಉದಯನಗರದಲ್ಲಿರುವ ಸೂರಿ ಭವನದಲ್ಲಿ ಯಶಸ್ವಿಯಾಗಿ ಜರುಗಿತು.

ನವೆಂಬರ್ 24 ರಂದು ಕೆ.ಆರ್. ಪುರ ಪ್ರದೇಶದಲ್ಲಿ ಬಹಿರಂಗ ಸಭೆಯ ಮೂಲಕ ವಿದ್ಯುಕ್ತವಾಗಿ ಆರಂಭಗೊಂಡಿತು. ಪೂರ್ವ ವಲಯ, ರಾಜಾಜಿನಗರ ವಲಯ ಹಾಗೂ ಉತ್ತರ ವಲಯ ಸಮಿತಿಗಳು ಈ ಜಿಲ್ಲಾ ಸಮಿತಿಯ ವ್ಯಾಪ್ತಿಯೊಳಗೆ ಹೊಂದಿಕೊಂಡಿವೆ. ಒಟ್ಟು 26 ಪಕ್ಷದ ಶಾಖೆಗಳನ್ನು ಒಳಗೊಂಡಿರುವ ಜಿಲ್ಲಾ ಸಮಿತಿಯಲ್ಲಿ 240 ಪಕ್ಷದ ಸದಸ್ಯರು. ಇವರಲ್ಲಿ 25 ಕ್ಕೂ ಹೆಚ್ಚು ಪೂರ್ಣಕಾಲದ ಸದಸ್ಯರು. ಉಳಿದವರು 10,000 ಸಾವಿರಕ್ಕೂ ಹೆಚ್ಚು ಸದಸ್ಯರಿರುವ ಕಾರ್ಮಿಕ ರಂಗ, 3500 ಕ್ಕೂ ಹೆಚ್ಚು ಸದಸ್ಯತ್ವ ಇರುವ ಮಹಿಳಾ ರಂಗ ಹಾಗೂ 5000 ಸಾವಿರಕ್ಕೂ ಹೆಚ್ಚು ಸದಸ್ಯರಿರುವ ವಿದ್ಯಾರ್ಥಿ ರಂಗ, ಯುವರಂಗ, ವಿಮೆ, ಬ್ಯಾಂಕ್ ಹಾಗೂ ವಕೀಲರ ರಂಗದಲ್ಲಿ ಕೆಲಸ ಮಾಡುವ ಸಂಗಾತಿಗಳು. ಇದಲ್ಲದೆ ಸಾವಿರಾರು ಹಿತೈಷಿಗಳನ್ನು ಒಳಗೊಂಡಿರುವ ಬೆಂಗಳೂರಿನ ಉತ್ತರಜಿಲ್ಲಾ ಸಮಿತಿಯ 22ನೇ ಜಿಲ್ಲಾ ಸಮ್ಮೇಳನವು 'ಒಂದು ಬಲಿಷ್ಟ' ಪಕ್ಷದ ಸಂಘಟನೆಗಳನ್ನು ಕಟ್ಟುವ ನಿಟ್ಟಿನಲ್ಲಿ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡು, ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರಿನಲ್ಲಿ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ನಿಟ್ಟಿನಲ್ಲಿ ಹಲವು ಮಹತ್ವಪೂರ್ಣ ಕಾರ್ಯಯೋಜನೆಯನ್ನೂ ರೂಪಿಸುವಲ್ಲಿ ಒಂದು ಯಶಸ್ವಿಯಾದ ಸಮ್ಮೇಳನವಾಗಿತ್ತು.

ಆಕರ್ಷಕ ಮೆರವಣಿಗೆ

ಸಮ್ಮೇಳನ ನಡೆಯುವ ಸುತ್ತಾ-ಮುತ್ತಾ ರಸ್ತೆಯ ಎರಡು ಪಕ್ಕಗಳಲ್ಲಿ ಕೆಂಪು ಬಾವುಟಗಳು, ತಳಿರು-ತೋರಣಗಳು(ಬಂಟಿಂಗ್ಸ್) ಗಳಿಂದ ಕೆಂಪು-ವರ್ಣರಂಜಿತವಾಗಿ ಅಲಂಕರಿಸಲಾಗಿತ್ತು. ಸುಮಾರು ನೂರಕ್ಕೂ ಹೆಚ್ಚು ಫ್ಲೆಕ್ಸ್‌ಗಳು – ಕಮ್ಯೂನಿಸ್ಟ್ ಚಳುವಳಿಯ ಧೀಮಂತ ನಾಯಕರುಗಳ ಸಂದೇಶಗಳನ್ನು ಹೊತ್ತ ಈ ಫ್ಲೆಕ್ಸ್‌ಗಳು ಪ್ರದೇಶದ ಜನಸಾಮಾನ್ಯರನ್ನು ಆಕರ್ಷಿಸಿ ಯಶಸ್ವಿ ಪ್ರಚಾರವಾಗಿತ್ತು. ಅದರಲ್ಲಿಯೂ ಪ್ರಮುಖವಾಗಿ ಬಹಿರಂಗ ಸಭೆ ನಡೆದ ಭಾಗವಾದ ಕೆ.ಆರ್. ಪುರಂ ಪ್ರದೇಶದಲ್ಲಿ ಸಮ್ಮೇಳನ ನಡೆದ ಉದಯ ನಗರದ ಸೂರಿಭವನದ ಸುತ್ತ ಮುತ್ತಲಿನ ರಸ್ತೆಗಳ ಎರಡು ಕಡೆ ಕೆಂಪು ಬಂಟಿಂಗ್ಸ್ ಆ ಪ್ರದೇಶದ ಜನರನ್ನು ನಿಬ್ಬೆರಗುಗೊಳಿಸಿತ್ತು. ಚನ್ನಸಂಧ್ರ, ಕಸ್ತೂರಿ ನಗರ, ಹೂಡಿ, ಮಹದೇವಪುರ ಪ್ರದೇಶಗಳಲ್ಲಿಯೂ ಫ್ಲೆಕ್ಸ್ – ಬ್ಯಾನರ್‌ಗಳು ಸಮ್ಮೇಳನದ ಸಂದೇಶಗಳನ್ನು ಸಾರಿದವು.

ಪ್ರಮುಖವಾಗಿ ಟಿನ್‌ಫ್ಯಾಕ್ಟರಿ ಬಳಿಯಿರುವ ಮೇಲು ಸೇತುವೆಯ ಬಳಿ 130*8 ಅಡಿಯ ನಮ್ಮ ಕಮ್ಯೂನಿಸ್ಟ್ ಚಳುವಳಿ ಕಟ್ಟಿ ಬೆಳೆಸಲು ತ್ಯಾಗ ಬಲಿದಾನ ಮಾಡಿದ ಮುತ್ಸದ್ಧಿಗಳ ಭಾವ ಚಿತ್ರಗಳ ಬ್ಯಾನರ್ ವಿಪರೀತವಾದ ಟ್ರಾಫಿಕ್ ನಡುವೆಯೂ ನಮ್ಮ ಪ್ರಚಾರಕ್ಕೆ ಮೆರುಗನ್ನು ತಂದುಕೊಟ್ಟಿತು.

ಈ ಹಿಂದೆ, ವರ್ತೂರು ವಿಧಾನಸಭಾ ಕ್ಷೇತ್ರದಿಂದ ಕಾಂ. ಎಸ್. ಸೂರ್ಯನಾರಾಯಣರಾವ್‌ರವರನ್ನು ಸಿಪಿಐ(ಎಂ) ಪಕ್ಷದಿಂದ ಎಂ.ಎಲ್.ಎ. ಆಗಿ ಆರಿಸಿ ಕಳುಹಿಸಿದ್ದ, ಆ ದಿನಗಳ ನೆನಪುಗಳನ್ನು ಪುನಃ ಮರುಕಳಿಸುವಂತ ವಾತಾವರಣ ಸೃಷ್ಟಿಸಿದಂತಿತ್ತು.

ಕಾರ್ಲ್ ಮಾರ್ಕ್ಸ್-ಲೆನಿನ್ ತತ್ವವನ್ನು ಎತ್ತಿ ಹಿಡಿದ ಕೆಂಪು ಬಾವುಟಗಳನ್ನು ಹಿಡಿದು 800 ಕ್ಕೂ ಹೆಚ್ಚು ಕಾರ್ಮಿಕರು, ವಿದ್ಯಾರ್ಥಿ-ಯುವಜನರು, ಮಹಿಳೆಯರು ಕೆಂಪು ಸಮವಸ್ತ್ರಗಳನ್ನು ತೊಟ್ಟು, ಶಿಸ್ತಿನಿಂದ ಅಂದು ಸಂಜೆ 4 ಕ್ಕೆ ಕೆ.ಆರ್. ಪುರಂ ಗಣೇಶ್ ದೇವಸ್ಥಾನದ ಒಂದು ಮಗ್ಗಲಿನಲ್ಲಿ ಜಮಾಯಿಸಿ ಸಾಲಾಗಿ ನಿಂತು ಮೆರವಣಿಗೆಯಲ್ಲಿ ಭಾಗವಹಿಸಲು ಬದ್ಧತೆಯೊಂದಿಗೆ ಸಿದ್ಧರಾಗಿದ್ದರು. ಸುಮಾರು 4.30 ಕ್ಕೆ ಆರಂಭಗೊಂಡ ಬೃಹತ್ ಮೆರವಣಿಗೆಯ ನೇತೃತ್ವವನ್ನು ಕಾಂ. ಆರ್. ಶ್ರೀನಿವಾಸ್‌ರವರು ವಹಿಸಿದ್ದರು. ಕೆ.ಆರ್. ಪುರಂ ನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಆಯ್ದು ಬಹಿರಂಗ ಸಭೆ ನಡೆಯುವ ಸ್ಥಳಕ್ಕೆ ಬಂದು ಸೇರುವ ಮುನ್ನ ಸುಮಾರು 3 ಕಿ.ಮಿ. ಸಾಗಿತ್ತು. ಮೆರವಣಿಗೆ ಯುಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿತ್ತು. ಮೆರವಣಿಗೆಯ ಮುಂಚೂಣಿಯಲ್ಲಿ ಕಾಂ. ಪಿ. ಮುನಿರಾಜುರವರು ಕೆಂಪು ಸಮವಸ್ತ್ರದ ಸ್ವಯಂ ಸೇವಕರ ತಂಡದ ಸೇನಾನಿಯಾಗಿ, ಶಿಸ್ತಿನಿಂದ ಮೆರವಣಿಗೆಯಲ್ಲಿ ಹಾದು ಹೋಗಲು ಮಾರ್ಗದರ್ಶಿಯಾಗಿದ್ದರು. ಎರಡನೇ ದಿನವು ಕೂಡ ಧ್ವಜಾರೋಹಣಕ್ಕೆ ಮುನ್ನ, ಟಿನ್‌ಫ್ಯಾಕ್ಟರಿ ಬಸ್ ನಿಲ್ದಾಣದಿಂದ 300 ಕ್ಕೂ ಹೆಚ್ಚಿನ ಕೆಂಪು ಸಮವಸ್ತ್ರ ತೊಟ್ಟ ಕಾರ್ಮಿಕರು, ಉದಯನಗರದ ಮುಖ್ಯರಸ್ತೆಯಲ್ಲಿ ಹಾದು ಬಂದು, ಸಮ್ಮೇಳನದ ಸಭಾಂಗಣ ಸೂರಿ ಭವನದ ವರೆವಿಗೂ ಮೆರವಣಿಗೆಯಲ್ಲಿ ಭಾಗವಹಿಸಿದ್ದು ಸಮ್ಮೇಳನದ ಆರಂಭಕ್ಕೆ ಹೊಸ ಹುಮ್ಮಸ್ಸು ಉತ್ಸಾಹವನ್ನು ತುಂಬುವಲ್ಲಿ ಹಾಗೂ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ್ದ ಪ್ರತಿನಿಧಿಗಳನ್ನು ಸ್ವಾಗತಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿತ್ತು.

ಬಹಿರಂಗ ಸಭೆ :

ಸಂಜೆ 5.30 ಕ್ಕೆ ಮೆರವಣಿಗೆ ಬಹಿರಂಗ ಸಭೆ ನಡೆಯುವ ವೇದಿಕೆಯ ಬಳಿ ಬಂದು ಸೇರಿತು. ಕಾಂ. ಹೆಚ್.ಎನ್. ಗೋಪಾಲಗೌಡರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹಿರಿಯ ಕಾರ್ಮಿಕ ಮುಖಂಡರು ಆದ, ಕಾಂ. ವಿಜೆಕೆ ನಾಯರ್, ಕಾಂ. ಮೀನಾಕ್ಷಿ ಸುಂದರಂ, ಕಾಂ. ಕೆ.ಎನ್. ಉಮೇಶ್ ಹಾಗೂ ಉತ್ತರ ಜಿಲ್ಲಾ ಕಾರ್ಯದರ್ಶಿಯವರಾದ ಕಾಂ. ಆರ್. ಶ್ರೀನಿವಾಸ್‌ರವರು, ಮುಖ್ಯ ಭಾಷಣಕಾರರಾಗಿದ್ದರು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಕಾಂ. ವೆಂಕಟೇಶ್‌ಗೌಡರು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಗೌರಮ್ಮನವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗೋಪಾಲಕೃಷ್ಣ ಅರಳಹಳ್ಳಿ, ಕಾಂ. ಪ್ರತಾಪ್‌ಸಿಂಹ, ಕಾಂ. ಟಿ. ಲೀಲಾವತಿ ಹಾಗೂ ಪೂರ್ವ ವಲಯ ಸಮಿತಿಯ ವತಿಯಿಂದ ಕಾಂ. ಶರಣಪ್ಪ, ಕಾಂ. ನಂಜೇಗೌಡ, ಕಾಂ. ಸಿ. ರಮೇಶ್, ಕಾಂ. ವಾರಿಯರ್, ಕಾಂ. ರಾಮನಾಥನ್‌ರವರು ಉಪಸ್ಥಿತರಿದ್ದರು.

ಕಾಂ. ಪಿ. ಮುನಿರಾಜುರವರು ಸ್ವಾಗತ ಭಾಷಣ ಮಾಡುವುದರ ಮೂಲಕ ಎಲ್ಲರನ್ನೂ ವೇದಿಕೆಗೆ ಆಹ್ವಾನಿಸಿದರು, ಕಾಂ. ಎಸ್. ಮುನಿರಾಜುರವರು ನಿರೂಪಣೆ ನಡೆಸಿಕೊಟ್ಟರು. ಕಾಂ. ಎನ್. ನಾಗರಾಜರವರು ಪ್ರಾಸ್ತಾವಿಕವಾಗಿ ಕೆಲವು ಮಾತನಾಡಿ ಸಮ್ಮೇಳನದ ಉದ್ದೇಶಗಳನ್ನು ತಿಳಿಸಿದರು.

ಬಹಿರಂಗ ಸಭೆಯ ಮುಖ್ಯಭಾಷಣಕಾರರಾಗಿ, ಕಾಂ. ವಿಜೆಕೆ ನಾಯರ್‌ರವರು ಮಾತನಾಡಿ ಸಿಪಿಐ(ಎಂ) ಸಮ್ಮೇಳನಗಳಿಗೆ ಇರುವ ಮಹತ್ವವನ್ನು ತಿಳಿಸುತ್ತಾ, ಮುಂದಿನ ಏಪ್ರಿಲ್ ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿರುವ ಅಖಿಲ ಬಾರತ ಮಟ್ಟದ ಅಧಿವೇಶನಕ್ಕೆ ಮುನ್ನ ಜನವರಿ ತಿಂಗಳಿನಲ್ಲಿ ಮೂಡಬಿದರೆಯಲ್ಲಿ ರಾಜ್ಯದ ಸಮ್ಮೇಳನ ನಡೆಯಲ್ಲಿದ್ದು ಅದಕ್ಕೆ ಪೂರ್ವ ಬಾವಿಯಾಗಿ ಜಿಲ್ಲಾ ಸಮ್ಮೇಳನಗಳು ನಡೆಯುತ್ತವೆ. ಇದಕ್ಕೆ ಮುನ್ನ, ಶಾಖಾ ಘಟಕಗಳು, ವಲಯ, ತಾಲ್ಲೂಕು ಮಟ್ಟದಲ್ಲಿ ಸಮ್ಮೇಳನಗಳು ನಡೆಯುವ ಪ್ರಕ್ರಿಯೆಗಳು ನಮ್ಮ ಪಕ್ಷದಲ್ಲಿನ ಪ್ರಜಾಸತ್ತಾತ್ಮಕ

ಪುಟ 15 ಕ್ಕೆ

ಸಂಘ ಗ್ಯಾಂಗಿನ ರಾತ್ರಿ ಗೂಂಡಾಗಿರಿ

ಬಹಿರಂಗ ಸಭೆಯು ರಾತ್ರಿ 8 ರವರೆಗೆ ನಡೆಯಿತು. ಬಹಿರಂಗ ಸಭೆಯ ನಂತರ ಸ್ಥಳದಲ್ಲಿ ಹಾಕಿದ್ದ ಕಾಂ. ಪಿಣರಾಯಿ ವಿಜಯನ್‌ರವರ ಮತ್ತು ಕೇರಳ ಸರ್ಕಾರದ ಜನಪರ ಕಾರ್ಯಕ್ರಮಗಳ ಸಾಧನೆ ಬಗ್ಗೆ ಹಾಕಿದ್ದ ಬ್ಯಾನರ್ (ಫ್ಲೇಕ್ಸ್) ಅನ್ನು ಕೆಲ ದುಷ್ಕರ್ಮಿಗಳು ಪಕ್ಷದ ಹೆಸರನ್ನು ಕಿತ್ತು ಹಾಕಿ ಕಾಂ.ಪಿನರಾಯಿರವರ ಚಿತ್ರವನ್ನು ಭಂಗ ಮಾಡಿದ್ದಾರೆ. ಇದು ಯಾರ ಕೃತ್ಯ ಎಂಬುದು ಊಹಿಸಲು ಅಸಾಧ್ಯವೆನ್ನಲ್ಲ. ಸಿಪಿಐ(ಎಂ)ನ್ನು ವಿರೋಧಿಸುವ ಕೋಮುವಾದ ಸಂಘ ಗ್ಯಾಂಗಿನ ಕುಕೃತ್ಯವಾಗಿದೆ. ವಿಚಾರಗಳಿಂದ ಎದುರಿಸಲಾಗದವರು ರಾತ್ರಿಯಲ್ಲಿ ಕದ್ದು ಮುಚ್ಚಿ ಮಾಡುವ ಇವರ ನೀಚ ಕೆಲಸವನ್ನು ನಿಚ್ಚಳ ಬೆಳಕಿನಲ್ಲಿ ಎದುರಿಸಲು ಸಮ್ಮೇಳನ ಪಣತೊಟ್ಟಿದೆ.



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**